

ದುಡಿವ ಜನರ ಪ್ರಾಣ ಮಿತ್ರ

ಐಕ್ಯರಂಗ

ಸಂಪುಟ 27 ಸಂಚಿಕೆ 32 ಆಗಸ್ಟ್ 07, 2005 ಬೆಲೆ ರೂ. 3.00





ಜಾಗತೀಕರಣವೆಂಬೋ ಮಾರಿಹಬ್ಬಕ್ಕೆ ಪ್ರತಿರೋಧ

ನವ - ಉದಾರವಾದ ಮತ್ತು ವಸಾಹತುಶಾಹಿ

ಸೆಪ್ಟೆಂಬರ್ 29, ಸಾರ್ವತ್ರಿಕ ಮುಷ್ಕರ



ಹೊಂಡಾ ಕಾರ್ಮಿಕರ ಮೇಲೆ ಹರ್ಯಾಣ ಸರ್ಕಾರದ ಗೂಂಡಾಗಿರಿ



ಇಮ್ರಾನಾ ಮತ್ತು ಫತ್ವಾ



- 'ಹಿರೋಶಿಮಾ ಮತ್ತೆಂದೂ ಬೇಡ'
- ಹೋರಾಟದ ಹಾದಿಯಲ್ಲಿ - ಸಾರ್ವಜನಿಕ ವಲಯದ ಕಾರ್ಮಿಕರು
- ಮಕ್ಕಳ ನಾಟಕೋತ್ಸವ : ಪ್ರೋಲಿ ಕಿಟ್ಟಿ ಬಗ್ಗೆ ಅನಿಸಿಕೆ



ಪ್ರಧಾನಮಂತ್ರಿ ಮನಮೋಹನ ಸಿಂಗ್‌ರವರು ಇತ್ತೀಚೆಗೆ ಬ್ರಿಟನ್ನಿನ ಆಕ್ಸ್‌ಫರ್ಡ್‌ನಲ್ಲಿ ಗೌರವ ಡಿ.ಲಿಟ್ ಪದವಿ ಪಡೆಯುತ್ತಾ ವಸಾಹತುಶಾಹಿಯ 'ಉತ್ತಮ ಆಡಳಿತ'ದ ಬಗ್ಗೆ ಮಾಡಿದ ಟಿಪ್ಪಣಿಗಳು ವಿವಾದ ಸೃಷ್ಟಿಸಿವೆ. ವಾಸ್ತವವಾಗಿ ಇದು ನವ-ಉದಾರವಾದದ ವಿರುದ್ಧ ಹೋರಾಟ-ಹಿಂದಿನ ವಸಾಹತುಶಾಹಿಯ ವಿರುದ್ಧದ ನಮ್ಮ ಸ್ವಾತಂತ್ರ್ಯ ಹೋರಾಟದ ಮುಂದುವರಿಕೆ ಎಂಬುದನ್ನು ಸಾಬೀತು ಮಾಡಿದೆ ಎನ್ನುತ್ತಾರೆ ಪ್ರಖ್ಯಾತ ಅರ್ಥಶಾಸ್ತ್ರಜ್ಞ ಡಾ. ಪ್ರಭಾತ್ ಪಟ್ನಾಯಕ್

ನವ-ಉದಾರವಾದ ಮತ್ತು ವಸಾಹತುಶಾಹಿ

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ನಮ್ಮ ಪ್ರಧಾನಮಂತ್ರಿಗಳಿಗೆ ಗೌರವ ಡಿ.ಲಿಟ್ ಪದವಿ ನೀಡಿ ಸನ್ಮಾನಿಸಿದಾಗ ಅದಕ್ಕೆ ಕೃತಜ್ಞತೆ ಅರ್ಪಿಸುತ್ತಾ ಮಾತನಾಡಿದ ಡಾ. ಮನಮೋಹನ ಸಿಂಗ್ ನಾವು ಈಗ ಬಹುವಾಗಿ ಗೌರವಿಸುತ್ತಿರುವ ಆಧುನಿಕ ವಿಶ್ವವಿದ್ಯಾಲಯಗಳು, ನಾಗರಿಕ ಸೇವಾ ವ್ಯವಸ್ಥೆ, ಸಂಶೋಧನಾ ಪ್ರಯೋಗಾಲಯಗಳು, ಕಾನೂನಿನ ಆಳ್ವಿಕೆ, ಮುಕ್ತ ಪತ್ರಿಕಾರಂಗ ಈ ಎಲ್ಲಾ 'ಒಳ್ಳೆಯ ಆಳ್ವಿಕೆ' - ಭಾರತ 'ಆ ಕಾಲದ ಪ್ರಮುಖ ಸಾಮ್ರಾಜ್ಯ'ವನ್ನು ಸಂಧಿಸಿದುದರ ಫಲ ಎಂದು ಉದ್ಗರಿಸಿದರಂತೆ.

ಆದರೆ ಭಾರತವು ಬ್ರಿಟಿಷ್ ಸಾಮ್ರಾಜ್ಯವನ್ನು 'ಸಂಧಿಸ'ಲಿಲ್ಲ. ಬ್ರಿಟನ್ ಭಾರತವನ್ನು ವಶಪಡಿಸಿಕೊಂಡು ವಸಾಹತುವನ್ನಾಗಿ ಮಾಡಿತು, ಅದನ್ನು ಆರ್ಥಿಕವಾಗಿ ಕೊಳ್ಳೆ ಹೊಡೆಯಿತು ಮತ್ತು ಮೊದಲ ಬಾರಿಗೆ ಭಾರತೀಯರನ್ನು ಇಡಿಯಾಗಿ ತಮ್ಮ ದೇಶದಲ್ಲಿಯೇ ಬ್ರಿಟಿಷರು ಕೆಳದರ್ಜೆಗಿಳಿಸಿದರು ಎಂಬುದನ್ನು ಮರೆಯಲು ಸಾಧ್ಯವೇ? ಯಾವುದೇ ಮೇಲ್ಮಟ್ಟದ ಉತ್ಪಾದನಾ ವ್ಯವಸ್ಥೆ ಕೆಳಮಟ್ಟದ ಉತ್ಪಾದನಾ ವ್ಯವಸ್ಥೆಯನ್ನು ಅಧೀನಗೊಳಿಸಿಕೊಂಡಾಗ ಸಹಜವಾಗಿಯೇ ಮೇಲ್ಮಟ್ಟದ ವ್ಯವಸ್ಥೆಯ ಮುಂದುವರೆದ ವಿಧಾನಗಳನ್ನು ಇಲ್ಲಿಯೂ ಅಳವಡಿಸಲಾಗುತ್ತದೆ. ಇದು ಚಾರಿತ್ರಿಕ ಅನಿವಾರ್ಯತೆ. ಇದನ್ನು ಅಧೀನಪಡಿಸಿಕೊಂಡಾಗ ಅದನ್ನು ಹಿರಿಮೆಯೆನ್ನಲು ಸಾಧ್ಯವಿಲ್ಲ ಎನ್ನುತ್ತಾರೆ ಪ್ರಸಿದ್ಧ ಅರ್ಥಶಾಸ್ತ್ರಜ್ಞ ಹಾಗೂ ಚಿಂತಕ ಡಾ. ಪ್ರಭಾತ್ ಪಟ್ನಾಯಕ್.

ಕಾರ್ಲ್ ಮಾರ್ಕ್ಸ್‌ರವರೂ ಬ್ರಿಟಿಷ್ ವಸಾಹತುಶಾಹಿಯ 'ದ್ವಿಪಾತ್ರ' ದ ಬಗ್ಗೆ ಹೇಳಿಲ್ಲವೇ, ಅದರಲ್ಲೊಂದು 'ಪುನರುಜ್ಜೀವನಕಾರಿ' ಪಾತ್ರವಲ್ಲವೇ ಎಂದು ಕೇಳಬಹುದು. ನಿಜ, ಮಾರ್ಕ್ಸ್‌ರವರು 'ಪುನರುಜ್ಜೀವನ' ಪಾತ್ರದ ಬಗ್ಗೆ ಹೇಳಿದ್ದಾರೆ. ಆದರೆ ಹಾಗೆ ಹೇಳುವಾಗ 'ಭಾರತದ ಮುನ್ನಡೆಯ ಭೌತಿಕ ಆಧಾರವನ್ನು ಬಲಿ ಹಾಕಲಾಗುತ್ತಿದೆ. ಆದರೆ ಈ ಆಧಾರದಲ್ಲಿ ನಿಜವಾದ ಮುನ್ನಡೆ ಈಡೇರುವುದು ಸ್ವತಃ ಭಾರತೀಯರಿಂದ ಮಾತ್ರವೇ. ಅವರು ವಸಾಹತುಶಾಹಿ ಆಳ್ವಿಕೆಯನ್ನು ಕಿತ್ತೊಗೆದಾಗ' ಎಂದೂ ಅವರು ಸೂಚಿಸಿದ್ದಾರೆ. ಬ್ರಿಟಿಶ್ ಆಳ್ವಿಕೆ 'ಒಂದೆಡೆ ವ್ಯಕ್ತಿಗಳನ್ನು, ಜನತೆಯನ್ನು ನೆತ್ತರು ಮತ್ತು ಕೊಚ್ಚೆಯ ಮೂಲಕ ದುರ್ಗತಿ ಮತ್ತು ಅವನತಿಯ ಮೂಲಕ ಎಳೆದೊಯ್ಯುತ್ತಿದ್ದರೆ' ಇನ್ನೊಂದೆಡೆ ಅದು ಚಾರಿತ್ರಿಕ ಬದಲಾವಣೆಯ 'ಪ್ರಜ್ಞಾಪೂರ್ವಕವಲ್ಲದ ಸಾಧನ' ವಾಗಿತ್ತು ಎಂದು ಮಾರ್ಕ್ಸ್ ಒತ್ತಿ ಹೇಳಿದ್ದಾರೆ.

ಮೂಲಭೂತ ಗೊಂದಲ

ಇದನ್ನು 'ಒಳ್ಳೆಯ ಆಳ್ವಿಕೆ' ಎಂದು ಹೇಳುವುದು ಕೇವಲ ಅಕ್ಷೇಪಾರ್ಹ ಹೇಳಿಕೆಯಷ್ಟೇ ಅಲ್ಲ, ಇದು ಚಾರಿತ್ರಿಕ ಯಾವುದು, ನೈತಿಕ ಯಾವುದು ಎಂಬುದನ್ನು ಅರಿಯಲಾಗದ ಮೂಲಭೂತ ಗೊಂದಲದ ಫಲ ಎಂದು ಡಾ. ಪ್ರಭಾತ್ ಪಟ್ನಾಯಕ್ ಹೇಳುತ್ತಾರೆ. 'ಉತ್ತಮ ಆಳ್ವಿಕೆ' ಎಂದರೆ ಆದರಲ್ಲಿ ಆಳುವ ಮಂದಿಯಲ್ಲಿ 'ಒಳಿತು' ಮಾಡುವ ಆಶಯವಿರಬೇಕು ತಾನೆ? ಆದರೆ ಭಾರತದಲ್ಲಿ ಬ್ರಿಟಿಶ್ ಆಳ್ವಿಕೆಯ ಪ್ರಗತಿಪರ ಕ್ರಮಗಳೆಲ್ಲವೂ, ಅದು ರೈಲು ಹಳಿಗಳನ್ನು ಹಾಕಿದ್ದಾಗಲೀ, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದಾಗಲೀ, ಬ್ರಿಟಿಶ್ ಸಾಮ್ರಾಜ್ಯಶಾಹಿಯು ರಾಜಕೀಯವಾಗಿ ಒಂದಾದ ಭಾರತವನ್ನು ಸೃಷ್ಟಿಸಿದ್ದಾಗಲೀ, ಸುಲಿಗೆಕೋರ ವಸಾಹತುಶಾಹಿ ಹಿತಾಸಕ್ತಿಗಳನ್ನು ಈಡೇರಿಸಿಕೊಳ್ಳಲು ಎಂಬುದನ್ನು ಮರೆಯಲು ಸಾಧ್ಯವೇ?

ಡಾ. ಸಿಂಗ್‌ರು ಬಹುವಾಗಿ ಹೊಗಳುವ ಅಧಿಕಾರಶಾಹಿಯನ್ನು ರಚಿಸಿದ್ದು ಈ ಕೊಳ್ಳೆಗೆ 'ಉಕ್ಕಿನ ಚೌಕಟ್ಟು' ಒದಗಿಸಲು, ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದ್ದು ವಸಾಹತುಶಾಹಿಗೆ ಅಡಿಯಾಳಾದ ಒಂದು ಬುದ್ಧಿಜೀವಿ ವರ್ಗವನ್ನು ಸೃಷ್ಟಿಸಲಿಕ್ಕಾಗಿ ಹಾಗೂ



ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಪ್ರಧಾನಿ ಮನಮೋಹನ್ ಸಿಂಗ್

ರೈಲ್ವೆ ಹಳಿಗಳನ್ನು ಹಾಕಿಸಿದ್ದು ಭಾರತವನ್ನು ವಸಾಹತುಶಾಹೀ ಶ್ರಮ ವಿಭಜನೆಯೊಳಗೆ ಅಳವಡಿಸಿಕೊಳ್ಳಲಿಕ್ಕಾಗಿ. ಇದರಿಂದಾಗಿಯೇ ಮಾರ್ಕ್ಸ್‌ರವರು ಈ ರೈಲು ವ್ಯವಸ್ಥೆಯ 'ಪುನರುಜ್ಜೀವನಕಾರಿ' ಪಾತ್ರವನ್ನು ಹೇಳುವಾಗಲೇ ಅದು ಭಾರತೀಯರಿಗೆ 'ನಿಷ್ಪ್ರಯೋಜಕ' ಎಂದಿದ್ದರು. ಏಕೆಂದರೆ ಬ್ರಿಟಿಷರು ಕೇವಲ ತಮ್ಮ ಸ್ವಾರ್ಥಕ್ಕಾಗಿ ಅದನ್ನು ಆರಂಭಿಸಿದ್ದರು. ಆಗ ಭಾರತೀಯರಿಗೆ ಅದರಿಂದ ತಕ್ಷಣದ ಪ್ರಯೋಜನವೇನೂ ಇರಲಿಲ್ಲ. ಇದೇ 'ಚಾರಿತ್ರಿಕವಾಗಿ ಪ್ರಗತಿಪರ' ಹಾಗೂ 'ನೈತಿಕವಾಗಿ ಅಪೇಕ್ಷಣೀಯ'ದ ನಡುವಿನ ವ್ಯತ್ಯಾಸ. ಇದರ ಬಗ್ಗೆ ಗೊಂದಲವೇ ಡಾ. ಸಿಂಗ್‌ರ ತರ್ಕದಲ್ಲಿರುವ ಮೊದಲ ದೋಷ ಎನ್ನುತ್ತಾರೆ ಡಾ. ಪಟ್ನಾಯಕ್.

'ನೆತ್ತರು ಮತ್ತು ಕೊಚ್ಚೆ'

ಎರಡನೇ ಮೂಲಭೂತ ದೋಷವೆಂದರೆ ಮಾರ್ಕ್ಸ್ ಹೇಳಿದ 'ನೆತ್ತರು ಮತ್ತು ಕೊಚ್ಚೆ' ಯನ್ನು ಮರೆಯುವುದು. ವಸಾಹತುಶಾಹಿ ಮೂಲಭೂತವಾಗಿ ಸುಲಿಗೆಕೋರ ಆಳ್ವಿಕೆಯಾಗಿತ್ತು. ಅದು ಲಕ್ಷಾಂತರ ಜನರನ್ನು ಬಲಿತೆಗೆದುಕೊಂಡ ಬರಗಳನ್ನು ಸೃಷ್ಟಿಸಿತು. ಇಂತಹ ಬರಗಳ ನಡುವೆಯೂ ತೆರಿಗೆ ವಸೂಲಿ ಮಾಡಿದ ಕಲೆಕ್ಟರುಗಳನ್ನು ಅಭಿನಂದಿಸಿತು. ಇದ್ದ ಕೈಗಾರಿಕೆಗಳ ನಾಶವನ್ನು ಆರಂಭಿಸಿತು ಮತ್ತು ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ತಂದಿತು. ರೈತರನ್ನು ಹಿಂಡಿಹಿಪ್ಪೆ ಮಾಡಿತು. ಹೀಗಿರುವಾಗ ಕೇವಲ ವಸಾಹತುಶಾಹಿಯ 'ಪ್ರಗತಿಪರ' ಪರಿಣಾಮಗಳ ಮೇಲಷ್ಟೇ ಒತ್ತು ನೀಡುವುದು, ಅಲ್ಲದೆ ಅವು 'ಕರುಣಾಳು ಆಶಯ' ದಿಂದ ಎನ್ನುವುದು ಕಟು ನಿರ್ದಯತೆ ಎಂದೇ ಹೇಳಬೇಕಾಗುತ್ತದೆ ಎಂದು ಡಾ. ಪ್ರಭಾತ್ ಪಟ್ನಾಯಕ್ ಅಭಿಪ್ರಾಯ ಪಡುತ್ತಾರೆ.

ನಿಜ, ಡಾ. ಮನಮೋಹನ್ ಸಿಂಗ್ ಒಂದು ಪದವಿಯನ್ನು ಸ್ವೀಕರಿಸುತ್ತಿರುವಾಗ ವಸಾಹತುಶಾಹಿಯ ಬಗ್ಗೆ ಈ ಎಲ್ಲಾ ದೂರುಗಳನ್ನು ಹೇಳಬೇಕು ಎಂದೇನೂ ನಾನು ನಿರೀಕ್ಷಿಸುವುದಿಲ್ಲ. ಆದರೆ ವಸಾಹತುಶಾಹೀ ಶೋಷಣೆಯ ಬಗ್ಗೆ ಪ್ರಸ್ತಾಪಿಸಲು ಸಾಧ್ಯವಿಲ್ಲದಿದ್ದರೆ, ಅದಕ್ಕೆ ಸರ್ಟಿಫಿಕೇಟ್ ನೀಡುವ ಅಗತ್ಯವಾದರೂ ಇತ್ತೇ?

ಈ ದೋಷಗಳು ಆಕಸ್ಮಾತ್ತಾಗಿ ಸಂಭವಿಸಿದ ದೋಷಗಳಲ್ಲ. ನವ ಉದಾರವಾದಿ ವಿಚಾರಧಾರೆಯ ನೇರ ಅಭಿವ್ಯಕ್ತಿಯಿದು. ಡಾ. ಪಟ್ನಾಯಕ್ ಹೇಳುವಂತೆ ನವ-ಉದಾರವಾದಿ ವಿಚಾರಧಾರೆಯಲ್ಲಿ ' ಉತ್ತಮ ಆಳ್ವಿಕೆ'ಯನ್ನು 'ಶೋಷಣೆ'ಯ ಜತೆಗಿಟ್ಟು ನೋಡಬಾರದು, ಪ್ರತ್ಯೇಕವಾಗಿ ನೋಡಬೇಕು. ಅಂದರೆ ಒಂದು ಆಳ್ವಿಕೆ ಎಷ್ಟೇ ನಿರ್ದಯ ಶೋಷಕ ಆಳ್ವಿಕೆಯಾಗಲಿ, ಆ ಕಾರಣಕ್ಕೆ ಅದನ್ನು 'ಒಳ್ಳೆಯ ಆಳ್ವಿಕೆ' ಅಲ್ಲ ಎನ್ನಲಾಗದಂತೆ! ಆದ್ದರಿಂದ ಡಾ. ಮನಮೋಹ ಸಿಂಗ್ ವಸಾಹತುಶಾಹಿಗೆ 'ಒಳ್ಳೆಯ ಆಳ್ವಿಕೆ' ಯ ಸರ್ಟಿಫಿಕೇಟ್ ನೀಡಿದ್ದರೆ ಅದು ಅದರ ನವ-ಉದಾರವಾದಿ ವಿಚಾರಧಾರೆಗೆ ಅನುರೂಪವಾಗಿಯೇ ಇದೆ.

'ಒಳ್ಳೆಯ ಆಳ್ವಿಕೆ' ಎಂದರೇನು?

ಇದು ಹೇಗೆ ಎಂಬುದನ್ನು ಡಾ. ಪಟ್ನಾಯಕ್ ಹೀಗೆ ವಿವರಿಸುತ್ತಾರೆ - 'ನವ ಉದಾರವಾದಿ ವಿಚಾರಧಾರೆಯಲ್ಲಿ ಎರಡು ಮೂಲ ತರ್ಕಗಳಿವೆ. ಒಂದು, ಸಮಾಜದಲ್ಲಿ ಎಷ್ಟೇ ಅಸಮಾನತೆ ಇರಲಿ, ಆರ್ಥಿಕ ತ್ವರಿತವಾಗಿ ಬೆಳೆಯುತ್ತಿದ್ದರೆ ಅದರ ಪ್ರಯೋಜನಗಳು ಕ್ರಮೇಣ ಕೆಳಮಟ್ಟಕ್ಕೂ ಹನಿ-ಹನಿಯಾಗಿ ಜಿನುಗುತ್ತವೆ. ಇಲ್ಲಿ ಅಸಮಾನತೆ ಎಂಬುದು ಶೋಷಣೆಯನ್ನು ನಯವಾಗಿ ಬಿಂಬಿಸುವ ಪದ ಎಂಬುದನ್ನು ಗಮನಿಸಬೇಕು. ಅಂದರೆ ನಾವು 'ಬೆಳವಣಿಗೆ'ಯ ಮೇಲೆ ಗಮನಹರಿಸಬೇಕೇ ವಿನಃ ಅಸಮಾನತೆ (ಅಂದರೆ ಶೋಷಣೆ) ಮೇಲಲ್ಲ! ಎರಡು, 'ಬೆಳವಣಿಗೆ ತರುವುದು ಉದ್ದಿಮೆ ಸಮೃದ್ಧಗೊಳ್ಳಲು ಸೂಕ್ತ ಸನ್ನಿವೇಶಗಳನ್ನು ನಿರ್ಮಿಸುವುದು. ಅಂದರೆ ಸೂಕ್ತ ಮೂಲರಚನೆ, ಬೂರ್ಜ್ವಾ ಆಸ್ತಿ ಹಕ್ಕುಗಳ ಸ್ಪಷ್ಟ ನಿರೂಪಣೆ, ಆ ಹಕ್ಕುಗಳ ಜಾರಿಗೆ ಅಗತ್ಯವಾದ ಕಾನೂನು ವ್ಯವಸ್ಥೆ, ರಾಜಕೀಯ ಐಕ್ಯತೆ, ಸ್ಥಿರತೆ, ಸಂಪನ್ಮೂಲಗಳ ಹಾಗೂ ಬಂಡವಾಳದ ಸುಲಭ ಚಲನೆಗೆ ಸ್ವಾತಂತ್ರ್ಯ, ಅದಕ್ಕೆ ಸೂಕ್ತ ವಾತಾವರಣ ಕಲ್ಪಿಸುವ ಒಂದು ದಕ್ಷ ಅಧಿಕಾರಶಾಹಿ ಹಾಗೂ ಎಲ್ಲಕ್ಕೂ ಮಿಗಿಲಾಗಿ ಮುಕ್ತ ಮಾರುಕಟ್ಟೆ. ಇವೆಲ್ಲವೂ 'ಒಳ್ಳೆಯ ಆಳ್ವಿಕೆ' ಯೆಂಬ ಪದದಲ್ಲಿ ಅಡಕವಾಗಿದೆ. ಈ 'ಒಳ್ಳೆಯ ಆಳ್ವಿಕೆ'ಗೂ ಶೋಷಣೆಗೂ ಏನೇನೂ ಸಂಬಂಧವಿಲ್ಲ! ಅತ್ಯಂತ ಸುಲಿಗೆಕೋರ ಶೋಷಣೆ ನಡೆಸುವ ಆಳ್ವಿಕೆಯನ್ನು 'ಒಳ್ಳೆಯ ಆಳ್ವಿಕೆ' ಯೆಂದು ಅಭಿನಂದಿಸಲು ಸಾಧ್ಯವೇ? ನವ ಉದಾರವಾದಿ ಚಿಂತನೆಯ ಪ್ರಕಾರ ಸಾಧ್ಯ! ವಾಸ್ತವವಾಗಿ ಹೀಗೆ ಅಭಿನಂದಿಸಿದಾಗ ಶೋಷಣೆಯ ಮೊನಚು ಮೊಂಡಾಗುತ್ತದೆ ತಾನೇ?

ಬ್ರಿಟಿಷ್ ವಸಾಹತುಶಾಹಿ ಮೇಲೆ ಹೇಳಿದ 'ಒಳ್ಳೆಯ ಆಳ್ವಿಕೆ'ಯನ್ನು ಕೊಟ್ಟಿಲ್ಲವೇ ? ಅದನ್ನು ತನ್ನ ಸ್ವಾರ್ಥಕ್ಕಾಗಿ ಭಾರತೀಯ ಜನತೆಯ ಶೋಷಣೆಗಾಗಿ ಮಾಡಿದ್ದರೇನಂತೆ? ನವ ಉದಾರವಾದಿ ಚಿಂತನೆಯ ಪ್ರಕಾರ ಅದು 'ಒಳ್ಳೆಯ ಆಳ್ವಿಕೆ'ಯೇ!

ಎಡಪಂಥೀಯ ನಿಲುವಿಗೆ ಪರೋಕ್ಷ ಬೆಂಬಲ!

ಇದರಲ್ಲಿ ಡಾ. ಪ್ರಭಾತ್ ಪಟ್ನಾಯಕ್‌ರ ಪ್ರಕಾರ ಒಂದು ಕುತೂಹಲಕಾರಿ ಅಂಶವೂ ಇದೆ. ಒಂದು ರೀತಿಯಲ್ಲಿ ಡಾ.ಮನಮೋಹನ್ ಸಿಂಗ್, ಎಡಪಂಥೀಯರು ಈ ಜಾಗತೀಕರಣದ ಅವಧಿಯಲ್ಲಿ ಹೇಳುತ್ತಾ ಬಂದಿರುವುದನ್ನು ಬೆಂಬಲಿಸಿದ್ದಾರೆ ಎನ್ನುತ್ತಾರೆ ಅವರು. ಹೌದು, ನಾವು ಎಡಪಂಥೀಯರು, ಈ ನವಉದಾರವಾದ ನಮ್ಮ ಆರ್ಥಿಕದ ಮರುವಸಾಹತೀಕರಣದ ಒಂದು ಸಾಧನ, ಹೊಸ ಅಂತರ್ರಾಷ್ಟ್ರೀಯ ವ್ಯವಸ್ಥೆಯಲ್ಲಿ ಸಾಮ್ರಾಜ್ಯಶಾಹಿ ಮತ್ತು ಅವರ ದೇಶೀ ಶಾಮೀಲುಕೋರರು ದೇಶದ ಆರ್ಥಿಕವನ್ನು ಇನ್ನಷ್ಟು ಶೋಷಣೆಗೆ ತೆರೆಯುವ ಸಾಧನ ಎಂದು ಹೇಳುತ್ತಾ ಬಂದಿದ್ದೇವೆ. ಡಾ. ಮನಮೋಹನ ಸಿಂಗ್ ಇದನ್ನು ಒಪ್ಪಿಕೊಳ್ಳುವಂತೆ ಕಾಣುತ್ತದೆ. 'ನಾವು ಎಡಪಂಥೀಯರು ನವ-ಉದಾರವಾದಗಳನ್ನು ವಿರೋಧಿಸುತ್ತೇವೆ - ಏಕೆಂದರೆ ಅದು ವಸಾಹತುಶಾಹಿಯ ಭೀಕರತೆಯ ಮರುಸೃಷ್ಟಿ ಮಾಡುತ್ತದೆ; ಮನಮೋಹನ್ ಸಿಂಗ್ ನವ ಉದಾರವಾದವನ್ನು ಬೆಂಬಲಿಸುವುದರಿಂದ ಆ ಭೀಕರತೆಯನ್ನು (ಪರೋಕ್ಷವಾಗಿ) ವಿರೋಧಿಸುತ್ತಾರೆ. ಅವರ ಆಕ್ಸ್‌ಫರ್ಡ್ ಭಾಷಣ, ನವ- ಉದಾರವಾದದ ವಿರುದ್ಧ ಹೋರಾಟ, ನಮ್ಮ ಸ್ವಾತಂತ್ರ್ಯ ಹೋರಾಟದ ಮುಂದುವರಿಕೆಯಷ್ಟೇ ಎಂಬ ಬಗ್ಗೆ ಸಂದೇಹವಿದ್ದವರಿಗೆ ಈಗಲಾದರೂ ಮನದಟ್ಟು ಮಾಡಿಕೊಡಬೇಕು' ಎಂಬ ಡಾ. ಪ್ರಭಾತ್ ಪಟ್ನಾಯಕರ ಮಾತು ಅರ್ಥಪೂರ್ಣವಾಗಿದೆಯಲ್ಲವೇ?

ಹೋರಾಟದ ಹಾದಿಯಲ್ಲಿ ಸಾರ್ವಜನಿಕ ವಲಯದ ಕಾರ್ಮಿಕರು...

ದೇಶದ ಸ್ವಾವಲಂಬನೆಯ ಆಧಾರವಾದ ಹೆಮ್ಮೆಯ ಸಾರ್ವಜನಿಕ ಕಾರ್ಖಾನೆಗಳನ್ನು ಜಾಗತೀಕರಣವೆಂಬ ಮಾರೀಹಬ್ಬದಲ್ಲಿ ಬಲಿಕೊಡುವ ಸರ್ಕಾರದ ನೀತಿಯನ್ನು ವಿರೋಧಿಸಿ - ಬೆಂಗಳೂರು ಮಹಾನಗರದ ಕಾರ್ಮಿಕರಿಗೆ ದಕ್ಕಬೇಕಾದ ನ್ಯಾಯಬದ್ಧ ಸೌಲಭ್ಯಗಳಿಗಾಗಿ ಸಾರ್ವಜನಿಕ ವಲಯದ ಕಾರ್ಮಿಕರ ಸಮಾವೇಶ ಯಶಸ್ವಿಯಾಗಿ ನಡೆದು ಹೋರಾಟದ ತೀರ್ಮಾನ ಕೈಗೊಳ್ಳಲಾಗಿದೆ.

ಒಂದು ಹೊಸ ಉತ್ಸಾಹದ-ಸ್ಫೂರ್ತಿಯ ವಾತಾವರಣದಲ್ಲಿ ಬೆಂಗಳೂರಿನ ಮತ್ತು ಸುತ್ತಮುತ್ತಲ ಸಾರ್ವಜನಿಕ ವಲಯದ ಕಾರ್ಖಾನೆಗಳ ಕಾರ್ಮಿಕರು ಒಂದೆಡೆ ಸೇರಿದ್ದರು. ಸಭಾಂಗಣ ಕಿಕ್ಕಿರಿದು ತುಂಬಿತ್ತು. ಬೆಂಗಳೂರು ಜಿಲ್ಲೆಯ ಸಾರ್ವಜನಿಕ ವಲಯದ ಕೈಗಾರಿಕೆಗಳ ಸಿಐಟಿಯು ಸಮನ್ವಯ ಸಮಿತಿಯು ಈ ಸಮಾವೇಶವನ್ನು ಸಂಘಟಿಸಿದ್ದರೂ ಸಹ, ಸಿಐಟಿಯು ಮಾತ್ರವಲ್ಲದೆ ನಿರೀಕ್ಷೆಗೂ ಮೀರಿ ಇತರ ಕಾರ್ಮಿಕ ಸಂಘಟನೆಗಳ ಹಾಗೂ ಸ್ವತಂತ್ರ ಕಾರ್ಮಿಕ ಸಂಘಟನೆಗಳ ಮುಖಂಡರು, ಕಾರ್ಮಿಕರೂ ಈ ಸಮಾವೇಶದಲ್ಲಿ ಪಾಲ್ಗೊಂಡಿದ್ದು ಈ ಸಮಾವೇಶದ ಯಶಸ್ಸಿಗೆ ಒಂದು ಸಾಕ್ಷಿಯಾಗಿತ್ತು.

ಜುಲೈ 27ರಂದು ನಗರದ ಮಿಥಿಕ್ ಸೊಸೈಟಿಯಲ್ಲಿ ನಡೆದ ಈ ಸಮಾವೇಶದ ಅಧ್ಯಕ್ಷತೆಯನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ.ವಿ.ಜೆ.ಕೆ ನಾಯರ್ ವಹಿಸಿದ್ದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರಸನ್ನ ಕುಮಾರ್, ಜಿಲ್ಲಾ ಉಪಾಧ್ಯಕ್ಷರಾದ ಎಚ್.ಎನ್.ಗೋಪಾಲಗೌಡ ಅವರಲ್ಲದೆ ಬಿಇಎಲ್, ಬಿಹೆಚ್‌ಇಎಲ್, ಹೆಚ್‌ಎಎಲ್, ಬಿಇಎಂಎಲ್ ಮತ್ತು ಬಿಇಎಂಎಲ್ ಕೆಜಿಎಫ್ ಘಟಕ ಮುಂತಾದ ವಿವಿಧ ಕಾರ್ಖಾನೆಗಳನ್ನು ಪ್ರತಿನಿಧಿಸುವ ಸಿಐಟಿಯು ಮತ್ತು ಇತರ ಕಾರ್ಮಿಕ ಸಂಘಗಳ ಮುಖಂಡರು ಪಾಲ್ಗೊಂಡು ಸಮಾವೇಶದಲ್ಲಿ ಮಾತನಾಡಿದರು. ಸಮಾವೇಶದಲ್ಲಿ ಸಿಐಟಿಯುನ ಅಖಿಲಭಾರತ ಅಧ್ಯಕ್ಷರಾದ ಕಾಂ. ಎಂ.ಕೆ.ಪಂಧೆಯವರು ಪಾಲ್ಗೊಂಡಿದ್ದು ಸಮಾವೇಶದ ಒಂದು ಪ್ರಮುಖ ಆಕರ್ಷಣೆಯಾಗಿತ್ತು.

ಖಾಸಗೀಕರಣ - ಜಾಗತೀಕರಣದ ಹುನ್ನಾರಗಳನ್ನು ಬಯಲಿಗೆಳೆಯಲು ಕರೆ :

ಈ ಸಂದರ್ಭದಲ್ಲಿ ಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಪಂಧೆಯವರು ಆಳುವ ಸರ್ಕಾರಗಳು ದೇಶದ ಹೆಮ್ಮೆಯ ಸಾರ್ವಜನಿಕ ಕಾರ್ಖಾನೆಗಳನ್ನು ಖಾಸಗೀಕರಣ ಮಾಡುವ ದುರುದ್ದೇಶದಿಂದ ಅವುಗಳ ಬಗೆಗೆ ಅಪಪ್ರಚಾರ ನಡೆಸುತ್ತಿವೆ. ಖಾಸಗಿ ಕ್ಷೇತ್ರವನ್ನು ದಕ್ಷ-ಸಮರ್ಥ ಎಂದೆಲ್ಲಾ ಬಿಂಬಿಸಲಾಗುತ್ತಿದೆ. ಖಾಸಗಿ ಕ್ಷೇತ್ರದ ಅದಕ್ಷತೆ-ವಂಚನೆ-ಭ್ರಷ್ಟಾಚಾರಗಳನ್ನು ಮರೆಮಾಚಲಾಗುತ್ತಿದೆ. ದೇಶದ ಹಿತಾಸಕ್ತಿಗಳಿಗೆ ಮಾರಕವಾದ ನೀತಿಯನ್ನು ಅನುಸರಿಸುತ್ತಿರುವ ಸರ್ಕಾರದ ವಿರುದ್ಧ ಕಾರ್ಮಿಕ ವರ್ಗ ಪ್ರಬಲ ಪ್ರತಿರೋಧ ರೂಪಿಸಬೇಕೆಂದು ಕರೆ ನೀಡಿದರು. ದೇಶದ ಸಾರ್ವಜನಿಕ ರಂಗ ದೇಶದ ಅಭಿವೃದ್ಧಿಗೆ ನೀಡಿದ ಕೊಡುಗೆಯನ್ನು ಹಾಗೂ ಈ ವಿಚಾರದಲ್ಲಿ ಖಾಸಗಿ ಕ್ಷೇತ್ರದ ದಯನೀಯ ವೈಫಲ್ಯವನ್ನು ಅವರು ಅಂಕಿ-ಸಂಖ್ಯೆಗಳ ಸಹಿತ ಎಳೆಎಳೆಯಾಗಿ ಬಿಡಿಸಿಟ್ಟರು.

ದೇಶ ಸ್ವಾತಂತ್ರ್ಯ ಗಳಿಸಿದಾಗ ಉಕ್ಕು-ರಾಸಾಯನಿಕ ಗೊಬ್ಬರ - ವಿದ್ಯುತ್, ಇತ್ಯಾದಿ ಅಭಿವೃದ್ಧಿಯ ಮೂಲಭೂತ ಅಗತ್ಯಗಳಲ್ಲಿ ದೇಶ ಗಂಭೀರ ಸ್ಥಿತಿಯಲ್ಲಿತ್ತು. ಪರಾವಲಂಬಿಯಾಗಿತ್ತು. ಖಾಸಗಿ ಕ್ಷೇತ್ರದಿಂದ ದೇಶದ ಅಗತ್ಯವನ್ನು ನೀಗುವುದು ಆಗಲಿಲ್ಲ. ಈ ಕ್ಷೇತ್ರಗಳಲ್ಲಿ ಸರ್ಕಾರಿ ಹೂಡಿಕೆಯ ನಂತರ ಈಗ ದೇಶ ಹಲವಾರು ವಿಚಾರಗಳಲ್ಲಿ ಸ್ವಾವಲಂಬನೆ ಸಾಧಿಸಿದೆ ಎಂದರು. ದೇಶದಲ್ಲಿ ವಿದ್ಯುತ್ ಉತ್ಪಾದಿಸಿದ್ದು ಯಾರು? ಖಾಸಗಿಯವರಲ್ಲ, ಬಿಎಚ್‌ಇಎಲ್ ಉತ್ಪಾದಿಸಿದ್ದು, ಈಗ ರಸಗೊಬ್ಬರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಲಾಗಿದೆ.


ಉಕ್ಕು ಕಾರ್ಖಾನೆ ಸ್ಥಾಪನೆಗೆ ಅಮೇರಿಕಾ ಬ್ರಿಟನ್‌ಗಳ ಸಹಾಯ ಕೇಳಿದಾಗ ನೀಡಲಿಲ್ಲ. ನಾವೇ ಉಕ್ಕು ನೀಡುತ್ತೇವೆ ಕೊಳ್ಳಿ ಎಂದರು. ಆದರೆ ಸೋವಿಯತ್ ಒಕ್ಕೂಟ ಸಹಾಯ ಮಾಡಿದ ಮೇಲೆ ಭಾರತ-ರಷ್ಯಾ ಕಡೆಗೆ ವಾಲುವ ಭಯದಿಂದ ಇತರರೂ ಸಹಾಯಕ್ಕೆ ಮುಂದೆ ಬಂದರು. ಒಂದೊಮ್ಮೆ ಖಾಸಗಿ ರಂಗದಲ್ಲಿದ್ದಾಗ ದೇಶದ ಕಲ್ಲಿದ್ದಲು ಉತ್ಪಾದನೆ ಕೇವಲ 73 ಲಕ್ಷ ಟನ್ ಇತ್ತು. ಕಲ್ಲಿದ್ದಲು ಉತ್ಪಾದನೆ ಹೆಚ್ಚುತ್ತಿಲ್ಲವೆಂಬ ಆತಂಕದಿಂದಾಗಿ 'ಕೋಲ್ ಇಂಡಿಯಾ' ಸ್ಥಾಪನೆಯಾಯಿತು. ಈಗ ದೇಶದ ಕಲ್ಲಿದ್ದಲು ಉತ್ಪಾದನೆ ವಾರ್ಷಿಕ 300 ಮಿಲಿಯನ್ ಟನ್ ಆಗಿದೆ. ರೈತರಿಗೆ-ಸಾಮಾನ್ಯ ಜನರಿಗೆ ಸಾಲ ಸಿಗುತ್ತಿಲ್ಲ ವೆಂಬ ಕಾರಣಕ್ಕೆ ಬ್ಯಾಂಕ್ ರಾಷ್ಟ್ರೀಕರಿಸಲಾಯಿತು. ಹಿಂದೆ ತೈಲೋದ್ಯಮ ನಡೆಸುತ್ತಿದ್ದ ಖಾಸಗಿ Burma Shell ಮತ್ತು Caltex ಕಂಪನಿಗಳು ತಾವು ಯಾವ ಬೆಲೆಗೆ ಪೆಟ್ರೋಲಿಯಂನ್ನು ಆಮದು ಮಾಡಿಕೊಳ್ಳುತ್ತಿದ್ದೇವೆಂದು ಸರ್ಕಾರಕ್ಕೆ ಹೇಳಲು ತಯಾರಿರಲಿಲ್ಲ. ಜನರ ಹಣ ಲೂಟಿ ಮಾಡುತ್ತಿದ್ದವು. ಹೀಗಾಗಿ ಸರ್ಕಾರ ಅವುಗಳನ್ನು ರಾಷ್ಟ್ರೀಕರಿಸಿತು. ಜನರ ಹಣ ಸಂಗ್ರಹಿಸಿ ಮಾಯವಾಗುತ್ತಿದ್ದ ವಿಮಾ ಕಂಪನಿಗಳಿಂದ ಜನರ ಹಿತಾಸಕ್ತಿ ಕಾಪಾಡಲು ವಿಮೆಯನ್ನು ರಾಷ್ಟ್ರೀಕರಿಸಲಾಯಿತು. ಖಾಸಗಿ ರಂಗದಲ್ಲಿದ್ದ 125 ಮಿಲ್‌ಗಳು ಬಿಕ್ಕಟ್ಟಿಗೆ ಸಿಕ್ಕಿ ಕುಸಿದಿದ್ದವು. ಆಗ ಅವುಗಳನ್ನು ಕಾಪಾಡುವ ಸಲುವಾಗಿ ರಾಷ್ಟ್ರೀಕರಿಸಿ ಸಾರ್ವಜನಿಕ ಎನ್.ಟಿ.ಸಿಯನ್ನು ಸ್ಥಾಪಿಸಲಾಯಿತು. ದೇಶದಲ್ಲಿ ಸಾರ್ವಜನಿಕ ಸಾರಿಗೆ ವ್ಯವಸ್ಥೆ (ರೈಲು) ಇರುವುದರಿಂದಾಗಿ ಕಡಿಮೆ ದರದಲ್ಲಿ ಜನರಿಗೆ ಆಹಾರ ದೊರೆಯುತ್ತಿದೆ. ಸರ್ಕಾರಿ ಸಾರಿಗೆ ವಾಹನಗಳು ಕೇವಲ ಲಾಭದ ಮುಖ ನೋಡದೆ ಕಡಿಮೆ ಜನರಿರುವ ಪ್ರದೇಶಗಳಿಗೂ ಓಡುತ್ತವೆ. ಖಾಸಗಿ ರಂಗ ಅದನ್ನು ಮಾಡುವುದಿಲ್ಲ.

ದೇಶದಲ್ಲಿ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸುವ ಉದ್ದೇಶದಿಂದ ಹಲವೆಡೆ ಸಾರ್ವಜನಿಕ ಉದ್ದಿಮೆಗಳನ್ನು ಸ್ಥಾಪಿಸಲಾಯಿತು.

ಆದರೆ ಇಂದು ಇಂತಹ ದೇಶದ ಮಹತ್ವದ ಸಾರ್ವಜನಿಕ ಉದ್ದಿಮೆಗಳನ್ನು ಮೂರು ಕಾಸಿಗೆ ಮಾರಲಾಗುತ್ತಿದೆ. ಖಾಸಗಿ ಕಾರ್ಖಾನೆಗಳು ಸರ್ಕಾರಕ್ಕೆ ತೆರಿಗೆ ವಂಚಿಸುತ್ತವೆ. ಹಲವು ಅಧ್ಯಯನಗಳು ಇದನ್ನು ಸಾಬೀತುಪಡಿಸಿವೆ. ಈಗ 'ಬಿಸಿನೆಸ್ ನಡೆಸುವುದು ಸರ್ಕಾರದ ಬಿಸಿನೆಸ್ ಅಲ್ಲ' ಎನ್ನಲಾಗುತ್ತಿದೆ. ಖಾಸಗಿ ವಿಮಾನ ಸಂಸ್ಥೆಗಳಿಗೆ ಅನುಕೂಲ ಮಾಡಿಕೊಡಲು ಏರ್‌ಲೈನ್ಸ್ ತನ್ನ ಹಲವು ಯಾನ ರದ್ದುಮಾಡಿದೆ. ವಿಶ್ವಬ್ಯಾಂಕಿನ ಒತ್ತಡದಿಂದ ವಿದ್ಯುತ್ ಖಾಸಗೀಕರಣ ನಡೆದಿದೆ. ದೆಹಲಿಯಲ್ಲಿ ವಿದ್ಯುತ್ ಖಾಸಗೀಕರಣ ಆದ ಕೂಡಲೇ ಶೇ.25ರಷ್ಟು ದರ ಏರಿಕೆಯಾಯಿತು. ಜನ ಬಿಲ್ ಕೊಡದೇ ಚಳುವಳಿ ನಡೆಸಿದರು. ದೇಶದ ಸಾರ್ವಜನಿಕ ಬ್ಯಾಂಕ್‌ಗಳಿಂದ ಅಪಾರ ಮೊತ್ತದ ಸಾಲ ಪಡೆದಿರುವ ಖಾಸಗಿ ಉದ್ದಿಮೆದಾರರ ಬಾಕಿ ಆದ 98 ಸಾವಿರ ಕೋಟಿ ರೂಪಾಯಿಗಳನ್ನು ಮರಳಿ ಬರದ ಸಾಲ (ಎನ್.ಪಿ.ಎ) ಎಂದು ಹೆಸರಿಸಿ, ವಸೂಲಿ ಮಾಡದೇ ಕೈಬಿಡಲಾಗಿದೆ. ದೇಶದಲ್ಲಿ 2 ಲಕ್ಷ ಕೋಟಿ ರೂಪಾಯಿಗಳ ಕಪ್ಪುಹಣದ ಚಲಾವಣೆ ಇದೆ. ಇದರ ಬಗ್ಗೆ ಯಾವುದೇ ಕ್ರಮ ಇಲ್ಲ.

ಖಾಸಗೀಕರಣದ ಚಮತ್ಕಾರಗಳು

ಹಲವು ಉದ್ದಿಮೆಗಳನ್ನು ಉದ್ದಿಮೆ ನೆಲೆಸಿರುವ ಭೂಮಿಯ ಬೆಲೆಗಿಂತ ಕಡಿಮೆ ಬೆಲೆಗೆ ಮಾರಲಾಗುತ್ತಿದೆ. ಮುಂಬೈನ ಸಂತೂರ್ ಹೊಟೆಲ್‌ನ್ನು ಕೇವಲ 85 ಕೋಟಿಗೆ ಆರೆಸ್ಸೆಸ್ ವ್ಯಕ್ತಿಗೆ ಮಾರಲಾಯಿತು. ಅದನ್ನು ಕೊಳ್ಳಲು ಆತನಿಗೆ ಸ್ವತಃ ಅರುಣ್ ಶೌರಿ ಸರ್ಕಾರಿ ಬ್ಯಾಂಕ್‌ಗಳಿಂದ ಸಾಲಗಳನ್ನು ಕೊಡಿಸಿದರು. ಆ ವ್ಯಕ್ತಿ ಅದನ್ನು ಕೇವಲ 3 ತಿಂಗಳಿನಲ್ಲಿ 117 ಕೋಟಿಗಳಿಗೆ ಬೇರೊಬ್ಬರಿಗೆ ಮಾರಿದ. ಇದೇ ಮುಂಬೈನ ಇನ್ನೊಂದು ಸಂತೂರ್ ಹೊಟೆಲ್‌ನ್ನು 152 ಕೋಟಿ ರೂಪಾಯಿಗೆ ಮಾರಲಾಯಿತು. ಈ ಹೋಟೆಲ್‌ನ್ನು ಕೊಂಡುಕೊಂಡ ಖಾಸಗಿ ಕಂಪನಿಯ ಬಂಡವಾಳ ಕೇವಲ 5 ಕೋಟಿ ಮಾತ್ರ. ಉಳಿದದ್ದು ಇದೇ ಸರ್ಕಾರಿ ಬ್ಯಾಂಕ್‌ಗಳಿಂದ ಸಾಲ. ಅದನ್ನು ಅರುಣ್ ಶೌರಿಯವರೇ ಕೊಡಿಸಿದ್ದು. ಛತ್ತಿಸ್‌ಗಢದ, ಒಟ್ಟು 5,500 ಕೋಟಿ ರೂ ಮೌಲ್ಯದ ಬಾಲ್ಕೊ ಕಾರ್ಖಾನೆಯ ಶೇ.51ರಷ್ಟು ಶೇರನ್ನು ಕೇವಲ 550 ಕೋಟಿಗೆ ಮಾರಲಾಗಿದೆ. ಬಾಲ್ಕೊನ ಒಟ್ಟು ಆಸ್ತಿ ಎಂದರೆ ಅದರಲ್ಲಿ 2 ಬೆಡ್‌ರೂಂಗಳ, ಸುಸಜ್ಜಿತವಾದ 4000 ಮನೆಗಳನ್ನೊಳಗೊಂಡ ನಿವೇಶನ ಸಹ ಸೇರುತ್ತದೆ. ನಮ್ಮ ದೇಶದ ಹೆಚ್ಚಿನ ಅರ್ಥಶಾಸ್ತ್ರಜ್ಞರು ಈ ಬಗ್ಗೆ ಬಾಯಿ ಬಿಡುತ್ತಿಲ್ಲ ಎಂದು ಪಂಧೆಯವರು ವಿಷಾಧಿಸಿದರು. ಮುಖೇಶ್ ಅಂಬಾನಿಯವರ ಉದ್ದಿಮೆಗಳು ಸರ್ಕಾರಕ್ಕೆ ದೊಡ್ಡ ವಂಚನೆ ಎಸಗಿವೆ ಎಂಬ ಅನಿಲ್ ಅಂಬಾನಿ ಆರೋಪದ ಬಗ್ಗೆ ಕೇಂದ್ರ ಯುಪಿಎ ಸರ್ಕಾರ ತನಿಖೆ ಮಾಡುವ ಗೋಜಿಗೆ ಹೋಗಿಲ್ಲ ಎಂದು ಟೀಕಿಸಿದರು.



ದೇಶವಿರೋಧಿ - ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಚಳುವಳಿ ಬಲಗೊಳಿಸಲು ಸಮಾವೇಶದ ನಿರ್ಧಾರ

ಕಾರ್ಮಿಕ ವರ್ಗದ ಪ್ರತಿರೋಧ

ಆದರೆ ನಾಲ್ಕೊ ಕಾರ್ಖಾನೆ ಖಾಸಗೀಕರಣ ಮಾಡುವ ಸರ್ಕಾರದ ನಿರ್ಧಾರ ಜಾರಿಯಾಗಲು ಅಲ್ಲಿನ ಕಾರ್ಮಿಕರು ಅವಕಾಶ ನೀಡಲಿಲ್ಲ. ನಾಲ್ಕೊಗೆ ಭೇಟಿ ನೀಡಲು ಬಂದ ಮಂತ್ರಿಯನ್ನು ಒಳಗೆ ಹೋಗಲು ಬಿಡದೆ ವಾಪಸ್ ಕಳಿಸಿದರು. ಕಾರ್ಖಾನೆಯನ್ನು ಕೊಂಡುಕೊಳ್ಳಲು ಬಂದವರನ್ನು ಭುವನೇಶ್ವರದವರೆಗೆ ಬೆನ್ನಟ್ಟಿದರು. ಕಾರ್ಮಿಕರ ಹೋರಾಟದಿಂದ ಗಣಿ ಖಾಸಗೀಕರಣಕ್ಕೆ ಸಂಬಂಧಿಸಿದ ಮಸೂದೆಯನ್ನು ತಡೆಹಿಡಿಯಲಾಗಿದೆ. ಅದೇ ರೀತಿ ಬ್ಯಾಂಕ್ ಖಾಸಗೀಕರಣದ ವಿರುದ್ಧವೂ 9 ಸಂಘಟನೆಗಳ ಒಕ್ಕೂಟ ಚಳುವಳಿ ನಡೆಸಿ ಖಾಸಗೀಕರಣವನ್ನು ತಡೆಯಲಾಗಿದೆ. ಇದೀಗ ಬಿಹೆಚ್‌ಇಎಲ್‌ನ ಶೇ.10 ಶೇರು ಮಾರಾಟದ ವಿಚಾರದಲ್ಲಿ ಹಾಗೆಯೇ ಸಾರ್ವಜನಿಕ ಉದ್ದಿಮೆಗಳ ರಕ್ಷಣೆಗಾಗಿ ಬೆಂಗಳೂರಿನ ಸಾರ್ವಜನಿಕ ಕಾರ್ಖಾನೆ ಕಾರ್ಮಿಕ ವರ್ಗವು ಸಮರಶೀಲ ಹೋರಾಟಕ್ಕೆ ಮುಂದಾಗಬೇಕೆಂದು ಅವರು ಕರೆ ನೀಡಿದರು.

ಬೆಂಗಳೂರು ಇನ್‌ಫೋಸಿಸ್ ನಗರ ಅಲ್ಲ, ಕಾರ್ಮಿಕರ ನಗರ

ಬೆಂಗಳೂರು ಈಗ ಪ್ರಚಾರ ನಡೆಸುತ್ತಿರುವಂತೆ ಇನ್‌ಫೋಸಿಸ್ ನಗರ ಅಲ್ಲ, ಇದು ಕಾರ್ಮಿಕರ ನಗರ. ಬೆಂಗಳೂರಿನಲ್ಲಿ ಮಾಹಿತಿ ತಂತ್ರಜ್ಞಾನ ಕ್ಷೇತ್ರ ಬೆಳೆಯುವುದಕ್ಕೂ ಇಲ್ಲಿನ ಸಾರ್ವಜನಿಕ ಕೈಗಾರಿಕೆಗಳ ಕೊಡುಗೆಯೇ ಮೂಲಕಾರಣ ಎಂದು ಸಭೆಯ ಅಧ್ಯಕ್ಷರಾದ ಕಾಂ ವಿ.ಜೆ.ಕೆ ನಾಯರ್‌ರವರು ಮಾತನಾಡಿ, ಬೆಂಗಳೂರಿನ ಒಟ್ಟಾರೆ ಅಭಿವೃದ್ಧಿಗೆ ಇಲ್ಲಿನ ಸಾರ್ವಜನಿಕ ಕೈಗಾರಿಕೆ ಗಳು ಬಹುದೊಡ್ಡ ಕೊಡುಗೆ ನೀಡಿವೆ. ಕಾರ್ಮಿಕರು ಕೇವಲ ತಮ್ಮ ಸವಲತ್ತುಗಳಿಗಾಗಿ ಮಾತ್ರ ಹೋರಾಡುತ್ತಾರೆಂಬ ಅಪಪ್ರಚಾರ ನಡೆಯುತ್ತಿದೆ. ಇದು ಕೇವಲ ಕಾರ್ಮಿಕರ ಸವಲತ್ತುಗಳಿಗೆ ನಡೆಯುತ್ತಿರುವ ಹೋರಾಟವಲ್ಲ. ಒಂದು ದೇಶಪ್ರೇಮಿ ಹೋರಾಟ. 80ರ ದಶಕದಲ್ಲಿ ಸಾರ್ವಜನಿಕ ಉದ್ದಿಮೆಯ ಕಾರ್ಮಿಕರ ಹೋರಾಟ ದೊಡ್ಡ ರೀತಿಯಲ್ಲಿ ನಡೆಯುತ್ತಿತ್ತು. ಈಗ ಹೊಸ ಹೊಸ ಧಾಳಿಗಳು ಬಂದಿರುವ ಈ ಸನ್ನಿವೇಶದಲ್ಲಿ ಕಾರ್ಮಿಕ ವರ್ಗ ಐಕ್ಯ ಹೋರಾಟ ನಡೆಸಬೇಕಾಗಿದೆ ಎಂದರು.

ಇದೇ ರೀತಿ 50 ಲಕ್ಷ ಜನಸಂಖ್ಯೆ ಮೀರಿದ್ದರೂ ಸಹ ಬೆಂಗಳೂರು ಮತ್ತು ಹೈದರಾಬಾದ್ ನಗರಗಳ ಸಾರ್ವಜನಿಕ ಕಾರ್ಖಾನೆ ಕಾರ್ಮಿಕರಿಗೆ ಎ-1 ನಗರದ ಕಾರ್ಮಿಕರಿಗೆ ಕೊಡುವಂತೆ ಮನೆ ಬಾಡಿಗೆ ಭತ್ಯೆ ಹೆಚ್ಚಿಸಬೇಕೆಂದು ಮತ್ತು ತುಟ್ಟಿಭತ್ಯೆಯ ಶೇ.50ರಷ್ಟನ್ನು ಮೂಲ ವೇತನದಲ್ಲಿ ವಿಲೀನಗೊಳಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿ ಕಾರ್ಮಿಕ ವರ್ಗ ಐಕ್ಯ ಹೋರಾಟಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.

ಬಿ.ಹೆಚ್.ಇ.ಎಲ್. ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ವಿನಾಯಗಂ, ಬಿಇಎಲ್ ಕಾರ್ಮಿಕ ಮುಖಂಡರಾದ ಹರಿಬಾಬು, ಬಿಇಎಲ್‌ನ ಕಾರ್ಮಿಕ ಮುಖಂಡ ಸಿ.ವಿ.ಕೃಷ್ಣಪ್ಪ, ಬಿಇಎಂಎಲ್ ಕೆ.ಜಿ.ಎಫ್ ಘಟಕದ ಖಜಾಂಚಿ ಎಸ್.ಎಸ್.ಗುಮಾಸ್ತೆ, ಮತ್ತೊಬ್ಬ ಮುಖಂಡರಾದ ಅರ್ಜುನನ್, ಹೆಚ್.ಎ.ಎಲ್ ಪರವಾಗಿ ಅನಂತ ಪದ್ಮನಾಭ ಮುಂತಾದವರು ಸಮಾವೇಶದಲ್ಲಿ ಮಾತನಾಡಿದರು.

ಐಟಿಐ ಮುಖಂಡರಾದ ಶ್ರೀನಿವಾಸ್, ಹೆಚ್‌ಎಎಲ್ ಮುಖಂಡರಾದ ವಿಶ್ವನಾಥ, ಬಿಇಎಂಎಲ್ ಕೆಜಿಎಫ್ ಘಟಕದ ಉಪಾಧ್ಯಕ್ಷ ಸೋಮಪ್ಪ ಮುಂತಾದವರು ವೇದಿಕೆಯಲ್ಲಿದ್ದರು.

ಆರಂಭದಲ್ಲಿ ಬಿಇಎಂಎಲ್‌ನ ಮುಖಂಡರಾದ ಶರಣಪ್ಪ ಸ್ವಾಗತಿಸಿದರು. ಪ್ರಸ್ತಾವನೆಯನ್ನು ಬಿಇಎಂಎಲ್‌ನ ಮುಖಂಡರಾದ ಸುಕುಮಾರ್ ಪಿಳ್ಳೈಯವರು ಮಾಡಿದರು. ಹರ್‍ಯಾಣದ ಗುರಗಾಂವ್‌ನಲ್ಲಿ ಕಾರ್ಮಿಕರ ಮೇಲೆ ನಡೆದ ಅಮಾನುಷ ದೌರ್ಜನ್ಯವನ್ನು ಖಂಡಿಸುವ ನಿರ್ಣಯವನ್ನು ಸಿಐಟಿಯು ರಾಜ್ಯ ಕಾರ್ಯದರ್ಶಿ ಪ್ರಸನ್ನ ಕುಮಾರ್‌ರವರು ಮಂಡಿಸಿದರು. ಸಭೆ ಸರ್ವಾನುಮತದಿಂದ ಅಂಗೀಕರಿಸಿತು.

ಸಿಐಟಿಯುಗೆ ಸೇರಿದ ಹಾಗೂ ಸಿಐಟಿಯು ಅಲ್ಲದ ಎಲ್ಲ ಮುಖಂಡರೂ ಐಕ್ಯ ಹೋರಾಟದ ಅಗತ್ಯವನ್ನು ಪ್ರತಿಪಾದಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ಈ ವಿಚಾರವಾಗಿ ಪ್ರತಿಕ್ರಿಯಿಸಿದ ವಿಜೆಕೆ ನಾಯರ್‌ರವರು ಸಮಸ್ಯೆಗಳ ವಿರುದ್ಧ ಕಾರ್ಮಿಕರನ್ನು ಅಣಿನೆರೆಸಲು ಸಿಐಟಿಯು ಮುತುವರ್ಜಿ ವಹಿಸಿದೆ. ಆದರೆ ಮುಂದಿನ ಚಳುವಳಿ ಎಲ್ಲರ ನಾಯಕತ್ವದಲ್ಲಿ ಆಗಬೇಕು. ಸಿಐಟಿಯು ಇಂತಹ ಐಕ್ಯ-ವಿಶಾಲ ಕಣ್ಣೋಟದಲ್ಲಿ ಕೆಲಸ ಮಾಡುತ್ತದೆ. ಈ ಹೋರಾಟದ ನಾಯಕತ್ವ ಕೇವಲ ಸಿಐಟಿಯುಗೆ ಸೇರಿದ್ದಲ್ಲ ಎಂದು ಸ್ಪಷ್ಟಪಡಿಸಿದರು.

ಮುಂದಿನ ಹೋರಾಟಕ್ಕೆ ಕಾರ್ಮಿಕ ವರ್ಗವನ್ನು ಸಜ್ಜುಗೊಳಿಸುವ ದೃಷ್ಟಿಯಿಂದ ಬೆಂಗಳೂರಿನಲ್ಲಿ ಮತ್ತೊಂದು ಬೃಹತ್ ಸಮಾವೇಶವನ್ನು ಸಂಘಟಿಸುವ ನಿರ್ಣಯವನ್ನು ಸಮಾವೇಶವು ಹರ್ಷೋದ್ಗಾರಗಳಿಂದ ಹಾಗೂ ಸರ್ವಾನುಮತದಿಂದ ಅಂಗೀಕರಿಸಿತು.

ಫುಟ್‌ಪಾತ್ ವ್ಯಾಪಾರಸ್ಥರ ಪ್ರಥಮ ತಾಲೂಕು ಸಮಾವೇಶ

ಸ್ನೇಹ ಸೌಹಾರ್ದತೆಯಿಂದ ಸೌಜನ್ಯತೆಯಿಂದ ಸ್ವಾಭಿಮಾನದ ಬದುಕನ್ನು ಸಾಗಿಸುತ್ತಿರುವ ಬೀದಿ ಬದಿಯ ವ್ಯಾಪಾರಸ್ಥರು ಒಂದಾಗಿ ಹೊಸಪೇಟೆ ನಗರದ ಹೃದಯ ಭಾಗದಲ್ಲಿರುವ ಶ್ರೀ ಬಂಡ್ರಿ ರಾಘವ ಛತ್ರದಲ್ಲಿ ಜುಲೈ 7 ರಂದು ಪ್ರಪ್ರಥಮ ತಾಲೂಕು ಸಮಾವೇಶ ನಡೆಸಿದರು.

ಸುಮಾರು 40-50 ವರ್ಷಗಳಿಂದ ಸಾಲ ಸೋಲ ಮಾಡಿ ಬೀದಿಯ ಪಕ್ಕದಲ್ಲಿ ಬೀಗ ರಿಪೇರಿ, ಸೈಕಲ್ ರಿಪೇರಿ, ಹಣ್ಣು ಮಾರಾಟ, ಹೂವು ಮಾರಾಟ, ಸೋಡ ಅಂಗಡಿ, ಚಿಕ್ಕಮಟ್ಟ ಬೀಡಿ ಅಂಗಡಿಗಳನ್ನು ಇಟ್ಟುಕೊಂಡು ಹಾಗೂ ಬಟ್ಟೆ ಮಾರಾಟ ಮಾಡುತ್ತ ನಗರದ ವಿವಿಧ ರಸ್ತೆಗಳ ಪಕ್ಕದಲ್ಲಿ 1000ಕ್ಕೂ ಹೆಚ್ಚು ಬಡ ಕುಟುಂಬಗಳು ಜೀವನ ನಡೆಸುತ್ತಿವೆ. ಹೀಗೆ ಸ್ವಾಭಿಮಾನದಿಂದ ಜೀವನ ಮಾಡುವ ವ್ಯಾಪಾರಸ್ಥರಿಗೆ ಹೊಸಪೇಟೆ ಜನರಿಂದ ಎಂದೂ ತೊಂದರೆಯಾಗಿಲ್ಲ. ಪಾದಚಾರಿಗಳು ಫುಟ್‌ಪಾತ್ ವ್ಯಾಪರಸ್ಥರಿಂದ ನಮಗೆ ತೊಂದರೆಯಾಗುತ್ತದೆ ಎಂದು ಎಂದೂ ಪೋಲೀಸ್ ಠಾಣೆಯಲ್ಲಾಗಲಿ ಅಥವಾ ನ್ಯಾಯಾಲಯದಲ್ಲಾಗಲಿ ದೂರು ದಾಖಲಿಸಿಲ್ಲ. ಫುಟ್‌ಪಾತ್ ವ್ಯಾಪಾರಸ್ಥರು ಸುಮಾರು 40-50 ವರ್ಷಗಳಿಂದ ಬೀದಿಯ ಪಕ್ಕದಲ್ಲಿ ವ್ಯಾಪಾರ ಮಾಡಿ ಜೀವನ ನಡೆಸುತ್ತಿದ್ದರು, ಸರ್ಕಾರದಿಂದ ಇವರ ಜೀವನಕ್ಕೆ ಯಾವುದೇ ಭದ್ರತೆಗಳಿಲ್ಲ. ಹಣ್ಣು ಮಾರುವುದರಲ್ಲೇ ಹಣ್ಣಾದ ದೇಹಗಳೆಷ್ಟು? ಅದು ಲೆಕ್ಕವಿಲ್ಲದಷ್ಟು. ಈ ರೀತಿಯಾಗಿ ಜೀವನ ಸಾಗಿಸುತ್ತಿರುವ ಬಡ ವ್ಯಾಪಾರಸ್ಥರ ಗೋಳಿನ ಪರಿಸ್ಥಿತಿಯೇನೆಂದರೆ 'ಮಾಡಿ ಉಂಡರೆ ಮಂದಿಯ ಕಾಟ, ಬೇಡಿ ತಿಂದರೆ ನಾಯಿಯ ಕಾಟ' ಎನ್ನುವ ನಾಣ್ನುಡಿಯಂತೆ.

ಸುಡುಬಿಸಿಲಿನಲ್ಲಿ ಬೆವರು ಸುರಿಸಿ ದುಡಿದು ತಿನ್ನುವ ಈ ವ್ಯಾಪಾರಸ್ಥರಿಗೆ, ಖಾಕಿ ಬಟ್ಟೆಯ ಜನರ (ಪೋಲೀಸರ) ಕಾಟ. ವಿನಾಕಾರಣ ತೂಕ ಮಾಡುವ ತಕ್ಕಡಿಯನ್ನು ಹಣ್ಣು ಮಾರುವ ಬಂಡಿಯನ್ನು, ಗ್ಯಾಸ್‌ಲೈಟ್‌ನ್ನು ತೆಗೆದುಕೊಂಡು ಠಾಣೆಗೆ ಒಯ್ಯುವುದು ಚಾರ್ಜ್‌ಶೀಟ್ ಹಾಕುವುದು. ಹೀಗೆ ದಿನ ನಿತ್ಯ ಕಿರುಕುಳ ನೀಡುತ್ತಿರುವ ಪೋಲೀಸರ ದೌರ್ಜನ್ಯ ಒಂದೆಡೆಯಾದರೆ ವ್ಯಾಪಾರಸ್ಥರಿಗೆ ಮಾರಾಟ ಮಾಡಲು ಸರಿಯಾದ ವಾತಾವರಣ ಹಾಗೂ ಮೂಲಭೂತ ಸೌಕರ್ಯಗಳನ್ನು ಒದಗಿಸದೆ ನಗರಸಭೆಯವರು ಜಕಾತಿ ಶುಲ್ಕವನ್ನು ಹೆಚ್ಚು ಮಾಡಿ, ದೌರ್ಜನ್ಯದಿಂದ ವಸೂಲಿ ಮಾಡುತ್ತಿದ್ದಾರೆ. ಹೀಗೆ ದಿನ ನಿತ್ಯ ನಡೆಯುತ್ತಿರುವ, ಪೋಲೀಸರ ಕಿರುಕುಳ ಹಾಗೂ ನಗರಸಭೆಯವರ ದೌರ್ಜನ್ಯದ ವಿರುದ್ಧ ಸಿಡಿದೆದ್ದ ವ್ಯಾಪಾರಸ್ಥರು ಒಂದುಗೂಡಿ 'ಒಗ್ಗಟ್ಟಿನಲ್ಲಿ ಬಲವಿದೆ' ಎಂದು ಅರಿತುಕೊಂಡು, ಅಖಿಲಭಾರತ ಮಟ್ಟದ ಬಲಿಷ್ಠ ನ್ಯಾಯಪರ ಕಾರ್ಮಿಕರ ಸಂಘಟನೆಯಾದ ಸಿಐಟಿಯು ಸಂಘಟನೆಯನ್ನು ಸೇರಿದ್ದಾರೆ. 300ಕ್ಕೂ ಅಧಿಕ ವ್ಯಾಪಾರಸ್ಥರು ಸಂಘದ ಸದಸ್ಯತ್ವ ನೋಂದಣಿಯಾಗಿದೆ. ಪ್ರಪ್ರಥಮವಾಗಿ ತಾಲೂಕು ಸಮಾವೇಶವನ್ನು ಯಶಸ್ವಿಯಾಗಿ ನಡೆಸಲಾಯಿತು.

ಅರ್ಥಪೂರ್ಣ ಸಮಾವೇಶದಲ್ಲಿ ಅತಿಥಿಗಳಾಗಿ ಭಾಗವಹಿಸಿದ ಮುಖಂಡರಾದ ಸಿಐಟಿಯುನ ಡಿ.ವೆಂಕಟರಮಣ, ಎಂ.ಗೋಪಾಲ್, ಡಿವೈಎಫ್ಐನ ಎ.ಕರುಣಾನಿಧಿ, ಎಸ್ಎಫ್ಐನ ಕೆ.ರಮೇಶ್ ಮಾತನಾಡುತ್ತ ಬೀದಿ ಬದಿಯ ವ್ಯಾಪಾರಸ್ಥರ ಅನೇಕ ಕುಂದು ಕೊರತೆಗಳ ಬಗ್ಗೆ ತಿಳಿಸುತ್ತ ಈ ದೌರ್ಜನ್ಯ ದಬ್ಬಾಳಿಕೆಗಳನ್ನು ಹಿಮ್ಮೆಟ್ಟಿಸಲು ವ್ಯಾಪಾರಸ್ಥರು ಪ್ರಬಲವಾದ ಸಂಘಟನೆಯನ್ನು ಕಟ್ಟಿ ಬೆಳೆಸಿರಿ ಎಂದು ಕರೆ ನೀಡಿದರು. ವ್ಯಾಪಾರಸ್ಥರಿಗೆ ಪೋಲೀಸರು ವಿನಾಕಾರಣ ಕಿರುಕುಳ ನೀಡಿದರೆ ಪ್ರತಿಭಟನೆಗಿಳಿಯ ಬೇಕಾಗುತ್ತದೆ ಎಂದು ಎಚ್ಚರಿಸಿದ ಮುಖಂಡರು ನಗರದ ಪ್ರಮುಖ ರಸ್ತೆಗಳಲ್ಲಿ ರಾಜಾರೋಷವಾಗಿ ಸಾಮಾನುಗಳನ್ನು ಹಾಕಿ ಮಾರಾಟ ಮಾಡುವ ಸ್ವಸ್ಥಿಕ್ ಸ್ಟೀಲ್ ಹಾರ್ಡ್‌ವೇರ್ ಹಾಗೂ ಉಳಿದ ಹಾರ್ಡ್‌ವೇರ್‌ಗಳ ಬಗ್ಗೆ ನೋಡಿಯೂ ನೋಡದಂತಿದ್ದಾರೆ ಪೋಲೀಸರು. ಡ್ಯಾಂ ರಸ್ತೆಯಲ್ಲಿ ಸರಿಸುಮಾರು 10 ಅಡಿ ಮುಂದೆ ಬಂದಿರುವ ಕಾರ್ಪೊರೇಷನ್ ಬ್ಯಾಂಕನ್ನು ತೆಗಿಸಲಿ ಎಂದರು. ಸಮಾವೇಶದಲ್ಲಿ 250ಕ್ಕೂ ಅಧಿಕ ಜನ ಸೇರಿದ್ದರು.

ಫುಟ್‌ಪಾತ್ ವ್ಯಾಪಾರಸ್ಥರ ಸಂಘದ ಮಹಾಂತೇಶರವರ ವಂದನಾರ್ಪಣೆ ಯೊಂದಿಗೆ ಸಮಾವೇಶ ಮುಕ್ತಾಯವಾಯಿತು.


ಸಮಾವೇಶದಲ್ಲಿ ಎಸ್ಎಫ್ಐನ ರಾಜ್ಯ ಸಹಕಾರ್ಯದರ್ಶಿಗಳಾದ ಹುಳ್ಳಿ ಉಮೇಶ ತಾಲ್ಲೂಕು ಸಹ ಕಾರ್ಯದರ್ಶಿ ಸುರೇಶ್ ಚೌಹಾಣ್, ಯೂನಿಯನ್ನಿನ ರಾಜಸಾಬ್, ಬಾಷಾ ಸಾಬ್, ಶಿವಪ್ಪ, ಇನ್ನಿತರೆ ಮುಖಂಡರು ಉಪಸ್ಥಿತರಿದ್ದರು.


ರಸ್ತೆ ಡಾಂಬರೀಕರಣಕ್ಕೆ ಒತ್ತಾಯಿಸಿ ಧರಣಿ

ಬೆಂಗಳೂರಿನ ಕೆ.ಆರ್.ಪುರ ಮತ್ತು ಮಹದೇವಪುರ ನಗರ ಸಭೆಗಳ ವ್ಯಾಪ್ತಿಯಲ್ಲಿ ಇರುವ ಉದಯನಗರ ಮುಖ್ಯರಸ್ತೆಗೆ ಡಾಂಬರೀಕರಣ ಮತ್ತು ಚರಂಡಿಗಳನ್ನು ಕೂಡಲೇ ದುರಸ್ಥಿಗೊಳಿಸಬೇಕೆಂದು ಉದಯನಗರ ಸಿಪಿಐ(ಎಂ) ಶಾಖೆಯಿಂದ ಜೂನ್ 24ರಂದು ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯವರೆಗೂ ಧರಣಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಈ ಧರಣಿ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿ ಉದಯನಗರದ ಮುಖ್ಯರಸ್ತೆಯ ಎಲ್ಲಾ ಅಂಗಡಿ ವ್ಯಾಪಾರಸ್ಥರು ತಮ್ಮ ವ್ಯಾಪಾರ ವಹಿವಾಟುಗಳನ್ನು ಸ್ವಯಂ ಸ್ಥಗಿತಗೊಳಿಸಿ ಈ ಜನಪರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಧರಣಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಿ.ಜಯರಾಂ ವಹಿಸಿದ್ದರು. ಈ ಕಾರ್ಯಕ್ರಮವನ್ನು ಸಿಪಿಐ(ಎಂ) ವರ್ತೂರು ಸ್ಥಳೀಯ ಸಮಿತಿಯ ಕಾರ್ಯದರ್ಶಿ ಸಿ.ರಾಮಚಂದ್ರ ಉದ್ಘಾಟಿಸಿದರು. ಈ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸಿ ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಹೆಚ್.ಎನ್.ಗೋಪಾಲಗೌಡರು ಉಪಸ್ಥಿತರಿದ್ದರು. ಜನವಾದಿ ಮಹಿಳಾ ಸಂಘಟನೆಯ ಜಿಲ್ಲಾ ಕಾರ್ಯದರ್ಶಿ ಗೌರಮ್ಮ ವಕೀಲರ ಸಂಘದ ಮುಖಂಡರಾದ ವಾರಿಯರ್, ಪ್ರಸನ್ನ, ಅಂಕಣ್ಣರೆಡ್ಡಿ, ಗಣಪತಿ, ರಾಜನ್, ತಂಗಮಣಿ, ರಾಜಪ್ಪನ್, ಶಶಿಕುಮಾರ್, ವೆಂಕಟೇಶ್, ಹಾಗೂ ಇತರೆ ವಿಜಿಪುರದ ಸಂಗಾತಿಗಳು ಭಾಗವಹಿಸಿದ್ದರು. ಈ ಧರಣಿ ಕಾರ್ಯಕ್ರಮದಲ್ಲಿ ಸಿಪಿಐ(ಎಂ) ಮುಖಂಡರಾದ ಸಿ.ರಮೇಶ್, ಪಿ.ಮುನಿರಾಜ್ ಹಾಗೂ ಇತರೆ ಕಾರ್ಖಾನೆಯ ಮುಖಂಡರು ಬೆಂಬಲ ಸೂಚಿಸಿ ಮಾತನಾಡಿದರು. ರಾಮ್ನನಾಥನ್ ವಂದಿಸಿದರು.

ವಿನಿವಿಂಕ್ ಸಂಸ್ಥೆ ವಿರುದ್ಧ ಸಿ.ಪಿ.ಐ(ಎಂ) ಪ್ರತಿಭಟನೆ

ಕೋಟ್ಯಾಂತರ ರೂಪಾಯಿಗಳನ್ನು ಜನರಿಗೆ ವಂಚನೆ ಮಾಡಿ ಪರಾರಿಯಾಗಿರುವ ವಿನಿವಿಂಕ್ ಮಾಲಿಕ ಶ್ರೀನಿವಾಸ ಶಾಸ್ತ್ರಿ ಮತ್ತು ಲೋಕೇಶನನ್ನು ಕೂಡಲೇ ಬಂದಿಸಬೇಕು ಮತ್ತು ಪ್ರಕರಣವನ್ನು ಸಿ.ಬಿ.ಐ.ಗೆ ಒಪ್ಪಿಸಬೇಕೆಂದು ಒತ್ತಾಯಿಸಿ ಸಜ್ಜನ್‌ರಾವ್ ವೃತ್ತದಲ್ಲಿರುವ ವಿನಿವಿಂಕ್ ಕಛೇರಿ ಮುಂದೆ ಸಿಪಿಐ(ಎಂ) ಬೆಂಗಳೂರು ಜಿಲ್ಲಾಸಮಿತಿ ಪ್ರತಿಭಟನೆಯನ್ನು ನಡೆಸಿತು. ಈ ಪ್ರತಿಭಟನೆಯ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಪ್ರಕಾಶ್ ವಹಿಸಿದ್ದರು. ಈ ಪ್ರಕರಣದ ಹಿಂದೆ ಕೆಲವು ಪ್ರಬಲ ರಾಜಕಾರಣಿಗಳ ಕೈವಾಡವಿರುವುದು ಬಯಲಾಗಿದೆ. ಆದ್ದರಿಂದ ಈ ಪ್ರಕರಣವನ್ನು ಸಿಬಿಐಗೆ ಒಪ್ಪಿಸಿ ಕೈವಾಡವಿರುವ ಎಲ್ಲಾ ರಾಜಕಾರಣಿಗಳನ್ನು ಮತ್ತು ವಂಚಿಸಿ ಪರಾರಿಯಾಗಿರುವ ಶ್ರೀನಿವಾಸ ಶಾಸ್ತ್ರಿ ಲೋಕೇಶ್‌ನನ್ನು ಬಂಧಿಸಿ ಜನರಿಗೆ ಬರಬೇಕಾಗಿರುವ ಹಣವನ್ನು ವಾಪಸ್ಸು ಮಾಡಬೇಕೆಂದು ಪ್ರಕಾಶ್‌ರವರು ಈ ಸಂದರ್ಭದಲ್ಲಿ ಆಗ್ರಹಿಸಿದರು. ಖ್ಯಾತ ವಕೀಲರು ಎಐಎಲ್‌ಯುವಿನ ಮುಖಂಡರಾದ ಕೆ.ಆರ್. ವೆಂಕಟೇಶ್‌ಗೌಡರು ಮಾತನಾಡಿ ಯಾವುದೇ ಸಹಕಾರ ಸಂಘಗಳನ್ನು ಪ್ರಾರಂಭಿಸಬೇಕಾದರೆ ಅದರದೇ ಆದ ಕಾನೂನುಗಳಿವೆ. ಆದರೆ ಇದನ್ನೆಲ್ಲಾ ಉಲ್ಲಂಘಿಸಿ, ಸರಕಾರ ಕಾಲಕಾಲಕ್ಕೆ ಸರಿಯಾದ ತನಿಖೆ ಮಾಡದೆ ತಪ್ಪಗಿದ್ದದ್ದು ಈ ಪ್ರಕರಣಕ್ಕೆ ಕಾರಣವಾಗಿದೆ. ಎಂದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ.ಸುರೇಂದ್ರರಾವ್ ರವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಪಕ್ಷದ ಕಾರ್ಯಕರ್ತರು ಮತ್ತು ವಂಚನೆಗೊಳಗಾದ ದೊಡ್ಡ ಸಂಖ್ಯೆಯ ಗ್ರಾಹಕರು ಪಾಲ್ಗೊಂಡಿದ್ದರು.





ವಿನಿವಿಂಕ್ ಕಛೇರಿ ಮತ್ತು ಮೋಸಕ್ಕೊಳಗಾದ ಸಾರ್ವಜನಿಕರು

ಈ ದೇವಧೂತರು

ಲೂಟಿ ಮಾಡಿದ ಹಣದಿ ದೇವಳವ ಕಟ್ಟಿ
ಕೆಲವು ಜನ ಪ್ರಚಾರ ಪಡೆಯುವರು ಬಿಟ್ಟಿ
ವಂಚನೆಯ ಹಣನೋಡಿ ವಂಚನೆಗೆ ಹಿರಿದು
ಹೋಗುವುದು ಸಹಜವೇ ಇಲ್ಲದಿಹ ಬಿರುದು

- ವಿಡಂಬಾರಿ

AIFAWH

ಆರಂಭಗೊಂಡಿದೆ ಬೆಂಗಳೂರು- ಅಂಗನವಾಡಿ ನೌಕರರ 5ನೇ ಅಖಿಲ ಭಾರತ ಸಮ್ಮೇಳನದ ಸಿದ್ಧತೆಗಳು

ದೇಶದ ಕೋಟ್ಯಾಂತರ ಗರ್ಭಿಣಿ ಸ್ತ್ರೀಯರು - ಹಾಗೂ ತಾಯಿ - ಮಕ್ಕಳಿಗೆ. ಪೌಷ್ಠಿಕ ಆಹಾರ ಒದಗಿಸಿ ಆರೋಗ್ಯ ಸುಧಾರಿಸುವ ಉದ್ದೇಶದಿಂದ ರೂಪಿಸಲಾಗಿರುವ 'ಸಮಗ್ರ ಶಿಶು ಅಭಿವೃದ್ಧಿ ಯೋಜನೆ'ಯಲ್ಲಿ ದುಡಿಯುವ 12 ಲಕ್ಷ ಅಂಗನವಾಡಿ ನೌಕರರು - ಸಹಾಯಕಿಯರೇ ಸ್ವತಃ ಅಪೌಷ್ಠಿಕತೆಯಿಮದ ನರಳಬೇಕಾದ ಸನ್ನಿವೇಶವನ್ನು ಸರ್ಕಾರದ ನೀತಿಗಳು ಸೃಷ್ಟಿಸಿವೆ. ಕೆಂಬಾವುಟದಡಿ ಸಂಘಟಿತರಾಗಿರುವ ಈ ನೌಕರರ ಸಮಸ್ಯೆಗಳ ಬಗ್ಗೆ ಸಮಗ್ರ ಚರ್ಚೆ ನಡೆಸಿ ಹೋರಾಟ ರೂಪಿಸುವ ನಿಟ್ಟಿನಲ್ಲಿ, ಸಂಘಟನೆಯ 5ನೇ ಅಖಿಲ ಭಾರತ ಸಮ್ಮೇಳನ ನವೆಂಬರ್8 ರಿಂದ 11 ರವರೆಗೆ ನಡೆಯಲಿದ್ದು ಬೆಂಗಳೂರು ಮಹಾನಗರದಲ್ಲಿ ನಡೆಯುವ ಈ ಸಮ್ಮೇಳನವನ್ನು ಯಶಸ್ವಿಗೊಳಿಸುವ ಸಂಬಂಧ ವಿಶಾಲ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ನೌಕರರ ಸಮಸ್ಯೆಗಳ ಸ್ಥೂಲ ಪರಿಚಯ ಸ್ವಾಗತ ಸಮಿತಿಯ ವಿವರಗಳು ಇಲ್ಲಿವೆ.

ಸ್ವಾಗತ ಸಮಿತಿ ಪದಾಧಿಕಾರಿಗಳು

ಗೌರವಾಧ್ಯಕ್ಷರು

ಬರಗೂರು ರಾಮಚಂದ್ರಪ್ಪ - ಸಾಹಿತಿಗಳು

ಕಾರ್ಯಾಧ್ಯಕ್ಷರು

ವಿ.ಜೆ.ಕೆ. ನಾಯರ್, ಸಿಐಟಿಯು ರಾಜ್ಯ ಪ್ರ.ಕಾ.

ಉಪಾಧ್ಯಕ್ಷರುಗಳು

ಆರ್.ಶ್ರೀನಿವಾಸ್, ಸಿಐಟಿಯು, ರಾಜ್ಯ ಉಪಾಧ್ಯಕ್ಷರು

ರತ್ನಾಕರ ಶೆಣೈ, ಕೆನರಾ ಬ್ಯಾಂಕ್ ಸ್ಟಾಫ್ ಅಧ್ಯಕ್ಷರು. ಅ.ಭಾ. ಯೂನಿಯನ್

ಶ್ರೀನಿವಾಸ ಬಾಬು, ಬಿಇಎಫ್ಐ ರಾಜ್ಯ ಅಧ್ಯಕ್ಷರು

ಸಿಲ್ವೆಸ್ಟರ್ ಡಿಸೋಜಾ, ಕಾರ್ಯದರ್ಶಿ, ಆರ್‌ಬಿಇಐ

ಯು.ಡಿ.ನರಸಿಂಹಯ್ಯ, ಅಧ್ಯಕ್ಷರು, ಅಖಿಲ ಕರ್ನಾಟಕ ಸರ್ಕಾರಿ ನೌಕರರ ಒಕ್ಕೂಟ,

ರಾಧಕೃಷ್ಣ, ಸಂಚಾಲಕರು ಕೇಂದ್ರ ಸರ್ಕಾರಿ ನೌಕರರ ಸಮನ್ವಯ ಸಮಿತಿ,

ಜಿ.ಸಿ.ಬಯ್ಯಾರೆಡ್ಡಿ, ಅಧ್ಯಕ್ಷರು, ಕೆಪಿಆರ್‌ಎಸ್

ನಿತ್ಯಾನಂದ ಸ್ವಾಮಿ, ಅಧ್ಯಕ್ಷರು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ

ನೀಲಾ ಕೆ. ರಾಜ್ಯ ಅಧ್ಯಕ್ಷರು, ಎಐಜೆಎಂಎಸ್

ವಿ.ಸುಕುಮಾರ್, ಸಿಐಟಿಯು. ಉಪಾಧ್ಯಕ್ಷರು

ಕೆ.ಶಂಕರ್, ಸಿಐಟಿಯು ಉಪಾಧ್ಯಕ್ಷರು,

ಶಂಕರಪ್ಪ, ಎಐಎಲ್‌ಯು

ವೆಂಕಟಾಚಲಯ್ಯ- ಉಪಾಧ್ಯಕ್ಷರು, ಕೆಪಿಆರ್‌ಎಸ್

ಡಾ. ಪ್ರಕಾಶ್ ಸಿ.ರಾವ್, **ಡಾ. ಕಾಶೀನಾಥ್**, ವೈದ್ಯರು

ಪ್ರಧಾನ ಕಾರ್ಯದರ್ಶಿ: **ಎಸ್.ವರಲಕ್ಷ್ಮಿ**

ಕಾರ್ಯದರ್ಶಿಗಳು

ಕೆ.ಎಸ್.ವಿಮಲಾ, ಸೀತಾಲಕ್ಷ್ಮಿ, ಮೀನಾಕ್ಷಿಸುಂದರಂ, ಟಿ.ಲೀಲಾವತಿ, ಕೆ.ಪ್ರಕಾಶ್, ಕೆ.ಎಸ್.ಸುಬ್ರಹ್ಮಣ್ಯಂ, ಹೆಚ್.ಎನ್.ಗೋಪಾಲಗೌಡ, ಸಯ್ಯದ್ ಮುಜೀಬ್, ಎಂ.ಬಿ.ನಾಡಗೌಡ, ಹೆಚ್.ಎಸ್.ಜಗದೀಶ್, ತಿಲಕ ಜಟ್ಟಿಗೌಡ, ಕೆ.ಎನ್.ಉಮೇಶ್, ನವೀನ್ ಕುಮಾರ್, ವೆಂಕಟೇಶ ಗೌಡ, ಗೀತಾ, ಇ.ಕೆ.ಎನ್.ರಾಜನ್, ಆರ್.ಡಿ.ಮೆಲ್ಕಿಯೋರ್, ವಾಜೇಂದ್ರಕುಲಕರ್ಣಿ, ಮಹಾಂತೇಶ್, ರಮಣಿ, ಶಾಂತಾ.ಎನ್.ಘಂಟೆ, ಯಮುನಾ ಗಾಂವ್ಕರ್, ಅಲ್ಲಾ ಭಕಾಶ್

ಖಜಾಂಚಿ : **ಲಲಿತಾ ಶೆಣೈ**

ಸಲಹೆಗಾರರು:

ಡಾ. ಪೂರ್ಣಿಮಾ, ಡಾ. ವಿಜಯಮ್ಮ, ಶಾಂತರಾಜ್, ಬಿ.ಮಾಧವ, ಬಿ.ಸುರೇಶ್, ಜಿ.ವಿ.ಶ್ರೀರಾಮರೆಡ್ಡಿ, ಜಿ.ಎನ್.ನಾಗರಾಜ್, ಎಸ್.ಪ್ರಸನ್ನಕುಮಾರ್, ಮಾರುತಿ ಮಾನ್ಪಡೆ, ಡಾ. ವಸುಂದರಾ ಭೂಪತಿ, ಅಮಾನುಲ್ಲಾಖಾನ್, ಕಾತ್ಯಾಯಿನಿ ಚಾಮರಾಜ್

ಹೊಂಡಾ ಕಾರ್ಮಿಕರ ಮೇಲೆ ಅಘಾತಕಾರಿ ದಬ್ಬಾಳಿಕೆ
ಸೈನ್ಯ ಮತ್ತು ಪೋಲೀಸ್ ಅತಿರೇಕಗಳು

ಹರ್ಯಾಣದ ಹೊಂಡಾ ಮೋಟಾರ್ ಸೈಕಲ್ ಕಾರ್ಖಾನೆ ಕಾರ್ಮಿಕರ ಮೇಲೆ ಅಲ್ಲಿಯ ಪೋಲೀಸರು ಅತ್ಯಂತ ಯೋಜಿತ ಮತ್ತು ವ್ಯವಸ್ಥಿತವಾದ ಕ್ರೂರ ಸಾಮೂಹಿಕ ಧಾಳಿ ನಡೆಸಿದ್ದಾರೆ. ಜಪಾನ್ ಬಹುರಾಷ್ಟ್ರೀಯ ಕಂಪನಿ ಏಜೆಂಟರಂತೆ ವರ್ತಿಸುತ್ತಿರುವ ಕಾಂಗ್ರೆಸ್ ಸರ್ಕಾರ ಕಾರ್ಮಿಕ ವಿರೋಧಿಯಾದಿ ವರ್ತಿಸುತ್ತಿದೆ. ರಾಷ್ಟ್ರವ್ಯಾಪಿ ನಡೆದ ತೀವ್ರ ಚಳುವಳಿಯ ಒತ್ತಡದಿಂದ ವಜಾಗೊಂಡ - ಅಮಾನತ್ತುಗೊಂಡ ಕಾರ್ಮಿಕರನ್ನು ವಾಪಸ್ ಕಾರ್ಖಾನೆಗೆ ತೆಗೆದುಕೊಂಡಿದ್ದರೂ ಸಹ ಜಾಗತೀಕರಣ ಯುಗದಲ್ಲಿ 'ಭವಿಷ್ಯದ ಭಾರತ' ಸಂಕೇತ ಚಿತ್ರವೋ ಇದು ಎಂಬಂತಹ ಬಲವಾದ ಭಾವನೆಯನ್ನು ಈ ಘಟನೆ ಹುಟ್ಟುಹಾಕಿದೆ. ಬಹುರಾಷ್ಟ್ರೀಯ ಕಂಪನಿಗಳು ದೇಶದ ಕಾರ್ಮಿಕ ವರ್ಗದ ಹಕ್ಕುಗಳನ್ನು ಕಾರ್ಮಿಕ ಕಾನೂನುಗಳನ್ನು ಎಷ್ಟು ಗೌರವಿಸುತ್ತವೆ ಎಂಬುದಕ್ಕೆ ಇದು ಸಾಕ್ಷಿಯೂ ಆಗಿದೆ.

ಈ ವಾರ ಮುಗ್ಧ ಜನರ ಮೇಲೆ ಪೊಲೀಸರು ಮತ್ತು ರಕ್ಷಣಾ ಪಡೆಯ ಆಘಾತಕಾರಿ ಹಿಂಸಾಚಾರದ ವಾರವೆಂದು ದಾಖಲಾಗಿದೆ. ಮೊದಲ ವರದಿ 24.7.2005 ರಂದು ಜಮ್ಮು-ಕಾಶ್ಮೀರದ ಕುಪ್ವರಾ ಜಿಲ್ಲೆಯ ಬಂಗರಗುಡ್ ಹಳ್ಳಿಯ ಮೂವರು ಬಾಲಕರು ರಕ್ಷಣಾ ಪಡೆಯಿಂದ ಕೊಲ್ಲಲ್ಪಟ್ಟಿದ್ದು. 11 ರಿಂದ 15 ವರ್ಷದ ಬಾಲಕರನ್ನು ಉಗ್ರಗಾಮಿಗಳೆಂದು ಭಾವಿಸಿ ಸಾಯಿಸಲಾಯಿತು.

ಬಾಲಕರ ಮೇಲೆ ರಕ್ಷಣಾ ಪಡೆಯ ಕ್ರೂರ ಮಾರಣಾಂತಿಕ ಆಕ್ರಮಣವು ಕಣಿವೆ ಪ್ರದೇಶದ ರಸ್ತೆಗಳಲ್ಲಿ ಸಹಜವಾಗಿ ತನ್ನಷ್ಟಕ್ಕೆ ತಾನೇ ನಡೆದ ಸಾವಿರ ಸಾವಿರ ಜನ ಗ್ರಾಮಸ್ಥರ ಪ್ರತಿಭಟನೆಯ ಘಟನೆಯಾಯಿತು. ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಮತ್ತು ವಿಚಾರಣೆಗೆ ಜನರು ಒತ್ತಾಯ ಮಾಡಿದರು. ವಿಸ್ತಾರವಾದ ಪ್ರತಿಭಟನೆಯ ನಂತರ ಮೂರು ಪ್ರತ್ಯೇಕ ವಿಚಾರಣೆಗಳಿಗೆ ಆದೇಶಿಸಿದ ರಕ್ಷಣಾ ವಕ್ತಾರರಾದ ಲೆ. ಕರ್ನಲ್ ವಿ.ಕೆ.ಭಾತ್ರ ಘಟನೆ ಬಗ್ಗೆ ವಿಷಾದಿಸಿ, ಎಲ್ಲಾ ಬಾಲಕರು ಮುಗ್ಧರು ಎಂಬ ಸಂಗತಿ ಅಲ್ಲಗಳೆಯುವಂತಿಲ್ಲ ಎಂದಿದ್ದಾರೆ.

ಮರುದಿನ ಜುಲೈ 25 ರಂದು ನಡೆದದ್ದು ಹೊಂಡಾ ಮೋಟಾರ್ ಸೈಕಲ್ ಅಂಡ್ ಸ್ಕೂಟರ್ ಕಾರ್ಖಾನೆಯ ಕೆಲಸಗಾರರ ಮೇಲೆ ನಡೆದ ಪೋಲೀಸರ ಮೃಗೀಯ ದಾಳಿ. ಪ್ರತಿಭಟನಾಕಾರರನ್ನು ಸುತ್ತುವರಿದ ಪೊಲೀಸರು ಅಮಾನುಷವಾಗಿ ಲಾಠಿ ಪ್ರಹಾರ ಮಾಡಿದ್ದು ಏಳು ನೂರಕ್ಕೂ ಹೆಚ್ಚು ಜನ ರಕ್ತಸಿಕ್ತ ಗಾಯಾಳುಗಳಾಗಿದ್ದಾರೆ. ಕೆಲವರು ಜೀವನ್ಮರಣ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಘಟನೆಯಲ್ಲಿ ಪೊಲೀಸರು ಶೋಷಣೆ ಮತ್ತು ದಬ್ಬಾಳಿಕೆಗೆ ಬಲಿಯಾದ ಕಾರ್ಮಿಕರ ಪರವಾಗಿರದೆ, ಮಾಲಿಕರ ಅದರಲ್ಲೂ ವಿದೇಶಿ ಬಂಡವಾಳದ



'ಕಾರ್ಮಿಕ ಸಂಹಾರ' ನಡೆಸುತ್ತಿರುವ ಪೋಲೀಸ್ ಪಡೆ

ಮಾಲೀಕರ ಪರವಾಗಿರುವುದು ಸ್ಪಷ್ಟವಾಗಿ ಕಂಡುಬಂದಿದೆ.

ಆಡಳಿತ ವರ್ಗ ಕೇವಲವಾಗಿ ನಡೆಸಿಕೊಳ್ಳುತ್ತಿದ್ದ ಕಾರ್ಮಿಕರ ಪಕ್ಷವಾಗಿ ನಿಂತ ನಾಲ್ವರು ಕೆಲಸಗಾರರನ್ನು ಕೆಲಸದಿಂದ ವಜಾ ಮಾಡಿದ್ದರಿಂದ ಹೊಂಡಾ ಕಾರ್ಖಾನೆಯ ಕಾರ್ಮಿಕರು ಚಳುವಳಿಯಲ್ಲಿದ್ದರು. ಮತ್ತು 50 ಜನ ಕಾರ್ಮಿಕರನ್ನು ಅಮಾನತ್ತು ಮಾಡಿರುವ ಕ್ರಮ ವಿರೋಧಿಸಿ ಆರು ತಿಂಗಳಿನಿಂದ ವಜಾಗೊಂಡ ಮತ್ತು ಅಮಾನತ್ತಿನಲ್ಲಿರುವ ಎಲ್ಲರನ್ನು ವಾಪಸ್ ಕೆಲಸಕ್ಕೆ ತೆಗೆದುಕೊಳ್ಳಬೇಕೆಂಬುದು ಚಳುವಳಿಯಲ್ಲಿದ್ದವರ ಮುಖ್ಯ ವಿಷಯವಾಗಿತ್ತು. ಒರಟು ಮನೋಭಾವದ ಆಡಳಿತ ಮಂಡಳಿ ಕಾರ್ಮಿಕರೊಟ್ಟಿಗೆ ಈ ವಿಷಯವಾಗಿ ಮಾತುಕತೆ ಮಾಡಲೂ ತಿರಸ್ಕರಿಸಿತ್ತು. ಈ ಬಿಕ್ಕಟ್ಟನ್ನು ಪರಿಹರಿಸಲು ರಾಜ್ಯ ಸರ್ಕಾರವಾಗಲೀ ಅಥವಾ ಸಂಬಂಧಿತ ಇಲಾಖೆಯಾಗಲಿ ಮಧ್ಯ ಪ್ರವೇಶಿಸುವ ಗೋಜಿಗೆ ಹೋಗದೆ ಇದ್ದದ್ದು ನಿಜವಾಗಿಯೂ ದೌರ್ಭಾಗ್ಯದ ಸಂಗತಿಯಾಗಿದೆ. ಇದು ಈಗ ನಡೆದಿರುವ ಮೃಗೀಯ ಮಾರಣಾಂತಿಕ ಗಾಯಗಳ-ಹಲ್ಲೆಗಳ ಘಟನೆಗೆ ಅವಕಾಶ ಮಾಡಿಕೊಟ್ಟಿದೆ.

ಈ ಘಟನೆ ಕಾರ್ಮಿಕ ವರ್ಗದ ಪಕ್ಷಗಳ ಸರ್ಕಾರ (ಉದಾಹರಣೆ, ಪಶ್ಚಿಮ ಬಂಗಾಳ, ಕೇರಳ) ಮತ್ತು ಇತರ ಆಳುವ ವರ್ಗಗಳ ಸರ್ಕಾರಗಳ ನಡುವಿನ ವ್ಯತ್ಯಾಸವನ್ನು ಎದ್ದು ಕಾಣುವಂತೆ ತೋರಿಸಿಕೊಟ್ಟಿದೆ. ಪೊಲೀಸರು ಮತ್ತು ಕಾನೂನು ಪಾಲಕ ಪಡೆಗಳು ಎಂದೂ ಕೂಡಾ ಕಾರ್ಮಿಕ ಸಂಬಂಧಿ ಪ್ರಶ್ನೆಗಳಲ್ಲಿ ಮಧ್ಯ ಪ್ರವೇಶ ಮಾಡಬಾರದೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದ ಸರ್ಕಾರಗಳು ಬಹಿರಂಗ ಪ್ರಕಟಣೆಯಲ್ಲಿ ತಿಳಿಸಿವೆ. ಬೂರ್ಜ್ವಾ ಭೂಮಾಲಿಕ ಸರ್ಕಾರಗಳು ಆಡಳಿತ ವರ್ಗ ಮತ್ತು ಶೋಷಕರ ಪರವಾಗಿ ಮಧ್ಯ ಪ್ರವೇಶ ಮಾಡುತ್ತಿರುವುದನ್ನು ಮತ್ತು ದುಡಿಯುವರ್ಗವನ್ನು ಅಲಕ್ಷಿಸಿ, ಕಾರ್ಮಿಕರು ಅಗತ್ಯ ನ್ಯಾಯದಿಂದ ವಂಚಿತರಾಗುವಂತೆ ಮಾಡುತ್ತಿರುವುದನ್ನು ಆಗಾಗ್ಗೆ ನೋಡುತ್ತಿದ್ದೇವೆ.

ಹೊಂಡಾ ಕಾರ್ಮಿಕರ ಮೇಲಿನ ಮೃಗೀಯ ಧಾಳಿಯ ದುಷ್ಕರ್ಮಿಗಳು - ಶಿಕ್ಷೆಗೆ ಒಳಪಡಲೇಬೇಕು. ನ್ಯಾಯಾಂಗ ತನಿಖೆ ತುರ್ತಾಗಿ ಆಗಬೇಕು. ತಪ್ಪಿತಸ್ಥ ಅಧಿಕಾರಿಗಳನ್ನು ಅಮಾನತ್ತಿನಲ್ಲಿಡಬೇಕು. ಗಾಯಗೊಂಡ ಕಾರ್ಮಿಕರಿಗೆ ಅಗತ್ಯ ವೈದ್ಯಕೀಯ ಸೇವೆ ವ್ಯವಸ್ಥೆ ಮಾಡಬೇಕು. ಸರ್ಕಾರ-ಪೊಲೀಸರು ಮತ್ತು ಕಾರ್ಪೊರೇಟ್ ಕಂಪನಿಗಳ ಕೂಟ ಉದ್ದೇಶಪೂರ್ವಕವಾಗಿ ಕಾರ್ಮಿಕರ ಮೂಲಭೂತ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ಧಿಕ್ಕರಿಸಿ ಶೋಷಣೆ ಮಾಡುವುದನ್ನು ಎಂದಿಗೂ ಜನತೆ ಸಹಿಸುವುದಿಲ್ಲ. ○

ಗುರುಗಾವ್ - ಪೋಲೀಸ್ ದೌರ್ಜನ್ಯ ಖಂಡಿಸಿ ಪ್ರತಿಭಟನೆ

ದಿನಾಂಕ 25.7.2005ರಂದು ಹರಿಯಾಣದ ಗುರುಗಾಂವ್‌ನಲ್ಲಿ (ಜಪಾನ್ ಮೂಲದ) ಹೊಂಡಾ ಮೋಟಾರ್ ಕಾರ್ಖಾನೆ ಕಾರ್ಮಿಕರ ಮೇಲೆ ನಡೆದ ಬರ್ಬರ ಅಮಾನುಷ ಪೋಲೀಸ್ ಧಾಳಿಯನ್ನು ಖಂಡಿಸಿ ಬೆಂಗಳೂರಿನ ಟೌನ್‌ಹಾಲ್ ಮುಂಭಾಗದಲ್ಲಿ ಜೆ.ಸಿ.ಟಿ.ಯು ನೇತೃತ್ವದಲ್ಲಿ ತುರ್ತು ಪ್ರತಿಭಟನೆ ನಡೆಸಲಾಯಿತು.

ನೂರಾರು ಸಂಖ್ಯೆಯಲ್ಲಿ ಸೇರಿದ್ದ ಕಾರ್ಮಿಕರು ಸುರಿಯುತ್ತಿರುವ ಮಳೆಯನ್ನೂ ಲೆಕ್ಕಿಸದೆ ಹೊಂಡಾ ಕಾರ್ಮಿಕರ ಮೇಲೆ ನಡೆದಿರುವ ಅಮಾನುಷ ಪೋಲೀಸ್ ಧಾಳಿಯನ್ನು ಖಂಡಿಸಿದರು.

ಪ್ರತಿಭಟನಾ ಸಭೆಯನ್ನುದ್ದೇಶಿಸಿ ಸಿಐಟಿಯುನ ಅಧ್ಯಕ್ಷರು, ಸಿಪಿಎಂ ಪಕ್ಷದ ಪಾಲಿಟ್‌ಬ್ಯೂರೊ ಸದಸ್ಯರಾದ ಕಾಂ.ಎಂ.ಕೆ.ಪಂಧೆ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ ನಾಯರ್, ಎಐಟಿಯುಸಿಯ ಪ್ರಧಾನ ಕಾರ್ಯದರ್ಶಿ ಕಾಂ.ಅನಂತ ಸುಬ್ಬರಾವ್ ಮತ್ತು ವಿಮಾ ನೌಕರರ ಸಂಘಟನೆಯ ಕಾಂ.ಗೀತಾ ಯುವಜನ ಸಂಘಟನೆಯ ಬಿರಾದಾರ್ ಮತ್ತು ಭರತ್‌ರಾಜ್, ಜನವಾದಿ ಮಹಿಳಾ ಸಂಘಟನೆಯ ಕಾಂ.ವಿಮಲಾ, ಇಪ್ಪಾದ ಸಾತಿ ಸುಂದರೇಶ್ ಮೈಕೊ ಕಾರ್ಮಿಕ ಸಂಘದ ಶಿವಶಂಕರ್, ಬಿ.ಇ.ಎಲ್ ಕಾರ್ಮಿಕ ಸಂಘದ ವಾಸುದೇವ್, ಟಯೋಟಾ ಕಿರ್ಲೋಸ್ಕರ್ ಮೋಟಾರ್ ಸಂಘದ ದೀಪಕ್ ಮತ್ತು ಕಾಂ.ಕೆ.ಪ್ರಕಾಶ್ ಮುಂತಾದವರು.

ಕಾರ್ಮಿಕರನ್ನು ಸರಕಿನ ಹಾಗೆ ಬಳಕೆ ಮಾಡಲು ಒತ್ತಡ ಹೆಚ್ಚಿಸುತ್ತಲೇ ಇರುವ ದೇಶಿಯ ಮತ್ತು ಬಹುರಾಷ್ಟ್ರೀಯ ಬಂಡವಾಳಿಗರು ಲಾಭ, ಲಾಭಕೋರತನ ಪರಮಲಾಭಕೋರತನಕ್ಕಾಗಿ ಕಾರ್ಮಿಕರನ್ನು ಹೆಚ್ಚೆಚ್ಚು ಶೋಷಣೆ ಮಾಡುತ್ತಿದ್ದಾರೆ. ಹೊಂಡಾ ಕಾರ್ಖಾನೆಯ ನಾಲ್ವರು ಕಾರ್ಮಿಕರನ್ನು ಅಕ್ರಮವಾಗಿ ವಜಾಗೊಳಿಸಿದ್ದನ್ನು ಪ್ರಶ್ನಿಸಿದ್ದಕ್ಕಾಗಿ ಐವತ್ತು ಜನರನ್ನು ಅಮಾನತ್ತು ಮಾಡಿದುದರ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದ ಕಾರ್ಮಿಕರ ಮೇಲೆ ಅನಗತ್ಯ ಲಾಠಿ ಚಾರ್ಜ್ ಮಾಡಿದ ಪೋಲೀಸ್‌ರ ಕ್ರಮವನ್ನು ಎಲ್ಲರೂ ಖಂಡಿಸಿ, ತಪ್ಪಿತಸ್ಥ ಅಧಿಕಾರಿಗಳನ್ನು ದಂಡನೆಗೆ ಒಳಪಡಿಸಬೇಕೆಂದು ಒತ್ತಾಯಿಸಿದರು. ಗಾಯಗೊಂಡಿರುವ 700ಕ್ಕೂ ಹೆಚ್ಚು ಕಾರ್ಮಿಕರನ್ನು ನೋಡಿದರೆ 1920ರಲ್ಲಿ ಜಲಿಯನ್‌ವಾಲಾ ಭಾಗ್‌ನಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಮೇಲೆ ಬ್ರಿಟೀಷರು ನಡೆಸಿದ ಕ್ರೌರ್ಯಕ್ಕೆ ಹೋಲಿಕೆಯಾಗುತ್ತಿದೆ.



ಬೆಂಗಳೂರಿನಲ್ಲಿ ಪ್ರತಿಭಟನೆ

ಪೋಲೀಸರು ಏಜೆಂಟರು ಮಾತ್ರ. ಲಾಠಿ ಏಟಿನ ಮೂಲ ಜಾಗತೀಕರಣವಾಗಿದೆ. ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳದ ಆಕರ್ಷಣೆ ನಮ್ಮ ಸರ್ಕಾರಗಳನ್ನು ಗುಲಾಮರನ್ನಾಗಿಸುತ್ತಿದೆ. ಇದರ ವಿರುದ್ಧ ಕಾರ್ಮಿಕ ವರ್ಗದ ಹೋರಾಟಗಳು ರಾಜಕೀಯ ದಿಕ್ಕು ಬದಲಿಸುತ್ತವೆ.

ಇಂದು ಕಾರ್ಮಿಕ ವರ್ಗ ದೇಶದ ಸ್ವಾತಂತ್ರ್ಯ ಮತ್ತು ಕಾನೂನುಗಳನ್ನು ರಕ್ಷಿಸಲು ಸಂಘಟಿತರಾಗಿ ಎರಡನೇ ಸ್ವಾತಂತ್ರ್ಯ ಸಮರಕ್ಕೆ ಸಿದ್ಧವಾಗಲೇಬೇಕಾದ ಸ್ಥಿತಿ ನಿರ್ಮಾಣವಾಗಿದೆ.

ಹರ್ಯಾಣದ ಹೊಂಡಾ ಮತ್ತು ಬೆಂಗಳೂರಿನ ಟೊಯೋಟಾ ಎರಡೂ ಜಪಾನ್ ಮೂಲದ ಬಹುರಾಷ್ಟ್ರೀಯ ಕಂಪನಿಗಳಾಗಿವೆ. ಎರಡರಲ್ಲೂ ಕಾರ್ಮಿಕರು ಹೋರಾಟ-ಬಲಿದಾನಗಳಿಂದ ಗಳಿಸಿದ ಕಾನೂನುಗಳನ್ನು ಉಲ್ಲಂಘಿಸುತ್ತಿದ್ದಾರೆ. ಸರ್ಕಾರಗಳು ಗುಲಾಮರಂತೆ ಮೂಕ ಪ್ರೇಕ್ಷಕರಾದರೆ ಹೋರಾಟಗಳ ಮೂಲಕ ತಕ್ಕ ಪಾಠ ಕಲಿಸುತ್ತಾರೆಂದು ಎಚ್ಚರಿಕೆ ಕೊಡಲಾಯಿತು. ಮಾತನಾಡಿದ ಎಲ್ಲರೂ ಹೊಂಡಾ ಮತ್ತು ಟೊಯೋಟಾ ಕಾರ್ಮಿಕರ ಹೋರಾಟ ಬೆಂಬಲಿಸಿ ಮಾತನಾಡಿದರು.

ಕಾಂ.ವರಲಕ್ಷ್ಮಿ ಸ್ವಾಗತ ಮಾಡಿದರೆ ಕಾಂ.ಲಕ್ಷ್ಮಿ, ಬಸಮ್ಮ, ಲೀಲಾವತಿ ಕ್ರಾಂತಿಗೀತೆ ಹಾಡಿದರು. ಕಾಂ.ಗೋಪಾಲಗೌಡರು ವಂದನಾರ್ಪಣೆ ಮಾಡಿದರು. ಈ ದೌರ್ಜನ್ಯವನ್ನು ಖಂಡಿಸಿ ಸಿಐಟಿಯು ಮತ್ತು ಸಿಪಿಐ(ಎಂ) ನೇತೃತ್ವದಲ್ಲಿ ಗುಲ್ಬರ್ಗ, ಕುಂದಾಪುರ, ಮೈಸೂರು ಮುಂತಾದ ಕಡೆಗಳಲ್ಲಿ ಸಹ ಪ್ರತಿಭಟನೆಗಳು ನಡೆದಿವೆ.

- ಹನುಮಂತರಾವ್ ಹವಾಲ್ದಾರ್

ಉಡುಪಿಯಲ್ಲಿ ಪ್ರತಿಭಟನೆ



ಆರ್ಥಿಕ ನೀತಿಗಳ ದಿಕ್ಕು ಬದಲಿಸಲು ದೇಶವ್ಯಾಪಿ ಹೋರಾಟ
ಸಾರ್ವತ್ರಿಕ ಕಾರ್ಯಾಚರಣೆ ಕಾರ್ಮಿಕ ಸಂಘಗಳ ನಿರ್ಧಾರ
ಸೆಪ್ಟೆಂಬರ್ 29ರಂದು ಸಾರ್ವತ್ರಿಕ ಮುಷ್ಕರ

ದೇಶವಿರೋಧಿ, ಕಾರ್ಮಿಕ ವಿರೋಧಿ ನೀತಿಗಳ ಮೂಲಕ ರಾಷ್ಟ್ರವನ್ನು ವಿನಾಶದ ಅಂಚಿಗೆ ಹೊತ್ತೊಯ್ಯುತ್ತಿದ್ದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರಕ್ಕೆ ಕಳೆದ ಸಾರ್ವತ್ರಿಕ ಚುನಾವಣೆಗಳಲ್ಲಿ ರಾಷ್ಟ್ರದ ದುಡಿವ ಜನತೆ 'ಬಹುದಿನಗಳವರೆಗೆ ನೆನಪಿಡಬೇಕಾದ' ತಿರುಗೇಟು ನೀಡಿದ್ದಾರೆ. ಕಳೆದ ಚುನಾವಣೆಯ ಜನಾದೇಶ ಪಾಲಿಸಲು ಈಗಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಸಹ ಸಿದ್ಧವಿಲ್ಲ ಎಂಬುದು ದಿನೇ ದಿನೇ ಸಾಬೀತಾಗುತ್ತಿದೆ. ದೇಶದ ಹೆಮ್ಮೆಯ ಸಾರ್ವಜನಿಕ ಕಾರ್ಖಾನೆಗಳನ್ನು ಖಾಸಗೀಕರಿಸುವ ನಿರ್ಲಜ್ಜ ನೀತಿಯನ್ನು ಹಿಡಿದು ಅದೇ ಜಾಗತೀಕರಣದ ಹಾದಿಯಲ್ಲಿ ಹೆಜ್ಜೆಯಿಡುತ್ತಿದೆ. ಇತ್ತ ದುಡಿಯುವ ವರ್ಗ ಈ ದೇಶದ್ರೋಹಿ ನೀತಿಗಳ ವಿರುದ್ಧ ಮಹಾ ಸಂಘರ್ಷಕ್ಕೆ ಸಜ್ಜಾಗುತ್ತಿದೆ. ದೆಹಲಿಯಲ್ಲಿ ನಡೆದ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಸಮಾವೇಶದ ವರದಿ ಇಲ್ಲಿದೆ.



ದೇಶದ ಕಾರ್ಮಿಕ ಸಂಘಟನೆಗಳು- ದೇಶವನ್ನು ವಿನಾಶದತ್ತ ಒಯ್ಯುತ್ತಿರುವ ಆರ್ಥಿಕ ನೀತಿಗಳ ವಿರುದ್ಧ ಮತ್ತೊಮ್ಮೆ ವ್ಯಾಪಕ ಹೋರಾಟಕ್ಕೆ ಸಿದ್ಧಗೊಳ್ಳುತ್ತಿವೆ. ಜುಲೈ 9ರಂದು ನವದೆಹಲಿಯ ಮಾವಳಂಕರ್ ಸಭಾಂಗಣದಲ್ಲಿ ನಡೆದ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮಾವೇಶ ಒಂದು ಘೋಷಣೆಯನ್ನು ಅಂಗೀಕರಿಸಿ 16 ಬೇಡಿಕೆಗಳ ಮೇಲೆ (ಬಾಕ್ಸ್ ನೋಡಿ) ಕಾರ್ಯಾಚರಣೆಯ ಕಾರ್ಯಕ್ರಮವನ್ನು ದೇಶದ ದುಡಿಯುವ ಜನಗಳ ಮುಂದಿಟ್ಟಿದೆ. ಜುಲೈ 20ರಿಂದ ಆರಂಭವಾಗುವ ಈ ಕಾರ್ಯಕ್ರಮದ ಕೊನೆಯಲ್ಲಿ ಸೆಪ್ಟೆಂಬರ್ 29, 2005ರಂದು ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸಲು ನಿರ್ಧರಿಸಲಾಗಿದೆ.(ಬಾಕ್ಸ್ ನೋಡಿ) ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಈ ಸಮಾವೇಶವನ್ನು ಸಂಘಟಿಸಿತ್ತು. ಬಿಎಂಎಸ್, ಇಂಟಕ್ ಬಿಟ್ಟು ಇತರ ಕೇಂದ್ರ ಕಾರ್ಮಿಕ ಸಂಘಟನೆಗಳು, ಬ್ಯಾಂಕು, ವಿಮೆ, ದೂರಸಂಪರ್ಕ, ಅಂಚೆ, ಪೆಟ್ರೋಲಿಯಂ, ರೈಲ್ವೆ, ರಕ್ಷಣಾ ವಲಯ, ನಾಗರಿಕ ವಿಮಾನಯಾನ ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರಿ ನೌಕರರ ಸಂಘಟನೆಗಳ ಪ್ರತಿನಿಧಿಗಳು ಭಾರಿ ಸಂಖ್ಯೆಯಲ್ಲಿ ಈ ರಾಷ್ಟ್ರೀಯ ಸಮಾವೇಶದಲ್ಲಿ ಭಾಗವಹಿಸಿದ್ದರು.

ಸಮಾವೇಶ ಭಾರತದ ದುಡಿಯುವ ಜನಗಳ ಮುಂದಿರುವ ಪ್ರಸಕ್ತ ಸವಾಲುಗಳ ಪರಿಶೀಲನೆ ನಡೆಸಿ ಒಂದು ಘೋಷಣೆಯನ್ನು ಅಂಗೀಕರಿಸಿದೆ.

ಎನ್.ಡಿ.ಎ. ಸರ್ಕಾರವನ್ನು ಅಧಿಕಾರದಿಂದ ಇಳಿಸಿದ 2004ರ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶವನ್ನು ಭಾರತದ ದುಡಿಯುವ ಜನತೆ ಸ್ವಾಗತಿಸಿದ್ದಾರೆ. ಏಕೆಂದರೆ ಈ ಸರಕಾರ ಕೆಲವು ಭಾರೀ ಶ್ರೀಮಂತರನ್ನು ಬಿಟ್ಟು ಇತರ ಭಾರತೀಯ ಸಮಾಜದ ಎಲ್ಲಾ ಜನವಿಭಾಗಗಳಿಗೆ ವಿನಾಶಕಾರಿಯಾಗಿತ್ತು ಎಂದು ಘೋಷಣೆ ಹೇಳಿದೆ.

ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರ ತನ್ನ ಆರು ವರ್ಷಗಳ ಆಡಳಿತದಲ್ಲಿ ದೇಶದ ಮೂಲಭೂತ ಸಮಸ್ಯೆಗಳನ್ನು ಎದುರಿಸುವಲ್ಲಿ ವಿಫಲವಾಗಿದೆ; ಹಣದುಬ್ಬರವನ್ನು ತಡೆಯಲು, ಹೂಡಿಕೆದರವನ್ನು ಹೆಚ್ಚಿಸಲು, ಉದ್ಯೋಗ ಸೃಷ್ಟಿಗೆ ಪ್ರೋತ್ಸಾಹ ನೀಡಲು, ಬಡತನ ಬಗೆಹರಿಸಲು ಅದಕ್ಕಾಗಲಿಲ್ಲ; ಕೋಟಿಗಟ್ಟಲೆ ಜನರಿಗೆ ಆಹಾರ ಭದ್ರತೆ ಒದಗಿಸಲೂ ಅದಕ್ಕೆ ಸಾಧ್ಯವಾಗಲಿಲ್ಲ. ಬದಲಾಗಿ ಬಹುರಾಷ್ಟ್ರೀಯ ಕಂಪನಿಗಳಿಗೆ ನಮ್ಮ ದೇಶದೊಳಗಿನ ಉಳಿತಾಯವನ್ನು ಸಂಗ್ರಹಿಸಲು ಅವಕಾಶ ನೀಡಿತು, ದುಡಿಯುವ ಜನ ವಿಭಾಗಗಳನ್ನು ಕ್ಯಾಶುವಲ್ ಕಾರ್ಮಿಕರ ಮಟ್ಟಕ್ಕೆ ಇಳಿಸಿತು. ಆರ್ಥಿಕ ವ್ಯವಸ್ಥೆಯಲ್ಲಿ ದಾರಿದ್ರ್ಯಕ್ಕೆ ತಳ್ಳಲ್ಪಟ್ಟ ಬಹುಪಾಲು ಜನರ ಪರವಾಗಿ ಮಧ್ಯಪ್ರವೇಶಿಸಲಾಗದಷ್ಟು ಸರಕಾರವನ್ನು ದುರ್ಬಲಗೊಳಿಸಿತು. ಮುಷ್ಕರದ ಹಕ್ಕಿನ ವಿರುದ್ಧ ಸುಪ್ರಿಂ ಕೋರ್ಟಿನ ತೀರ್ಪಿನ ದುಷ್ಪರಿಣಾಮಗಳನ್ನು ಸರಿಪಡಿಸಲು ಸರಕಾರ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದರೂ ಏನೂ ಮಾಡಲಿಲ್ಲ ಎಂದಿರುವ ಈ ಘೋಷಣೆ ಕಳೆದ ಕೆಲವು ವರ್ಷಗಳಿಂದ ದೇಶದ ಕಾರ್ಮಿಕ ಸಂಘಗಳು ಈ ನೀತಿಗಳ ವಿರುದ್ಧ ವಿವಿಧ ವಲಯಗಳಲ್ಲಿ ಐಕ್ಯ ಹಾಗೂ ನಿರಂತರ ಹೋರಾಟಗಳನ್ನು ನಡೆಸಿರುವುದನ್ನು ನೆನಪಿಸಿದೆ.

ಯುಪಿಎ ನೀತಿಯೂ ನಿರಾಶಾದಾಯಕ

ಈ ಹಿನ್ನೆಲೆಯಲ್ಲಿ ಯುಪಿಎ ಸರಕಾರ ವಿಳಂಬ ಮಾಡದೆ ದೇಶದ ಸಂಕಟಗ್ರಸ್ತ ದುಡಿಯುವ ಜನಗಳಿಗೆ ತಕ್ಷಣವೇ ಪರಿಹಾರ ನೀಡುವ ಕೆಲಸವನ್ನು ಕೈಗೆತ್ತಿಕೊಳ್ಳುತ್ತದೆ ಎಂದು ನಿರೀಕ್ಷಿಸಲಾಗಿತ್ತು. ನೀತಿಗಳಲ್ಲಿ ಜನಪರ ಬದಲಾವಣೆ ತರುವ ಕೆಲಸ ಆರಂಭಿಸುತ್ತದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಹದಿನಾಲ್ಕು ತಿಂಗಳ ಅನುಭವ ನಿರಾಶಾದಾಯಕವಾಗಿದೆ ಎಂದು ಘೋಷಣೆ ಬೇಸರ ವ್ಯಕ್ತಪಡಿಸಿದೆ. ಯುಪಿಎ ಸರಕಾರ ಅಂಗೀಕರಿಸಿದ ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ಆರ್ಥಿಕ ಸುಧಾರಣಾಪರ ಒಲವು ಇದ್ದರೂ ಕೆಲವು ಜನಪರ ಕ್ರಮಗಳನ್ನು ಜ್ಯಾರಿ ಮಾಡುವ ವಚನವಿತ್ತು. ಕಾರ್ಮಿಕ-ಮ್ಯಾನೇಜ್‌ಮೆಂಟ್ ಸಂಬಂಧಗಳಲ್ಲಿ ಸಮಾಲೋಚನೆ, ಸಹಕಾರ ಮತ್ತು ಸೌಹಾರ್ದ ಇರುತ್ತದೆ, ಕಿತ್ತಾಟ ಇರುವುದಿಲ್ಲ ಎಂದು ಹೇಳಲಾಗಿತ್ತು; ತ್ರಿಪಕ್ಷೀಯ ಸಮಾಲೋಚನೆಗಳ ಭರವಸೆ ನೀಡಲಾಗಿತ್ತು. ಆದರೆ ದುಡಿಯುವ ಜನಗಳಿಗೆ ಸಂಬಂಧಪಟ್ಟ ಹಲವು ಪ್ರಶ್ನೆಗಳಲ್ಲಿ ಕಾರ್ಮಿಕರ ಸಂಘಗಳೊಂದಿಗೆ ಏನೊಂದೂ ಸಮಾಲೋಚನೆ ನಡೆಸದೆ ಏಕಪಕ್ಷೀಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಸಮಾವೇಶದ ಘೋಷಣೆ ಟೀಕಿಸಿದೆ.



ಅತ್ಯುನ್ನತ ತ್ರಿಪಕ್ಷೀಯ ವ್ಯವಸ್ಥೆಯಾದ ಭಾರತೀಯ ಕಾರ್ಮಿಕ ಸಮ್ಮೇಳನಗಳನ್ನು ನಡೆಸಿಯೇ ಇಲ್ಲ, ಕೃಷಿ ಕೂಲಿಕಾರರಿಗೆ ಸಮಗ್ರ ಕಾನೂನಿನ ಭರವಸೆ ಈಡೇರಲಿಲ್ಲ, ಅಸಂಘಟಿತರ ಕಲ್ಯಾಣದ ಬಗ್ಗೆ ಪೊಳ್ಳು ಮಾತುಗಳಷ್ಟೆ. ಉದ್ಯೋಗರಹಿತ ಬೆಳವಣಿಗೆಯ ಪ್ರವೃತ್ತಿಯನ್ನು ಬದಲಿಸಲಾಗುವುದು ಎಂದು ಹೇಳಿಕೊಂಡರೂ, ಉದ್ಯೋಗ ಭರವಸೆ

ಪುಟ 8 ಕ್ಕೆ

ಬೇಡಿಕೆಗಳು

1. ಸರ್ಕಾರದ ನಿಧಿ ಮತ್ತು ಸರಿಯಾದ ನಿಯಂತ್ರಣದೊಡನೆ ಕೂಡಿದ ಅಸಂಘಟಿತ ಕಾರ್ಮಿಕರ ಮತ್ತು ಕೃಷಿ ಕಾರ್ಮಿಕರ ಸೇವಾ ಭದ್ರತೆ ಮತ್ತು ಸಾಮಾಜಿಕ ಭದ್ರತೆಗೆ ಬೇಕಾದ ಶಾಸನವನ್ನು ರಚಿಸಬೇಕು.
2. ರಾಷ್ಟ್ರೀಯ ಸಾಮಾನ್ಯ ಕನಿಷ್ಠ ಕಾರ್ಯಕ್ರಮದಲ್ಲಿ ತಿಳಿಸಿರುವಂತೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಮಸೂದೆಗೆ ಸೂಕ್ತವಾದ ಬದಲಾವಣೆಗಳನ್ನು ತರುವುದರ ಮೂಲಕ ಗ್ರಾಮೀಣ ಮತ್ತು ನಗರಗಳ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶವನ್ನು ಕಲ್ಪಿಸಬೇಕು.
3. ಉದ್ಯೋಗಾವಕಾಶಗಳ ಕಡಿತವನ್ನು ನಿಲ್ಲಿಸುವುದು, ಗುತ್ತಿಗೆ ಪದ್ಧತಿಯನ್ನು ನಿಲ್ಲಿಸುವುದು, ನೇಮಕಾತಿ ತಡೆಯನ್ನು ತೆಗೆಯುವುದು.
4. ವಿಶೇಷ ಆರ್ಥಿಕ ವಲಯಗಳನ್ನು ಮತ್ತು ರಫ್ತು ವಲಯಗಳನ್ನು ಒಳಗೊಂಡ ಕಾರ್ಮಿಕರಿಗೆ ಅನ್ವಯಿಸುವ ಕನಿಷ್ಠ ವೇತನವನ್ನು ಒಳಗೊಂಡ ಕಾರ್ಮಿಕರ ಕಾನೂನುಗಳನ್ನು ತಪಾಸಣೆ ಮಾಡುವ ಮತ್ತು ಜಾರಿಗೊಳಿಸುವ ಅಧಿಕಾರಿಗಳಿಗೆ ಅಧಿಕಾರ ನೀಡುವುದು; ಸಡಿಲತೆಯ ಹೆಸರಿನಲ್ಲಿ ಕಾರ್ಮಿಕ ಕಾನೂನುಗಳಿಗೆ ಬದಲಾವಣೆ ತರುವುದನ್ನು ನಿಲ್ಲಿಸುವುದು.
5. ಕೆಲಸದ ಸ್ಥಳಗಳಲ್ಲಿ ಮಹಿಳಾ ಕಾರ್ಮಿಕರಿಗೆ ರಕ್ಷಣೆ ಒದಗಿಸುವುದು ಮತ್ತು ದೌರ್ಜನ್ಯ ಹಾಗೂ ಲೈಂಗಿಕ ಕಿರುಕುಳಗಳನ್ನು ತಡೆಗಟ್ಟಲು ಶಾಸನ ತರುವುದು.
6. ರಾಷ್ಟ್ರೀಕೃತ ಬ್ಯಾಂಕುಗಳು, ವಿಮಾನ ನಿಲ್ದಾಣಗಳು, ಸಂಪರ್ಕ ವಿಭಾಗಗಳನ್ನು ಒಳಗೊಂಡ ಸಾರ್ವತ್ರಿಕ ಕ್ಷೇತ್ರದ ಲಾಭದಾಯಕವಾದ ವಲಯಗಳಲ್ಲಿ ಖಾಸಗೀಕರಣ, ಬಂಡವಾಳ ಹಿಂತೆಗೆತವನ್ನು ನಿಲ್ಲಿಸಬೇಕು; ಸಾರ್ವತ್ರಿಕ ಸೇವಾ ವಲಯಗಳ ಖಾಸಗೀಕರಣವನ್ನು ನಿಲ್ಲಿಸುವುದು; ಬ್ಯಾಂಕುಗಳನ್ನು ಒಂದುಗೂಡಿಸುವುದನ್ನು ನಿಲ್ಲಿಸುವುದು; ರಕ್ಷಣಾ ಉತ್ಪಾದನಾ ಘಟಕಗಳನ್ನು ಕಾರ್ಪೊರೇಟೈಸೇಶನ್ ಮಾಡುವುದನ್ನು ನಿಲ್ಲಿಸುವುದು.
7. ಸಮರ್ಥವಿರುವ ಆದರೆ ರೋಗಗ್ರಸ್ತವಾಗಿರುವ ಸಾರ್ವಜನಿಕ ಕ್ಷೇತ್ರದ ಮತ್ತು ನಷ್ಟದಲ್ಲಿರುವ ಕಾರ್ಖಾನೆಗಳನ್ನು ಪುನರುಜ್ಜೀವನಗೊಳಿಸಲು ಬೇಕಾದ ಕ್ರಮಗಳನ್ನು ಕೂಡಲೇ ತೆಗೆದುಕೊಳ್ಳುವುದು.
8. ಸಂಪರ್ಕವಲಯ ಮತ್ತು ರಕ್ಷಣಾ ಉತ್ಪಾದನಾ ಘಟಕದಲ್ಲಿ ವಿದೇಶಿ ಬಂಡವಾಳ ಹೂಡಲು ತೆಗೆದುಕೊಂಡಿರುವ ಕ್ರಮಗಳನ್ನು ರದ್ದುಗೊಳಿಸುವುದು; ಬ್ಯಾಂಕಿಂಗ್ ಮತ್ತು ವಿಮಾ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳವನ್ನು ಹೆಚ್ಚಿಸಲು ಇಟ್ಟಿರುವ ಪ್ರಸ್ತಾಪವನ್ನು ಕೈಬಿಡುವುದು, ಕಲ್ಲಿದ್ದಲು, ಚಿಲ್ಲರೆ ವ್ಯಾಪಾರ, ಮತ್ತು ನಿವೃತ್ತಿ ವೇತನ ವಲಯಗಳಲ್ಲಿ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ನಿಲ್ಲಿಸುವುದು; ಬ್ಯಾಂಕಿಂಗ್ ನಿಯಂತ್ರಣ ಕಾಯಿದೆ ಮತ್ತು ಭಾರತದ ರಿಸರ್ವ್ ಬ್ಯಾಂಕ್ ಕಾಯಿದೆ ಸೂಚಿಸಿರುವ ಬದಲಾವಣೆಗಳನ್ನು ಹಿಂತೆಗೆದುಕೊಳ್ಳುವುದು.
9. 2003ರ ವಿದ್ಯುತ್ ಕಾಯಿದೆ ಹಾಗೂ ಫೆಬ್ರವರಿ 3,2005ರಲ್ಲಿ ಘೋಷಿಸಿರುವ ರಾಷ್ಟ್ರೀಯ ವಿದ್ಯುತ್ ನೀತಿಯನ್ನು ಪುನರ್‌ಪರಿಶೀಲಿಸುವುದು; ರಾಜ್ಯ ವಿದ್ಯುತ್ ಮಂಡಳಿಗಳ ವಿಸರ್ಜಿಸುವುದು ಮತ್ತು ಅಡ್ಡ ಸಹಾಯಧನ ನೀಡುವುದಕ್ಕೆ ಇರುವ ನಿರ್ಬಂಧಗಳನ್ನು ರದ್ದುಗೊಳಿಸುವುದು; ಗ್ರಾಮಾಂತರ ಮತ್ತು ನಗರ ಪ್ರದೇಶಗಳ ವಿಭಜನೆಯನ್ನು ರದ್ದುಗೊಳಿಸುವುದು, ನಗರದ ಬಡ ವರ್ಗಗಳಿಗೆ ಹಾಗೂ ಗ್ರಾಮಾಂತರದಲ್ಲಿರುವ ಕೃಷಿ ಕ್ಷೇತ್ರಕ್ಕೆ ಸರಬರಾಜು ನಿಶ್ಚಿತಗೊಳಿಸುವುದು.
10. ಸರ್ಕಾರಿ ನೌಕರರನ್ನೊಳಗೊಂಡು ಎಲ್ಲಾ ಕಾರ್ಮಿಕರಿಗೂ ಮುಷ್ಕರದ ಹಕ್ಕನ್ನು ನೀಡುವ ಕಾಯಿದೆಯನ್ನು ತಕ್ಷಣ ತರುವುದು.
11. ಸರ್ಕಾರಿ ನೌಕರರಿಗೆ 6ನೇ ವೇತನ ಮಂಡಳಿಯನ್ನು ರಚಿಸುವುದು.
12. ಬೋನಸ್ ಕಾಯಿದೆಯಲ್ಲಿರುವ ಅರ್ಹತೆಗೆ ಸಂಬಂಧಪಟ್ಟ ಮಿತಿ ಮತ್ತು ಬೋನಸ್ ಮೊತ್ತದ ಗರಿಷ್ಠ ಮಿತಿಯನ್ನು ರದ್ದುಗೊಳಿಸುವುದು.
13. ಎಪಿಎಫ್, ಜಿಪಿಎಫ್, ಸಿಎಂಪಿಎಫ್, ಪಿಪಿಎಫ್ ಮತ್ತು ಸಣ್ಣ ಉಳಿತಾಯಗಳಿಗೆ ಬಡ್ಡಿದರವನ್ನು ಹೆಚ್ಚಿಸುವುದು; ಹೊಸ ನಿವೃತ್ತಿ ವೇತನ ಪದ್ಧತಿಯನ್ನು ಮತ್ತು ಪಿಎಫ್‌ಆರ್‌ಡಿಎ ಮಸೂದೆಯನ್ನು ರದ್ದುಗೊಳಿಸುವುದು; ಹೊಸ ಸರ್ಕಾರಿ ನೌಕರರಿಗೆ 2004ರ ಹಿಂದೆ ಇದ್ದಂತೆ ನಿವೃತ್ತಿ ವೇತನ ಯೋಜನೆಯನ್ನು ಜಾರಿಗೆ ತರುವುದು.
14. ಭೂಸುಧಾರಣೆಯನ್ನು ಜಾರಿಗೆ ತರುವುದು ಮತ್ತು ನೀರಾವರಿ ಯೋಜನೆಗಳಿಗೆ ಹೆಚ್ಚಿನ ಸಾರ್ವಜನಿಕ ಹೂಡಿಕೆಯನ್ನು ಮಾಡುವುದು.
15. ಸಾರ್ವತ್ರಿಕ ಸರಬರಾಜು (ರೇಷನ್)ಪದ್ಧತಿಯನ್ನು ಬಲಿಷ್ಠಗೊಳಿಸುವುದು.
16. ಬೃಹತ್ ಕಂಪನಿಗಳ ಮತ್ತು ವ್ಯಾಪಾರಿಗಳು ಕೊಡಬೇಕಾದ ತೆರಿಗೆ ಬಾಕಿಯನ್ನು ವಸೂಲು ಮಾಡುವುದು ಹಾಗೂ ಮರಳಿಬಾರದ ಸಾಲ ಎಂದು ಘೋಷಿಸಿರುವ ಎನ್‌ಪಿಎ ಸಾಲವನ್ನು ಶ್ರೀಮಂತರಿಂದ ವಸೂಲು ಮಾಡುವುದಕ್ಕೆ ಬೇಕಾದ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವುದು.

ಮೊದಲ ಅಣ್ವಸ್ತ್ರ ನರಮೇಧದ 60ನೇ ವರ್ಷ

'ಹಿರೋಶಿಮಾ'ಗಳು ಮತ್ತೆಂದೂ ಬೇಡ!

ಈ ಆಗಸ್ಟ್‌ಗೆ ಜಪಾನ್‌ನ ಹಿರೋಷಿಮಾ ನಾಗಾಸಾಕಿಗಳಲ್ಲಿ ನಡೆದ ಜಗತ್ತಿನ ಮೊದಲ ಮತ್ತು ಏಕಮಾತ್ರ ಅಣ್ವಸ್ತ್ರ ನರಮೇಧದ 60ನೇ ವಾರ್ಷಿಕ. 'ಹಿರೋಶಿಮಾಗಳು ಮತ್ತೆಂದು ಬೇಡ' ಎಂಬ ಶಾಂತಿಪ್ರಿಯ ಜನತೆಯ ಆಶಯ ಈ 60 ವರ್ಷಗಳಲ್ಲಿ ಎಷ್ಟರ ಮಟ್ಟಿಗೆ ಈಡೇರಿದೆ? ಇಡೀ ಜಗತ್ತನ್ನು ಹಲವಾರು ಬಾರಿ ನಾಶ ಮಾಡಬಲ್ಲ ಅಣ್ವಸ್ತ್ರಗಳು ರಾಶಿ ಬಿದ್ದಿರುವ ಇಂದಿನ ಪರಿಸ್ಥಿತಿಯಲ್ಲಿ ಇಂತಹ ಆಶಯ ಈಡೇರಲು ಏನು ಮಾಡಬಹುದು? ಹಿರೋಶಿಮಾ ನೆನಪಿಸಿಕೊಳ್ಳುತ್ತಾ ಈ ಬಗ್ಗೆ ಚರ್ಚಿಸುತ್ತಾರೆ ವಿಜ್ಞಾನಿ ಡಾ|| ಎಸ್.ಚಟರ್ಜಿ.


ಆಗಸ್ಟ್ 1945 ಎರಡನೇ ಮಹಾಯುದ್ಧದ ಕರಾಳ ಅಧ್ಯಾಯ ಮುಗಿದು ಜಗತ್ತಿನ ಜನ ನಿರಾಳವಾಗಿ ಉಸಿರುಬಿಡುವಂತೆ ಆಗಿತ್ತು. ಜಪಾನ್ ಸೈನ್ಯ ಮಾತ್ರ ಇನ್ನೂ ಶರಣಾಗತವಾಗದೆ ಮಿಲಿಟರಿ ಕಾರ್ಯಾಚರಣೆ ನಡೆಸಿತ್ತು. ಆದರೂ ಎಲ್ಲಾ ಕಡೆ ಸೋಲುತ್ತಿತ್ತು. ಮಾರ್ಚ್-ಏಪ್ರಿಲ್‌ನಲ್ಲಿ ತನ್ನ ನಗರಗಳ ಮೇಲೆ ಭಾರಿ ಬಾಂಬ್ ಧಾಳಿ ಎದುರಿಸಿದ; ಜಪಾನಿಯರು ಈ ಹೊತ್ತಿಗೆ ಸ್ವಲ್ಪ ನಿರಾಳವಾಗಿ ನಿಟ್ಟುಸಿರು ಬಿಡುವಂತೆ ಆಗಿತ್ತು. ಆಗಸ್ಟ್ 6, 1945 ಬೆಳಕು ಹರಿಯುತ್ತಿತ್ತು. ಜನ ಹೊರಗೆ ಓಡಾಡಲು ಆರಂಭಿಸಿದ್ದರು. ತಾಯಂದಿರು ಮಕ್ಕಳನ್ನು ಕರೆದುಕೊಂಡು ಪಾರ್ಕಿನಲ್ಲಿ ಆಡ್ಡಾಡುವ ಮನಸ್ಸು ಮಾಡಿದ್ದರು. ಹಿರೋಶಿಮಾದಲ್ಲೂ ಜನ ಇದನ್ನೇ ಮಾಡುತ್ತಿದ್ದರು. ಆದರೆ 8.20ರ ಬೆಳಿಗ್ಗೆನೇ, ಹಿರೋಶಿಮಾ ನರಕ ಸದೃಶವಾಗಿತ್ತು. ಅಂದು ಜಗತ್ತಿನ ಮೊದಲ ಬಾರಿಗೆ ಅಮೆರಿಕ ಅಣುಬಾಂಬನ್ನು ಹಿರೋಶಿಮಾ ಮೇಲೆ ಹಾಕಿತ್ತು.

ಮೊದಲ ವಾರದಲ್ಲೇ 70 ಸಾವಿರ ಜನ ಸತ್ತರು. ಹಿರೋಶಿಮಾದ ಮೇಲೆ ಹಾಕಲಾದ ಅಣುಬಾಂಬ್‌ನ ಪರಿಣಾಮವಾಗಿ ಹಲವು ವರ್ಷಗಳ ವರೆಗೆ ಜನ ಸಾಯುತ್ತಿದ್ದರು. ಇಂದೂ ಹಲವರು ಸತ್ತು ಬದುಕಿದ್ದಾರೆ. ಈ ಬರ್ಬರ ಕೃತ್ಯ ಮಾಡಿದ್ದು ಅಮೆರಿಕನ್ ಸರ್ಕಾರ. ಜಪಾನಿನ ಫ್ಯಾಸಿಸ್ಟ್ ಸರ್ಕಾರ ಶರಣಾಗತವಾಗುತ್ತಿಲ್ಲ, ಆಕ್ರಾಮಕ ಕೃತ್ಯ ಮುಂದುವರಿಸುತ್ತಿದೆ ಎಂದು ಹಿರೋಶಿಮಾ ನಾಗರಿಕರ ನರಮೇಧ ಮಾಡಿತ್ತು.

ಹಿರೋಶಿಮಾದ ನರಮೇಧ ಮತ್ತು ಇಡೀ ನಗರ ನೆಲಸಮವಾದ ಸುದ್ದಿಯ ವಿವರ ಜಗತ್ತಿಗೆ ಗೊತ್ತಾಗುತ್ತಿದ್ದಂತೆ ಎಲ್ಲರೂ ಸ್ತಂಭಿಭೂತರಾಗಿದ್ದರು. ಆದರೂ ಅಮೆರಿಕ ಜಗತ್ತಿಗೆ ಯಾವ ರೀತಿಯ ಬಾಂಬ್ ಬಳಸಲಾಯಿತು ಎಂದು ಹೇಳಲಿಲ್ಲ. ಬದಲಾಗಿ ಮೂರು ದಿನಗಳ ನಂತರ ಆಗಸ್ಟ್ 9 ರಂದು ನಾಗಾಸಾಕಿಯ ನಾಗರೀಕರ ಮೇಲೆ ಈ ಬರ್ಬರತೆಯ ಮರು-ಆಟ ನಡೆಯಿತು. ಮೊದಲ ದಿನವೇ ನಾಗಾಸಾಕಿಯಲ್ಲಿ 55 ಸಾವಿರ ಜನ ಸತ್ತರು.

ಎರಡು ವಾರ್ಷಿಕಗಳು

ಅಣುಬಾಂಬು, ಅದರ ಪರಿಣಾಮಗಳ ಬಗ್ಗೆ ಇನ್ನಷ್ಟು ವಿವರಗಳಿಗೆ ಹೋಗುವ ಮೊದಲು ಕೆಲವು ಚಾರಿತ್ರಿಕ ಸಂಗತಿಗಳನ್ನು ನೆನಪು ಮಾಡಿಕೊಳ್ಳಬೇಕು. ಯುನೆಸ್ಕೊ ಈ ವರ್ಷ (2005)ವನ್ನು ಭೌತಶಾಸ್ತ್ರದ ಅಂತರ್ರಾಷ್ಟ್ರೀಯ ವರ್ಷವೆಂದು ಘೋಷಿಸಿದೆ. ನೂರು ವರ್ಷಗಳ ಹಿಂದೆ ಮಹಾನ್ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಜಗತ್ತಿನಲ್ಲೇ ಈಗ ಅತ್ಯಂತ ಪ್ರಸಿದ್ಧ ಮತ್ತು ಜನಜನಿತವಾಗಿರುವ ವೈಜ್ಞಾನಿಕ ಸೂತ್ರ E=mc2 ಕಂಡು ಹಿಡಿದಿದ್ದ. ಈ ಸರಳ ಸೂತ್ರ ಪ್ರಕೃತಿಯ ಮೂಲಭೂತ ರಚನೆಯ ಬಗ್ಗೆ ಮನುಷ್ಯನ ತಿಳುವಳಿಕೆಯನ್ನು ಆಮೂಲಾಗ್ರವಾಗಿ ಬದಲಾಯಿಸಿತ್ತು. ಈ ವರ್ಷ ಹಿರೋಶಿಮಾ - ನಾಗಾಸಾಕಿ ಅಣ್ವಸ್ತ್ರ ನರಮೇಧದ 60ನೇ ವಾರ್ಷಿಕ ಸಹ. ಅಂದು ನಡೆದದ್ದು ಭೌತಶಾಸ್ತ್ರದ ಮತ್ತು ಐನ್‌ಸ್ಟೈನರ E=mc2 ಸೂತ್ರದ ಭೀಕರ




ದುರುಪಯೋಗ.

ಹಿರೋಶಿಮಾದ 60ನೇ ವಾರ್ಷಿಕದಂದು ಅಣುಬಾಂಬಿನ ಬಲಿಪಶುವಾದವರನ್ನು ನೆನಪಿಸಿಕೊಳ್ಳಬೇಕು. ಅಣ್ವಸ್ತ್ರ ವಿರೋಧಿ ಕಾರ್ಯಕರ್ತರ ಗುಂಪು (ಇದರಲ್ಲಿ ವಿಜ್ಞಾನಿಗಳು, ಇಂಜಿನಿಯರುಗಳು, ಅಧ್ಯಾಪಕರು, ವಿದ್ಯಾರ್ಥಿಗಳು, ಡಾಕ್ಟರುಗಳು, ಕಾರ್ಮಿಕರು ಸೇರಿದ್ದಾರೆ.) ಒಂದು 'ಅಣು ನಿಶ್ಶಸ್ತ್ರೀಕರಣ ಮತ್ತು ಶಾಂತಿಗಾಗಿ ಚಳುವಳಿ' (INDP) ಎಂಬ ಸಂಘಟನೆ ರಚಿಸಿಕೊಂಡಿದ್ದಾರೆ. ಈ ಸಂಘಟನೆ ಆಗಸ್ಟ್ 6ನ್ನು 'ಹಿರೋಶಿಮಾ ದಿನ' ಮತ್ತು ಆಗಸ್ಟ್ 9ನ್ನು 'ನಾಗಾಸಾಕಿ ದಿನ'ವಾಗಿ ಆಚರಿಸಲು ಕರೆ ನೀಡಿದೆ. ಅಂದು 11.00 ಗಂಟೆಗೆ ಒಂದು ನಿಮಿಷದ ಮೌನಾಚರಣೆ ಮತ್ತು ಇತರ ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ ಈ ಆಚರಣೆ ನಡೆಸಬೇಕೆಂದು ಈ ಮೂಲಕ ಎಲ್ಲಾ ಓದುಗರಿಗೆ ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ಆದಷ್ಟು ಜನರಿಗೆ ಈ ಸಂದೇಶ ತಲುಪಿಸಿ ಎಂದೂ ನನ್ನ ವಿನಂತಿ.

ಅಣು ಬಾಂಬು ಅಗತ್ಯವಿತ್ತೆ?

ಅಣು ಬಾಂಬಿನ ಚರಿತ್ರೆಯ ಕೆಲವು ಅಂಶಗಳನ್ನು ಇಲ್ಲಿ ನೆನಪಿಸಿಕೊಳ್ಳಬೇಕು. 1938ರಲ್ಲೇ ಅಣು ವಿದಳನದ (Nuclear Fission) ಶೋಧನೆಯೊಂದಿಗೆ ಈ ಸಾಧ್ಯತೆ ಉಂಟಾಗಿತ್ತು. ಅಣು ಅಸ್ತ್ರಗಳನ್ನು ತಯಾರಿಸುವ ಕೆಲವು ಪ್ರಯತ್ನಗಳೂ ನಡೆದಿದ್ದವು. ಅಣು ಬಾಂಬು ತಯಾರಿಸುವ ನಿರ್ದಿಷ್ಟ ಕಾರ್ಯಕ್ರಮ ಹಾಕಿಕೊಂಡು, ಅದಕ್ಕೆ ಬೇಕಾದ ಹಣ ಮತ್ತು ವಿಜ್ಞಾನಿಗಳನ್ನು ಒದಗಿಸಿದ್ದು ಅಮೆರಿಕನ್ ಸರ್ಕಾರ 1942ರಲ್ಲಿ. ಅಣುಬಾಂಬು ತಯಾರಿಕೆಯಾದ ಮೇಲೆ, ಐನ್‌ಸ್ಟೈನ್ ಸೇರಿದಂತೆ ಹಲವು ವಿಜ್ಞಾನಿಗಳು ಈ ಭೀಕರ ಬಾಂಬನ್ನು ಬಳಸದಿರುವಂತೆ (ಮತ್ತು ವೈರಿಗಳಿಗೆ ಅದರ ಭೀಕರತೆ ತೋರಿಸುವಂತೆ) ಅಮೆರಿಕದ ಅಧ್ಯಕ್ಷರಿಗೆ ಮನವಿ ಮಾಡಿಕೊಂಡಿದ್ದರು. ಆದರೆ ಇದು ಯಾವುದನ್ನೂ ಕಿವಿಗೆ ಹಾಕಿಕೊಳ್ಳದೆ, ಹಿರೋಶಿಮಾ ಮತ್ತು ನಾಗಾಸಾಕಿಯ ನಿರಪರಾಧಿ ನಾಗರಿಕರ ಮೇಲೆ ಇದನ್ನು ಬಳಸಲಾಯಿತು.

ಅಣ್ವಸ್ತ್ರ ಪ್ರಯೋಗದ ಘೋರ ಫಲಶ್ರುತಿ



ಎರಡನೇ ಮಹಾಯುದ್ಧ ಹೆಚ್ಚು ಕಡಿಮೆ ಮುಗಿದ ಮೇಲೆ ಈ ಭೀಕರ ಅಸ್ತ್ರ ಬಳಸುವ ಅಗತ್ಯವಿರಲಿಲ್ಲ ಎಂದು ಬಹುಸಂಖ್ಯಾತ ವಿಶ್ವದ ಜನತೆಯ ಅಭಿಪ್ರಾಯವಾಗಿತ್ತು. ಜಪಾನಿನ 'ಹಠಮಾರಿತನ' ನಿಲ್ಲಿಸಿ ಎರಡನೇ ಮಹಾಯುದ್ಧ ಕೊನೆಗೊಳಿಸಲು ಅಣ್ವಸ್ತ್ರ ಬಳಸದೆ ಬೇರೆ ದಾರಿಯೇ ಇರಲಿಲ್ಲ ಎಂದು ಆಗಿನ ಹಾಗೂ ಈಗಿನ ಅಮೆರಿಕನ್ ಸರ್ಕಾರದ ಸಮಜಾಯಿಷಿ, ಜಪಾನ್ ಶರಣಾಗತವಾಗದೆ ಮಿಲಿಟರಿ ಕಾರ್ಯಾಚರಣೆ ಮುಂದುವರೆಸಿದ್ದು ನಿಜವಾದರೂ, 'ಗುಬ್ಬಚ್ಚಿಗೆ ಬ್ರಹ್ಮಾಸ್ತ್ರ ಬೇಕೆ?' ಎಂಬಂತೆ ಇಂತಹ ಭೀಕರ ಅಸ್ತ್ರದ ಅಗತ್ಯವಿರಲಿಲ್ಲ. ಅದೂ ಆಗ ಸೋವಿಯತ್ ಸೇನೆ ಜಪಾನನ್ನು ಎಲ್ಲಾ ಕಡೆ ಸದೆ ಬಡಿದು ಜಪಾನ್ ಶರಣಾಗತವಾಗದೆ ಬೇರೆ ದಾರಿಯಿಲ್ಲ ಎಂಬ ಪರಿಸ್ಥಿತಿ ಉಂಟಾಗಿತ್ತು. ಹೆಚ್ಚೆಂದರೆ ಒಂದೆರಡು ವಾರಗಳು ಜಪಾನಿನ ಪ್ರತಿರೋಧ ಸಾಧ್ಯವಿತ್ತು. ಅಷ್ಟು ಬೇಕೆಂದರೆ 'ಸಾಂಪ್ರದಾಯಿಕ' ಅಸ್ತ್ರಗಳನ್ನು ಬಳಸಿದರೂ ಈ ಒತ್ತಡ ಹೇರಬಹುದಿತ್ತು. ಅಮೆರಿಕ ಅಣು ಅಸ್ತ್ರ ಬಳಸಿದ್ದು ಮಹಾಯುದ್ಧದ - ನಂತರದ ಜಗತ್ತಿನಲ್ಲಿ ತಾನು 'ಏಕಮಾತ್ರ ಸೂಪರ್‌ಪವರ್' ಎಂದು ಸಾರಲು. ಸೋವಿಯೆತ್ ಪೂರ್ವದಲ್ಲೂ ಪ್ರಭಾವ ಬೆಳೆಸಿಕೊಳ್ಳುವ ಸಾಧ್ಯತೆ ತಡೆಯಲು ಎಂದು ಹಲವು ಸ್ವತಂತ್ರ ರಾಜಕೀಯ ವೀಕ್ಷಕರ ಅಭಿಪ್ರಾಯ.

ಅಣ್ವಸ್ತ್ರ ಪೈಪೋಟಿಯ ಆರಂಭ

ಅಮೆರಿಕದ ಈ 'ಕಾರ್ಯಾಚರಣೆ' ಒಂದು ಹೊಸ 'ಶಸ್ತ್ರಾಸ್ತ್ರ ಪೈಪೋಟಿ' ಆರಂಭಿಸಿತು. ಜಾಗತಿಕ ಸಹಕಾರದ ಮೂಲಕ ಅಣು ಬಾಂಬಿನ ತಾಂತ್ರಿಕ ರಹಸ್ಯಗಳನ್ನು ಜಗತ್ತಿನ ಜತೆ ಹಂಚಿಕೊಳ್ಳಬೇಕು ಎಂದು ಹಲವಾರು ವಿಜ್ಞಾನಿಗಳು ಕೇಳಿಕೊಂಡಿದ್ದರು. ಅಣು ಬಾಂಬಿನ ಬಗ್ಗೆ ಜ್ಞಾನ ಕೆಲವೇ ಕೈಗಳಲ್ಲಿ ಕೇಂದ್ರೀಕೃತವಾಗುವುದು ಜಗತ್ತಿಗೆ ಅಪಾಯ ಎಂದು ಇದರ ಹಿಂದಿನ ಆಶಯವಾಗಿತ್ತು. ಈ ಎಲ್ಲವನ್ನೂ ನಿರ್ಲಕ್ಷಿಸಿ ಅಣ್ವಸ್ತ್ರ ಶಕ್ತಿಯಾಗಿ ಮೆರೆಯುವ ಅಮೇರಿಕದ ಹಂಬಲ 'ಶೀತಲ ಸಮರ'ವನ್ನೂ ಆರಂಭಿಸಿತು. 1949ರಲ್ಲಿ ಸೋವಿಯೆತ್ ಒಕ್ಕೂಟ ಸಹ ಅಣುಬಾಂಬ್ ತಯಾರಿಸಿತು. ಅಮೆರಿಕನ್ನರು 50ರ ದಶಕದಲ್ಲಿ ಹಿರೋಶಿಮಾದ ಮೇಲೆ ಹಾಕಲಾದ ಬಾಂಬಿಗಿಂತ ಸಾವಿರ ಪಟ್ಟು ಹೆಚ್ಚು ಶಕ್ತಿಯುತ ಬಾಂಬ್ ತಯಾರಿಸಿದರು. ಸೋವಿಯತ್ ಒಕ್ಕೂಟ ಆ ಸಾಮರ್ಥ್ಯವನ್ನು ಸ್ವಲ್ಪದರಲ್ಲೇ ಸಾಧಿಸಿತು. ಬ್ರಿಟನ್, ಫ್ರಾನ್ಸ್ ಮತ್ತು ಚೀನಾ ಈ ಸ್ಪರ್ಧೆಯಲ್ಲಿ ಬಹಳ ಹಿಂದೆ ಉಳಿಯಲಿಲ್ಲ. ಈ ರೀತಿ ಶಸ್ತ್ರಾಸ್ತ್ರ ಪೈಪೋಟಿ ಮತ್ತು ಶೀತಲ ಸಮರ ಯಾವುದೇ

ಪುಟ 8 ಕ್ಕೆ

'ಹಿರೋಶಿಮಾಗಳು ಮತ್ತೆಂದೂ ಬೇಡ' - ಹೇಗೆ ಸಾಧ್ಯ?

ಅಣ್ವಸ್ತ್ರಗಳನ್ನು ಶೇಖರಿಸುವ ಅಪಾಯಗಳ ಬಗೆಗೂ ನಾವು ಗಮನ ಹರಿಸಬೇಕು. ಅಪಘಾತಗಳು ಮತ್ತು 'ಹುಸಿ ಅಪಾಯ'ದ ಗಂಟೆ ಬಾರಿಸುವ ಹಲವು ಅಪಾಯಕಾರಿ ಸಾಧ್ಯತೆಗಳು ಇವೆ. ಇಂತಹ ಹಲವು ಘಟನೆಗಳು ಅಣ್ವಸ್ತ್ರ ಹೆಸರಿಸುವ ದೇಶಗಳಲ್ಲಿ (ಅಮೆರಿಕಾ, ಯುರೋಪು, ಇತ್ಯಾದಿ) ನಡೆದಿವೆ. ಇವು ಭಾರಿ ಸಾಧ್ಯತೆಗಳಲ್ಲ. ಆದರೆ ಈ ದೇಶಗಳ ನಡುವೆ ಅಣ್ವಸ್ತ್ರ ಹೊಂದಿದ ಕ್ಷಿಪಣಿ ಹಾರಿ ಹೋಗಲು 30 ರಿಂದ 60 ನಿಮಿಷ ಬೇಕಾದ್ದರಿಂದ ಇಂತಹ 'ಅಪಾಯ'ಗಳು ನಿಜವಾಗಿಲ್ಲ, ಆದರೆ ಭಾರತ ಪಾಕಿಸ್ತಾನಗಳ ನಡುವೆ ಕ್ಷಿಪಣಿ ಯಾವುದೇ, ಸ್ಥಳಕ್ಕೆ ಹೋಗಲು 3 ರಿಂದ 8 ನಿಮಿಷಗಳು ಸಾಕು. 'ಅಣ್ವಸ್ತ್ರ ಧಾಳಿಯ' ಅಲಾರಂ ಹುಸಿಯೇ ಅಲ್ಲವೇ ಎಂದು ತನಿಖೆ ಮಾಡಲೂ ಸಮಯ ಇಲ್ಲದಿರುವುದರಿಂದ ಹುಸಿ-ಅಲಾರಂ ಮೇಲೆ ಅಣ್ವಸ್ತ್ರ -ಧಾಳಿಯ ಸಾಧ್ಯತೆ ಭಾರಿ ಹೆಚ್ಚು. ಇಂತಹ 'ಅಪಘಾತ'ದ ಪರಿಣಾಮ ಏನು? ಮುಂಬಯಿ ಅಥವಾ ಕರಾಚಿಯಂತಹ ನಗರಗಳ ಮೇಲೆ ಅಣ್ವಸ್ತ್ರ ಬಳಸಿದರೆ ಕನಿಷ್ಟ 7 ಲಕ್ಷ ಜನ ಸಾಯುತ್ತಾರೆ ಎಂದು ಅಂದಾಜು ಮಾಡಲಾಗಿದೆ.

ಕೊನೆಯದಾಗಿ ಇಂದಿನ ಜಾಗತಿಕ ಪರಿಸ್ಥಿತಿ ನೋಡೋಣ. ಹಲವು ದೇಶಗಳ ಬಳಿ ಇಂತಹ ಹತ್ತು ಸಾವಿರಕ್ಕೂ ಹೆಚ್ಚು ಅಣ್ವಸ್ತ್ರಗಳಿವೆ. ಅತ್ಯಂತ ಹೆಚ್ಚು ಅಮೆರಿಕದ ಬಳಿ ಇದೆ ಎಂದು ಬೇರೆ ಹೇಳಬೇಕಾಗಿಲ್ಲವಲ್ಲ. ತನ್ನ ಅಣ್ವಸ್ತ್ರಗಳನ್ನು ಕಡಿಮೆ ಮಾಡುವ ಬದಲು ಅಮೆರಿಕ ರಾಷ್ಟ್ರೀಯ ರಕ್ಷಣಾ ಕಾರ್ಯಕ್ರಮ (NDI - National Defence Intiative) ದ ಹೆಸರಲ್ಲಿ ಯಾವುದೇ ದೇಶದ ಮೇಲೆ ಆಕ್ರಮಣ ಮಾಡುವ ಯೋಜನೆ ಹಾಕುತ್ತಿದೆ. ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ತಮ್ಮ ಅಣ್ವಸ್ತ್ರ ಕಾರ್ಯಕ್ರಮವನ್ನು ನಿಲ್ಲಿಸಲೇಬೇಕು. ಆದರೆ ಇದಿಷ್ಟೇ ದಕ್ಷಿಣ ಏಶ್ಯಾವನ್ನು ಅಣ್ವಸ್ತ್ರ - ಮುಕ್ತ ಪ್ರದೇಶವಾಗಿಸುವುದಿಲ್ಲ, ಅಮೆರಿಕದ 'ಏಳನೇ ಯುದ್ಧ ನೌಕೆ' (9th Flant) ನಮ್ಮ ಸಾಗರ ಸರಹದ್ದಿನ ನೂರು ಕಿ.ಮೀ. ಒಳಗೆ ಗಸ್ತು ಹೊಡೆಯುತ್ತಿರುತ್ತದೆ. ಭಾರತ ಮಹಾಸಾಗರದಲ್ಲಿರುವ ಡಿಯೊಗೊ ಗಾರ್ಸಿಯಾದಲ್ಲಿರುವ ಅಮೆರಿಕದ ಶಾಶ್ವತ ಮಿಲಿಟರಿ



ನೆಲೆಯಲ್ಲೂ ಅಣ್ವಸ್ತ್ರಗಳಿವೆ. ಇಡೀ ಜಗತ್ತೆ 'ಶಾಂತಿ ಪ್ರದೇಶ' ವಾಗಬೇಕು. ಎನ್.ಡಿ.ಐ. ನಂತಹ ಕಾರ್ಯಕ್ರಮಗಳು ಬೇಡ. ಎಲ್ಲಾ ಅಣ್ವಸ್ತ್ರಗಳನ್ನು ನಾಶಮಾಡಬೇಕು ಎಂದು ನಾವು ಒತ್ತಾಯಿಸಬೇಕು. ಆಗ ಮಾತ್ರ 'ಹಿರೋಶಿಮಾಗಳು ಮತ್ತೆಂದೂ ಬೇಡ' ಎಂಬ ಆಶಯ ಈಡೇರಲು ಸಾಧ್ಯ.

..............'ಹಿರೋಶಿಮಾ'ಗಳು ಮತ್ತೆಂದೂ ಬೇಡ!

ಪುಟ 7 ರಿಂದ

ಲಂಗು ಲಗಾಮಿಲ್ಲದೆ ಮುಂದುವರೆಯಲಾರಂಭಿಸಿತು. ಇದನ್ನು ನೋಡಿ ಆತಂಕಗೊಂಡ ಜಾಗತಿಕ ಜನಮತ ಅಣುಅಸ್ತ್ರಗಳನ್ನು ನಾಶಮಾಡಬೇಕೆಂಬ ಒತ್ತಾಯ ತರಲಾರಂಭಿಸಿತು. ಐನ್‌ಸ್ಟೈನ್ ಸೇರಿದಂತೆ ಹಲವು ಪ್ರಮುಖ ವಿಜ್ಞಾನಿಗಳು ಈ ಒತ್ತಾಯದ ಮುಂಚೂಣಿಯಲ್ಲಿದ್ದರು. ಈ ಬಗ್ಗೆ 1953ರಲ್ಲಿ ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿಯಲ್ಲಿ ನಡೆದ ಚರ್ಚೆಯಲ್ಲಿ, ಅಮೆರಿಕದ ಆಗಿನ ಅಧ್ಯಕ್ಷರು ಈ ಒತ್ತಾಯವನ್ನು ಒಪ್ಪಲು ನಿರಾಕರಿಸಿದರು. ಅಮೆರಿಕ 'ಮಿಲಿಟರಿ - ಕೈಗಾರಿಕಾ ಸಂಕೀರ್ಣ'ದ ಬೆಳವಣಿಗೆಯ ಮೂಲಕ ಒಂದು ಹೊಸ ಬೆಳವಣಿಗೆಯ ಹಂತ ತಲುಪಿದೆ. ಅದನ್ನು ಬಿಟ್ಟುಕೊಡುವುದು ಸಾಧ್ಯವಿಲ್ಲ" ಇದು ಅವರು ಕೊಟ್ಟ ಕಾರಣವಾಗಿತ್ತು.

'ಮಿಲಿಟರಿ-ಕೈಗಾರಿಕಾ ಸಂಕೀರ್ಣ'ದ ಅಗತ್ಯ

ಶಸ್ತ್ರಾಸ್ತ್ರ ಪೈಪೋಟಿ ಮತ್ತು ಶೀತಲ ಸಮರ 70ರ ದಶಕದಲ್ಲಿ ತೀರಾ ವಿಪರೀತವಾದಾಗ, ಜಗತ್ತಿನಾದ್ಯಂತ ಪ್ರಬಲವಾದ ಅಣ್ವಸ್ತ್ರ-ವಿರೋಧಿ ಶಾಂತಿ ಚಳುವಳಿ ಸಹ ಪ್ರಬಲವಾಗಿ ಬೆಳೆದು ಅಣ್ವಸ್ತ್ರ - ನಿಶ್ಶಸ್ತ್ರೀಕರಣಕ್ಕೆ ಪ್ರಬಲವಾಗಿ ಒತ್ತಾಯ ಹೇರಿತು. ಈ ಕರೆಗೆ ಓಗೊಟ್ಟು ಸೋವಿಯತ್ ಒಕ್ಕೂಟ ಹಲವು ಅಣ್ವಸ್ತ್ರ - ಪೈಪೋಟಿ ತಗ್ಗಿಸುವ, ನಾಶಮಾಡುವ ಹಲವು ಪ್ರಸ್ತಾವಗಳನ್ನು ಮುಂದಿಟ್ಟಿತು. 80ರ ದಶಕದಲ್ಲಂತೂ ಸೋವಿಯೆತ್ ಒಕ್ಕೂಟ ಹಲವು ಏಕ-ಪಕ್ಷೀಯ ಕಡಿತಗಳನ್ನು ಮಾಡಿತು. ಪ್ರತಿ ಬಾರಿ ಅಮೆರಿಕ ಈ ಒಪ್ಪಂದಗಳನ್ನು ಜಾರಿ ಮಾಡುವಲ್ಲಿ ವಿಳಂಬ ಮಾಡುತ್ತಿತ್ತು, ಇಲ್ಲವೆ ಹೊಸ ರೀತಿಯ ಶಸ್ತ್ರಾಸ್ತ್ರ ಪೈಪೋಟಿ ಆರಂಭಿಸುತ್ತಿತ್ತು. ರೇಗನ್ ಕಾಲದಲ್ಲಿ 'ತಾರಾಸಮರ' ಇದರ ಒಂದು ಉದಾಹರಣೆ. ಸೋವಿಯತ್ ಒಕ್ಕೂಟ ಇಲ್ಲವಾದಾಗ ಅಮೆರಿಕಕ್ಕೆ ಅಣ್ವಸ್ತ್ರ ಇಟ್ಟುಕೊಳ್ಳಲು ಯಾವುದೇ ನೆಪ ಉಳಿದಿರಲಿಲ್ಲ. ಆದ್ದರಿಂದ ಅಣು ನಿಶ್ಶಸ್ತ್ರೀಕರಣಕ್ಕೆ ಕುಮ್ಮಕ್ಕು ಸಿಗುತ್ತದೆ ಎಂಬ ಹಲವರ ನಿರೀಕ್ಷೆ ಹುಸಿಯಾಗಿದೆ. ಅಮೆರಿಕಾ 'ದುಷ್ಟದೇಶ'ಗಳಿಂದ ಅಪಾಯದ ನೆಪ ಹುಡುಕುತ್ತಿದೆ ಆ ನೆಪದಲ್ಲಿ 'ಕ್ಷಿಪಣಿ ರಕ್ಷಣಾ ವ್ಯವಸ್ಥೆ' ಎಂಬಂತಹ ಹೊಸ ಶಸ್ತ್ರಾಸ್ತ್ರ ಪೈಪೋಟಿ ಆರಂಭಿಸಿದೆ. ಜಗತ್ತಿನ ಏಕಮಾತ್ರ ಸೂಪರ್ ಪವರ್ ಆಗುವ ತನ್ನ ಹಳೆ ಕನಸು ನನಸು ಮಾಡಲು ಹೊರಟಿದೆ. ಅಣ್ವಸ್ತ್ರಗಳ ಬಗ್ಗೆ ಮಾಡಿದ ಹಲವು ಒಪ್ಪಂದಗಳನ್ನು ತಾನು ಪಾಲಿಸುವುದಿಲ್ಲ. ಅಗತ್ಯ ಬಿದ್ದರೆ ಅಣ್ವಸ್ತ್ರಗಳನ್ನು ಏಕ-ಪಕ್ಷೀಯವಾಗಿ ಉಪಯೋಗಿಸುವುದು ಎಂದು ಘೋಷಿಸಿದೆ. ಹಲವು ಸಂದರ್ಭಗಳಲ್ಲಿ (ವಿಯೆಟ್ನಾಂ, ಬಾಂಗ್ಲಾದೇಶ - ಇತ್ಯಾದಿ ಯುದ್ಧಗಳಲ್ಲಿ) ಅಣ್ವಸ್ತ್ರ ಬಳಸುವ ಬಗ್ಗೆ ಗಂಭೀರವಾಗಿ ಯೋಚಿಸಿತ್ತು ಎಂಬ ಈಗ ಲಭ್ಯವಿರುವ ಖಚಿತ ಆಧಾರಗಳ ಹಿನ್ನಲೆಯಲ್ಲಿ ಇದು ಅತ್ಯಂತ ಅಪಾಯಕಾರಿ. ಜಗತ್ತು ಪುನಃ ವಿನಾಶಕಾರಿ ಅಣ್ವಸ್ತ್ರ ಯುದ್ಧದ ಹೊಸ್ತಿಲಲ್ಲಿ ನಿಂತಿದೆ.

ಅಣ್ವಸ್ತ್ರಗಳನ್ನು ಮೊದಲ ಬಾರಿಗೆ ತಯಾರಿಸಲು, ಬಳಸಲು ನಿರ್ಧರಿಸಿದ ಅಮೆರಿಕನ್ 'ಕೈಗಾರಿಕಾ-ಮಿಲಿಟರಿ ಸಂಕೀರ್ಣ' ಜಗತ್ತನ್ನು ಈ ವಿನಾಶದ ಹೊಸ್ತಿಲಲ್ಲಿ ನಿಲ್ಲಿಸಿದೆ. ಇಂತಹ ಅಂತರ್‍ರಾಷ್ಟ್ರೀಯ ಸಂದರ್ಭದಲ್ಲಿ ಎಲ್ಲಾ ಅಣ್ವಸ್ತ್ರಗಳ ನಾಶಕ್ಕೆ ಕರೆ, ಅಣ್ವಸ್ತ್ರಗಳನ್ನು ತಯಾರಿಸುವ ಸಾಮರ್ಥ್ಯ ಇದ್ದಾಗಲು ಅದನ್ನು ತಯಾರಿಸದಿರುವುದು ಎಂಬ ಸಮಯೋಚಿತ ನೀತಿಗೆ ತಿಲಾಂಜಲಿ ಇತ್ತು ಹಿಂದಿನ ಎನ್‌ಡಿಎ ಸರ್ಕಾರ ಮೇ 11, 13, 1998ರಲ್ಲಿ ಪೋಖ್ರಾನ್-2 (ಅಣ್ವಸ್ತ್ರ ಪರೀಕ್ಷಣಾ ಸ್ಫೋಟ) ನಡೆಸಿ ಬೇಜವಾಬ್ದಾರಿಯುತ ಕೆಲಸಮಾಡಿದೆ. ಪಾಕಿಸ್ತಾನ ಅದರದೇ ಅಣ್ವಸ್ತ್ರ ಪರೀಕ್ಷಣಾ ಸ್ಫೋಟದಲ್ಲಿ ಹಿಂದೆ ಬೀಳಲಿಲ್ಲ.

ಪೋಖ್ರಾನ್-2 ಮತ್ತು .....



ಅಣ್ವಸ್ತ್ರ ತಯಾರಿಕೆಗೆ ಪರವಾಗಿ ಎನ್‌ಡಿಎ ಸರ್ಕಾರ ಮತ್ತು ಅವರ ಕೆಲವು ಬೆಂಬಲಿಗರು ಹಲವು ವಾದಗಳನ್ನು ಮುಂದೊಡ್ಡುತ್ತಾರೆ. ಪಾಕಿಸ್ತಾನದ ಮಿಲಿಟರಿ ಮಸಲತ್ತುಗಳನ್ನು ಮಟ್ಟ ಹಾಕುವುದು, ಪಾಕಿಸ್ತಾನದಿಂದ ಇರುವ ಅಣ್ವಸ್ತ್ರ ಬೆದರಿಕೆಯ ವಿರುದ್ಧ ಸ್ವ-ರಕ್ಷಣೆಗೆ, ಪಾಕಿಸ್ತಾನ ಮಿಲಿಟರಿ ದುಸ್ಸಾಹಸಕ್ಕೆ ಕಡಿವಾಣ ಹಾಕುವುದು, ದಕ್ಷಿಣ ಏಶ್ಯಾದಲ್ಲೂ ಮಿಲಿಟರಿ ವ್ಯೂಹದಲ್ಲಿ ಭಾರತಕ್ಕೆ ಮೇಲುಗೈ ಒದಗಿಸುವುದು, ಅಣ್ವಸ್ತ್ರ-ಸಾಂಪ್ರದಾಯಿಕ ಶಸ್ತ್ರಾಸ್ತ್ರಗಳನ್ನು ಬಳಸಿ ಮಾಡುವ ಯುದ್ಧಕ್ಕೂ ತಡೆ ಹಾಕಿ 'ಶಾಂತಿ' ನೆಲೆಸುವಂತೆ ಮಾಡುವುದು (!) ದೇಶದ ಅಂತರ್‍ರಾಷ್ಟ್ರೀಯ ಘನತೆ ಹೆಚ್ಚಿಸುವುದು - ಇವೇ ಮುಂತಾದವು ಆ ವಾದಗಳು. ಈ ಕೆಲವು ವಾದಗಳು ಪರಸ್ಪರ ವಿರೋಧಾಬಾಸ ಇರುವವು. ಅಲ್ಲದೆ ಪಾಕಿಸ್ತಾನದ ಸರ್ಕಾರ ಮತ್ತು ಅಲ್ಲಿನ ಅಣ್ವಸ್ತ್ರ ಬೆಂಬಲಿಗರೂ ಸಹ ಇದೇ ವಾದಗಳನ್ನು ಬಿಡುತ್ತದೆ ಎಂಬುದೇ ಅವು ಎಷ್ಟು ಹಾಸ್ಯಾಸ್ಪದ, ಅಸಮಂಜಸ ಎಂದು ತೋರಿಸುತ್ತವೆ.

ವಾದ-ವಿವಾದಗಳನ್ನು ಒತ್ತಟ್ಟಿಗಿಟ್ಟರೂ, ಎರಡೂ ಕಡೆ ಅಣ್ವಸ್ತ್ರಗಳು ಇದ್ದರೂ ಕಾರ್ಗಿಲ್ ಯುದ್ಧ ನಡೆದೇ ಹೋಯಿತು ಎಂಬುದೇ ಈ ಎಲ್ಲಾ ವಾದಗಳು ಎಷ್ಟು ಹುರುಳಿಲ್ಲದ್ದು ಎಂದು ತೋರಿಸುತ್ತವೆ. ಪೋಖ್ರಾನ್ ಪರೀಕ್ಷಣಾ ಸ್ಫೋಟ ನಡೆದ ವರ್ಷವೆ, ಮೂರು ಸಾವಿರ ಜನ 'ಉಷ್ಣದ ಅಲೆ'ಯಲ್ಲಿ ಮಡಿದರು. ಶಾಂತಿ ಸಮಯದಲ್ಲಿ ಪ್ರಾಕೃತಿಕ ವಿಕೋಪಗಳಿಂದ ತನ್ನ ನಾಗರಿಕರನ್ನು ರಕ್ಷಿಸಲು ಅಸಮಂಜಸವಾದ ದೇಶಕ್ಕೆ 'ಅಂತರ್‍ರಾಷ್ಟ್ರೀಯ ಘನತೆ' ಅಣ್ವಸ್ತ್ರಗಳು ತಂದು ಕೊಡಬಲ್ಲುವೆ? ಭಾರತ ಅಣ್ವಸ್ತ್ರ ತಯಾರಿಸಿದ ವರ್ಷವೇ ಅಮಾರ್ತ್ಯ ಸೇನ್‌ಗೆ ಅರ್ಥಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ ಬಂತು. ರಕ್ಷಣಾ ವೆಚ್ಚದಲ್ಲಿ ತೀವ್ರ ಕಡಿತ ಮಾಡಬೇಕು ಮತ್ತು ಜನ-ಕಲ್ಯಾಣ ಕ್ರಮಗಳಿಗೆ ವೆಚ್ಚ ಹೆಚ್ಚುಮಾಡಬೇಕು ಎಂಬುದು ಅವರ ವಾದ. ಅಮಾರ್ತ್ಯ ಸೇನರಂತಹವರ ಮೂಲಭೂತ ಕೊಡುಗೆ ದೇಶಕ್ಕೆ ಅಂತರ್‍ರಾಷ್ಟ್ರೀಯ ಘನತೆ ತರಬಲ್ಲುದು. ನರಮೇಧದ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಿಂದ ಅಲ್ಲ. ಸಣ್ಣ ಪ್ರಮಾಣದ ಅಣ್ವಸ್ತ್ರ ಕಾರ್ಯಕ್ರಮಕ್ಕೂ ಕನಿಷ್ಟ ಸುಮಾರು ಏಳು ಸಾವಿರ ಕೋಟಿ ರೂಪಾಯಿ(ಪ್ರತಿವರ್ಷ) ಬೇಕಾಗುತ್ತದೆ ಎಂದು ಇಲ್ಲಿ ಗಮನಿಸಬೇಕು. ಏಳು ಸಾವಿರ ಕೋಟಿ ರೂಪಾಯಿಯಿಂದ ಎಷ್ಟೆಲ್ಲಾ ಜನಕಲ್ಯಾಣ ಕಾರ್ಯಕ್ರಮಗಳನ್ನು ಮಾಡಬಹುದು ಎಂಬುದನ್ನು ಯಾರು ಬೇಕಾದರೂ ಲೆಕ್ಕ ಹಾಕಬಹುದು.

ಕೃಪೆ: **'ಟೀಚರ್'** ಪತ್ರಿಕೆ

.... ಸೆಪ್ಟೆಂಬರ್ 29ರಂದು ಸಾರ್ವತ್ರಿಕ ಮುಷ್ಕರ

ಪುಟ 6 ರಿಂದ

ಕಾನೂನು ತರುವುದಾಗಿ ಹೇಳಿದರೂ ಈ ಬಗ್ಗೆ ಮಂಡಿಸಿದ ಮಸೂದೆ ರಾಷ್ಟ್ರೀಯ ಸಲಹಾ ಮಂಡಳಿ ನೀಡಿದ ಶಿಫಾರಸ್ಸನ್ನು ಬಹಳಷ್ಟು ದುರ್ಬಲಗೊಳಿಸಿದ ಮಸೂದೆ, ಈ ಮೂಲಕ ಕನಿಷ್ಟ ಕಾರ್ಯಕ್ರಮದಲ್ಲಿನ ವಚನದ ಅಪಹಾಸ್ಯ ಮಾಡಿದೆ ಎಂದು ಈ ರಾಷ್ಟ್ರೀಯ ಸಮಾವೇಶದ ಘೋಷಣೆ ಟೀಕಿಸಿದೆ.

ಸಾರ್ವಜನಿಕ ವಲಯವನ್ನು ಬಲಿಪಶುಗೊಳಿಸುತ್ತೇವೆ. ಲಾಭದಲ್ಲಿರುವ ಘಟಕಗಳನ್ನು ಖಾಸಗೀಕರಿಸುವುದಿಲ್ಲ ಎಂದು ವಚನ ನೀಡಿದ್ದರೂ ಸಾರ್ವಜನಿಕ ವಲಯ ಎಂದರೆ 'ಸಂಪೂರ್ಣ ಒಡೆತನ'ದ ಬದಲು '51 ಶೇಕಡಾ ಪಾಲು' ಎಂದು ಅವರ ಸೂಚನೆಯನ್ನೇ ತಿರುಚಿ ಶೇರು ಹಿಂಪಡೆತದ ಮೂಲಕ ಖಾಸಗೀಕರಣದ ಪ್ರಯತ್ನ ನಡೆಸಿದೆ ಎಂದು ಆಪಾದಿಸಿರುವ ಸಮಾವೇಶದ ಘೋಷಣೆ ಸಾಮಾಜಿಕ ವಲಯದ ಖರ್ಚಿಗಾಗಿ, ರೋಗಗ್ರಸ್ತ ಘಟಕಗಳ ಪುನರುಜ್ಜೀವನಕ್ಕಾಗಿ ಈ ಹಣವನ್ನು ಬಳಸಲಾಗುತ್ತದೆ ಎನ್ನುತ್ತಾ ಇದಕ್ಕಾಗಿ ಸಂಪನ್ಮೂಲಗಳನ್ನು ಸಂಗ್ರಹಿಸುವ ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸರಕಾರ ಪ್ರಯತ್ನಿಸುತ್ತಿದೆ ಎಂದು ಟೀಕಿಸಿದೆ. ಯುಪಿಎ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ನಾಲ್ಕು ಬಾರಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಸಿದೆ; ಈ ಹೊರೆಯನ್ನು ತಪ್ಪಿಸುವ ದಾರಿಗಳಿದ್ದರೂ ಅದರತ್ತ ಗಮನ ನೀಡಿಲ್ಲ.

ಕಾರ್ಮಿಕ ಕಾನೂನುಗಳನ್ನು ಕುರಿತಂತೆಯೂ ಸಾಮಾನ್ಯ ಕನಿಷ್ಟ ಕಾರ್ಯಕ್ರಮದ ಭರವಸೆಗಳನ್ನು ಪಾಲಿಸಲಾಗುತ್ತಿಲ್ಲ. ಕೈಗಾರಿಕಾ ವಿವಾದಗಳ ಕಾಯ್ದೆಯನ್ನು ಬದಲಿಸುವುದಿಲ್ಲ ಎಂದು ಹೇಳಿದ್ದರೂ ಈಗಿನ 100ರ ಬದಲು 300ರವರೆಗೆ ಕಾರ್ಮಿಕರಿರುವ ಸಂಸ್ಥೆಗಳು ರಿಟ್ರೆಂಚ್‌ಮೆಂಟ್ ಇತ್ಯಾದಿಗಳಿಗೆ ಸರಕಾರದ ಅನುಮತಿ ಪಡೆಯಬೇಕಾಗಿಲ್ಲ ಎಂಬ ತಿದ್ದುಪಡಿ ತರುವುದಾಗಿ ಕಾರ್ಮಿಕ ಮಂತ್ರಾಲಯ ಸೂಚಿಸಿರುವುದು ಇದಕ್ಕೆ ಒಂದು ಉದಾಹರಣೆ. ಈ ಮೂಲಕ 'ಹೈರ್ ಅಂಡ್ ಫೈರ್' ತರುವ ವಂಚನೆ ಹಾಗೂ ರಾಷ್ಟ್ರೀಯ ಕಾರ್ಮಿಕ ಆಯೋಗದ ವ್ಯಾಪಕ ವಿರೋಧಕ್ಕೊಳಗಾದ ಶಿಫಾರಸನ್ನು ಮತ್ತೆ ಹೇರುವ ಪ್ರಯತ್ನ ನಡೆಸಲಾಗಿದೆ. "ಇನ್ಸ್‌ಪೆಕ್ಟರ್ ರಾಜ್" ನ್ನು ಕಳಚಿ ಹಾಕುವ ಹೆಸರಲ್ಲಿ ಕಾರ್ಮಿಕರ ಕಾನೂನುಗಳನ್ನು ಜಾರಿಗೆ ತರುವ ತನ್ನ ಜವಾಬ್ದಾರಿಯನ್ನೇ ಸರಕಾರ ಕೈಬಿಟ್ಟಿದೆ. ಅತ್ತ ಕಾರ್ಮಿಕರ, ನೌಕರರ ಸಂಖ್ಯೆಯನ್ನು ಕಡಿತ ಮಾಡುವ 'ಡೌನ್ ಸೈಜಿಂಗ್' 21ನೇ ಶತಮಾನದ ಮಂತ್ರವಾಗಿ ಬಿಟ್ಟಿದೆ ಎಂದು ಟೀಕಿಸಿರುವ ಸಮಾವೇಶದ ಘೋಷಣೆ ಈ ರೀತಿ ಉದ್ಯೋಗದ ಗುಣಮಟ್ಟ ಹದಗೆಡುತ್ತಿದೆ" ಎಂದಿದೆ.

ಮಹಿಳೆಯರ ಮೇಲೆ ಅತ್ಯಾಚಾರಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಸುಪ್ರಿಂ ಕೋರ್ಟಿನ ಮಾರ್ಗದರ್ಶಕ ಸೂತ್ರಗಳ, ಶಿಫಾರಸ್ಸುಗಳ ಜ್ಯಾರಿ, ಮುಷ್ಕರದ ಹಕ್ಕನ್ನು ಕುರಿತಂತೆ ಕ್ರಮ, 6ನೇ ವೇತನ ಆಯೋಗದ ರಚನೆಗೆ ನಕಾರ, ಬೋನಸ್ ಕಾನೂನಿನ ತಿದ್ದುಪಡಿಗೆ ನಕಾರ ಇವನ್ನೆಲ್ಲಾ ಸಮಾವೇಶ ಘೋಷಣೆ ಪರಿಶೀಲಿಸಿದೆ.

ವಿದೇಶಿ ಹೂಡಿಕೆದಾರರಿಗೆ ದೇಶದ ಆರ್ಥಿಕದ ಎಲ್ಲಾ ವಲಯಗಳನ್ನೂ ಕೈವಶ ಮಾಡಿಕೊಳ್ಳಲು ಸರಕಾರ ಬಾಗಿಲು ತೆರೆದುಕೊಡುತ್ತಿದೆ. ಪೆನ್ಷನ್ ನಿಧಿ ವಲಯದಲ್ಲೂ, ಚಿಲ್ಲರೆ ವ್ಯಾಪಾರ ಹಾಗೂ ಗಣಿಗಾರಿಕೆ ವಲಯಗಳಲ್ಲಿ 'ವಿದೇಶಿ ನೇರ ಹೂಡಿಕೆ'ಯನ್ನು ಆಹ್ವಾನಿಸಲಾಗುತ್ತಿದೆ. ನೀರು ಪೂರೈಕೆಯಂತಹ ಸಾರ್ವಜನಿಕ ಸೇವೆಗಳನ್ನು ದೇಶಿ ವಿದೇಶಿ ಲಾಭಕೋರರಿಗೆ ವಹಿಸಿಕೊಡಲು ಸರಕಾರ ಹೇಸುತ್ತಿಲ್ಲ. ಅಪಾರ ಸಂಕಟ ಅನುಭವಿಸುತ್ತಿರುವ ಗ್ರಾಮೀಣ ಪ್ರದೇಶದ ಬಡ, ಮಧ್ಯಮ ರೈತರಿಗೆ ನೀಡಿದ ಭರವಸೆಯನ್ನು ಈಡೇರಿಸಲು ಕೂಡಾ ಏನೂ ಮಾಡುತ್ತಿಲ್ಲ ಎಂದು ಘೋಷಣೆ ಖೇದ ವ್ಯಕ್ತಪಡಿಸಿದೆ.

ದುಡಿಯುವ ಜನಗಳು ತಮ್ಮ ಬೇಡಿಕೆಗಳನ್ನು ಮುಂದಿಟ್ಟಾಗಲೆಲ್ಲ ಸಂಪನ್ಮೂಲಗಳಿಲ್ಲ ಎಂದು ನೆಪವೊಡ್ಡುವ ಈ ಸರಕಾರಕ್ಕೆ ದೊಡ್ಡ ಕಂಪನಿಗಳ ಸಾಲ ಬಾಕಿ, ತೆರಿಗೆ ಬಾಕಿ ಇತ್ಯಾದಿಗಳನ್ನು ವಸೂಲು ಮಾಡುವ ರಾಜಕೀಯ ಇಚ್ಛಾಶಕ್ತಿ ಇಲ್ಲ ಎಂದು ಆಪಾದಿಸುತ್ತಾ ಇತ್ತೀಚಿನ ವರ್ಷಗಳಲ್ಲಿ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ದೊಡ್ಡ ಕಂಪನಿಗಳ ಸುಮಾರು 45,000 ಕೋಟಿ ರೂಪಾಯಿಗಳ ಸಾಲ ಬಾಕಿಯನ್ನು ಮನ್ನಾ ಮಾಡಿರುವುದು ಆಘಾತಕಾರಿ ಎಂದಿದೆ.

ಈ ರೀತಿ ಸರ್ವತೋಮುಖ ವಿನಾಶದತ್ತ ಸಾಗುವುದನ್ನು ದೇಶದ ಶ್ರಮಜೀವಿ ಜನಗಳು ಸಹಿಸುವುದಿಲ್ಲ ಎಂದು ಎಚ್ಚರಿಸುವ ಕಾರ್ಮಿಕ ಸಂಘಗಳ ಈ ರಾಷ್ಟ್ರೀಯ ಸಮಾವೇಶ ಭಾರತ ಸರಕಾರ ತಕ್ಷಣವೇ ತನ್ನ ಆರ್ಥಿಕ ನೀತಿಗಳ ದಿಕ್ಕಿನಲ್ಲಿ ಬದಲಾವಣೆ ತರಬೇಕು, ದುಡಿಯುವ ಜನಗಳ ತುರ್ತು ಬೇಡಿಕೆಗಳ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಕಾರ್ಯಾಚರಣೆಯ ಕಾರ್ಯಕ್ರಮ

ದೇಶದ ದುಡಿಯುವ ಜನತೆಯ ತಕ್ಷಣದ ಬೇಡಿಕೆಗಳ ಈಡೇರಿಕೆಗಾಗಿ ನವದೆಹಲಿಯಲ್ಲಿ ನಡೆದ ಕಾರ್ಮಿಕ ಸಂಘಗಳ ರಾಷ್ಟ್ರೀಯ ಸಮಾವೇಶ ಈ ಕೆಳಗಿನ ಕಾರ್ಯಾಚರಣೆಯ ಕಾರ್ಯಕ್ರಮವನ್ನು ಐಕ್ಯತೆಯಿಂದ ಜ್ಯಾರಿಗೊಳಿಸಬೇಕು ಎಂದು ಎಲ್ಲಾ ಕಾರ್ಮಿಕರಿಗೆ ಕರೆ ನೀಡಿದೆ.

ಜುಲೈ 20ರಿಂದ ಆಗಸ್ಟ್ 20, 2005 :
ರಾಜ್ಯಮಟ್ಟದ ಮತ್ತು ಜಿಲ್ಲಾಮಟ್ಟದ ಹಾಗೂ ವಲಯವಾರು ಸಮಾವೇಶಗಳು

ಆಗಸ್ಟ್ 27 ರಿಂದ ಸೆಪ್ಟೆಂಬರ್ 27, 2005 :
ಎಲ್ಲಾ ದುಡಿಮೆಯ ಸ್ಥಳಗಳಲ್ಲಿ ಕೈಗಾರಿಕಾ ಕೇಂದ್ರಗಳಲ್ಲಿ ಮತಪ್ರದರ್ಶನಗಳು/ ರ‍್ಯಾಲಿಗಳು ಮತ್ತು ಧರಣಿಗಳನ್ನು ನಡೆಸಿ ಅಂತಿಮವಾಗಿ ರಾಜ್ಯ/ ಜಿಲ್ಲಾಮಟ್ಟದ ರ‍್ಯಾಲಿಗಳನ್ನು ನಡೆಸುವುದು.

ಸೆಪ್ಟೆಂಬರ್ 15,2005 :
'ರಾಷ್ಟ್ರೀಯ ಆಣೆನೆರಿಕೆ ದಿನ'ದ ಆಚರಣೆ ಮತ್ತು ಮುಷ್ಕರದ ನೋಟೀಸು ಜಾರಿ

ಸೆಪ್ಟೆಂಬರ್ 29, 2005 :
ದೇಶವ್ಯಾಪಿ ಸಾರ್ವತ್ರಿಕ ಮುಷ್ಕರ

ನವದೆಹಲಿಯಲ್ಲಿ ನಡೆದ ಕಾರ್ಮಿಕರ ಸಂಘಗಳ ರಾಷ್ಟ್ರೀಯ ಸಮಾವೇಶ ಭಾರತ ಸರಕಾರ ತನ್ನ ಆರ್ಥಿಕ ನೀತಿಗಳ ದಿಕ್ಕಿನಲ್ಲಿ ಬದಲಾವಣೆ ತಂದು ಈ ಕೆಳಗಿನ ತುರ್ತು ಬೇಡಿಕೆಗಳ ಮೇಲೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿದೆ. ○

ಆಶಯ.....

ಮದ್ದು ಗುಂಡುಗಳೆಲ್ಲಾ
ನಿದ್ದೆ ಹೋಗಲಿ
ಸದ್ದು ಗದ್ದಲವಿಲ್ಲದ
ನಾಳೆ ಬರಲಿ
ಅಸಮಾನತೆ
ಅಳಿದು ಹೋಗಲಿ
ಭಾವೈಕ್ಯತೆ
ಬೆಳೆದು ನಿಲ್ಲಲ್ಲಿ
ಜಾತಿಭೀತಿ
ಜಾರಿ ಹೋಗಲಿ
ಮಾನವೀಯತೆ
ಎಂದಿಗೂ ನಗಲಿ.

ಎನ್.ವಿ.ಸೌಮ್ಯರಾಣಿ
ಬಳ್ಳಾರಿ.



ಮಾವ ತನ್ನ ಸೊಸೆಯ ಮೇಲೆ ಅನಾಗರಿಕವಾಗಿ ಅತ್ಯಾಚಾರವೆಸಗಿದ. ಹೆಣ್ಣು ಈ ದೌರ್ಜನ್ಯದ ಬಲಿಪಶು. ನೊಂದವರ ಕಣ್ಣೀರು ಒರೆಸುವುದಕ್ಕಾಗಿಯೇ ಇವೇ ಎನ್ನಲಾಗುವ ಧರ್ಮಗಳು - ಶಾಸ್ತ್ರ ಗ್ರಂಥಗಳು ಇಲ್ಲಿ ಏನು ಮಾಡುತ್ತಿವೆ? ನೊಂದ ಹೆಣ್ಣಿನ ಮನಸ್ಸಿನ ಗಾಯದ ಮೇಲೆ ಮತ್ತೊಂದು ಬರೆ ಎಳೆದು ಇನ್ನು ಮುಂದೆ ಆಕೆ ಗಂಡನೊಡನೆ ಸಂಸಾರ ಮಾಡುವಂತಿಲ್ಲ, ಗಂಡನನ್ನು ಮಗನಂತೆ ಕಾಣಬೇಕು ಎಂದು ಮುಸ್ಲಿಂ ಮೂಲಭೂತವಾದಿಗಳು ಫತ್ವಾ ಹೊರಡಿಸಿದ್ದಾರೆ. ಅನ್ಯಾಯಕ್ಕೊಳಗಾದ ಹೆಣ್ಣಿಗೆ ಮತ್ತ ಶಿಕ್ಷೆ! ಈ ಬಗ್ಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿಯವರ ಲೇಖನ

ಇಮ್ರಾನಾ....... ಮತ್ತು ಅಂಥ ನಾನಾ ಪ್ರಕರಣಗಳ ಕುರಿತು


ವಿಮಲಾ ಕೆ.ಎಸ್

ಹೀಗೊಂದು ಪ್ರಕರಣ. ಒಂದೆಂದರೆ ಒಂದೇ ಅಲ್ಲ....... ಷರಿಯತ್ ನನಗೆ ನೀಡುವ ಆದೇಶವನ್ನು ನಾನು ಪಾಲಿಸುತ್ತೇನೆ.......................... ಉಸಿರು ಪೂರ್ಣ ಒಳಗೆ ಹೋಗದೇ ಮುಂದುವರೆವ ಮಾತುಗಳು ....ನನ್ನ ಮೇಲೆ ಅತ್ಯಾಚಾರ ಮಾಡಿದ ಮಾವನಿಗೆ ಕನಿಷ್ಟ 20 ವರ್ಷಗಳ ಸಜಾ ಆಗಬೇಕು. ಇದು ಜೂನ್ 30ರ ರಾತ್ರಿ ಗಂಡನ ತಂದೆಯಿಂದ ಅತ್ಯಾಚಾರಕ್ಕೊಳಗಾದ ಇಮ್ರಾನಾಳ ಮಾತುಗಳು. ಬಹುಶಃ ಇಮ್ರಾನಾಳಿಗೆ ತನ್ನ ಮೇಲೆ ನಡೆದ ಅತ್ಯಾಚಾರಕ್ಕಿಂತಲೂ ಭಯಾನಕವಾಗಿ ಬಂದಿದ್ದು ದಾರುಲ್ ಉಲುಮ್‌ನ ಫತ್ವಾ, "ಧರ್ಮ"ದ ರಕ್ಷಣೆಗಾಗಿಯೇ ಕಟಿಬದ್ಧವಾಗಿರುವ ಈ ಸಂಸ್ಥೆ 'ಇಮ್ರಾನಾ'ದಂತಹ ಪ್ರಕರಣಗಳ ಸಂದರ್ಭಕ್ಕೆ ನೀಡಿದ ಆದೇಶ (ಫತ್ವಾ)ವೆಂದರೆ "ಇಮ್ರಾನಾ ಇನ್ನು ಮುಂದೆ ತನ್ನ ಗಂಡನನ್ನು ಮಗನಂತೆ ನೋಡಬೇಕು. ಗಂಡನ ತಂದೆಯೊಂದಿಗೆ ಆಕೆ ದೈಹಿಕ ಸಂಪರ್ಕ ಹೊಂದಿದ ಕಾರಣದಿಂದಾಗಿ ಆಕೆ ಅವನಿಗೆ ತಾಯಿಗೆ ಸಮಾನಳಾಗುತ್ತಾಳೆ". ಅವಳು ಹಾಗೆ ನಡೆದುಕೊಳ್ಳದಿದ್ದರೆ ಅದು ಷರಿಯತ್‌ಗೆ ಅಪಚಾರವೆಸಗಿದಂತಾಗುತ್ತದೆ. ಧರ್ಮದ ಹೆಸರಿನಲ್ಲಿ ಮೂಲಭೂತವಾದ ವಿಜೃಂಭಿಸುವಾಗ, ಪ್ರಜಾಪ್ರಭುತ್ವ, ಮಾನವ ಹಕ್ಕುಗಳು, ಅಭಿವ್ಯಕ್ತಿ ಸ್ವಾತಂತ್ರ್ಯಗಳು ಮೂಲೆ ಗುಂಪಾಗುತ್ತವೆ. ಮಹಿಳೆಯರ ಸಂದರ್ಭದಲ್ಲಂತೂ ಅವುಗಳ ಹೆಸರೇ ಕೇಳದಂತಾಗಿಬಿಡುತ್ತದೆ. ಮತ್ತದಕ್ಕೆ ಜಾತಿ, ಧರ್ಮ, ಗಡಿ, ಪ್ರಾಂತಗಳ ಬೇಧವೂ ಇರುವುದಿಲ್ಲ.

ಸನಾತನ ಪರಂಪರೆಯ ಹೆಸರಿನಲ್ಲಿ ಸತಿಯಾದ ರೂಪ್ ಕನ್ವರ್, ವೈಯಕ್ತಿಕ ಕಾನೂನಿನ ನೆರಳಿನಲ್ಲಿ ಶಾಬಾನು, ಇವರು ಧರ್ಮದ ಕಪಿಮುಷ್ಟಿಯಲ್ಲಿ ನಲುಗಿ ಬಾಡಿದ ಈ ನೆಲದ ಹೂಗಳು. 80ರ ದಶಕದಲ್ಲಿ ಈ ಘಟನೆಗಳು ಜನಮನದಿಂದ ಅಳಿಸಲೇ ಸಾಧ್ಯವಿಲ್ಲದಂತಹ ಆಳವಾದ ಗಾಯ ಮಾಡಿಟ್ಟಿವೆ. ಎಂದಿಗಾದರೂ ಈ ಗಾಯ ಮಾಯಬಲ್ಲುದೇ ಎಂಬ ಕನಸನ್ನಾರಾದರೂ ಕಾಣಬಯಸಿದರೆ ಇಲ್ಲ.... ಖಂಡಿತ ಇಲ್ಲ. ಯಾಕೆಂದರೆ ಈಗ 21ನೇ ಶತಮಾನದ ನವನಾಗರೀಕತೆಯ ಉತ್ತುಂಗದಲ್ಲಿಯೂ ನಮ್ಮ ಮೇಲೆ ಬೇರೆ ಜಾತಿಯವನನ್ನು ಮದುವೆಯಾದಳೆಂದು ವಿಶ್ವ ಹಿಂದೂ ಪರಿಷತ್ತಿನ ಹಿಂಸೆಗೆ ಒಳಗಾಗುವ, ಗಂಡನನ್ನು ಸಹೋದರನೆಂದು ನೋಡೆನ್ನುವ ಪೀಡನೆಗೆ ಒಳಗಾಗುವ ಹರ್ಯಾಣದ ಭಾರತಿ, ಕುಡಿದ ಅಮಲಿನಲ್ಲಿ ಗಂಡ ಹೇಳಿದ 3 ತಲಾಖ್‌ನಿಂದಾಗಿ ಆ ಗಂಡನ ಜೊತೆ ಸಂಸಾರ ನಡೆಸಬೇಕೆಂದರೆ ಒಂದು ರಾತ್ರಿ ಇನ್ನೊಬ್ಬನೊಡನೆ ಹೆಂಡತಿಯಾಗಿ ಕಳೆದು ಹಲಾಲಕ್ಕೆ ಒಳಗಾಗಿ ಮಾತ್ರವೇ ಪುನಃ ಗಂಡನೊಡನೆ ಮದುವೆಯಾಗಬಹುದೆಂದು ಫತ್ವಾ ಪಡೆಯುವ ಓರಿಸ್ಸಾದ ಅಮೀನ್, ಅತ್ಯಾಚಾರ ಮಾಡಿದ ಮಾವನಿಗೆ ಆತ ಮಗನಾಗಿರುವುದರಿಂದ ಗಂಡನನ್ನು ಮಗನೆಂದು ನೋಡೆನ್ನುವ ದಾರುಲ್ ಉಲುಮ್‌ನ ಫತ್ವಾ ಪಡೆಯುವ ಇಮ್ರಾನಾ.......ರ ಕಣ್ಣ ಹನಿಗಳು, ಬಿಸಿಯುಸಿರು ನಮ್ಮ ಕನಸನ್ನು ಛಿದ್ರಗೊಳಿಸುತ್ತವೆ. ವಿವಾಹದ ಹೊಸತರಲ್ಲೇ ಕರ್ತವ್ಯದ ಕರೆಗೆ ಓಗೊಟ್ಟು ದಂಡಿಗೆ ಹೋದ ಗಂಡ ಕಾರ್ಗಿಲ್ ಯುದ್ಧದಲ್ಲಿ ಮಡಿದನೆಂಬ ವಾರ್ತೆ. ಊರಿಗೆ ಊರೇ ಶೋಕ ಸಮರ್ಪಿಸಿದ ಹಲವು ದಿನಗಳ ಮೇಲೆ ಮರುವಿವಾಹವಾಗಿ ಮಕ್ಕಳೊಂದಿಗೆ ಗಂಡನೊಡನೆ ಇರುವ ಗುಡಿಯಾ, ಯುದ್ಧದಲ್ಲಿ ಮಡಿಯದ ಮೊಲ ಗಂಡ ಹಿಂತಿರುಗಿ ಬಂದಾಗ, ಗುಡಿಯಾಳ ಅಭಿಪ್ರಾಯವೇನೆಂದೂ ಕೇಳದೇ ಅವಳು ಮೊದಲ ಗಂಡನ ಜೊತೆ ಬದುಕಬೇಕೆಂಬ ಜಾತಿ ಪಂಚಾಯತ್‌ನ ಆದೇಶ - ನಮ್ಮನ್ನು ಬಡಿದೆಬ್ಬಿಸುತ್ತದೆ.

ಇಮ್ರಾನಾ ಪ್ರಕರಣ

ಇದೇ ಜೂನ್ ತಿಂಗಳಿನಲ್ಲಿ ಉತ್ತರ ಪ್ರದೇಶದ ಮುಜಾಫರ್ ನಗರದ ಇಮ್ರಾನಾ.... ಬಡ ಕೂಲಿಕಾರ ಕುಟುಂಬದ 5 ಮಕ್ಕಳ ತಾಯಿ. ಗಂಡ ನೂರ್ ರಿಕ್ಷಾ ಎಳೆಯುತ್ತ, ಇಟ್ಟಿಗೆ ಭಟ್ಟಿಗಳಲ್ಲಿ ಕೆಲಸ ಮಾಡುವ ಶ್ರಮಿಕ. 14ನೇ ವಯಸ್ಸಿನಲ್ಲಿ ಮದುವೆ, ವರ್ಷ, ಎರಡು ವರ್ಷಗಳಿಗೊಂದರಂತೆ 5 ಮಕ್ಕಳು. ಬದುಕಿನ ಬಂಡಿಯ ಭಾರವನ್ನು ಎಳೆಯಲು ನೂರ್, ದೂರದ ದೆಹಲಿಗೂ ಹೋಗುತ್ತಾನೆ ಕೆಲಸ ಮಾಡಲು. ಹೀಗೆ ಗಂಡನಿಲ್ಲದ ಜೂನ್ 3ರ ರಾತ್ರಿ ಇಮ್ರಾನಾಳ ಪಾಲಿಗೆ ಕರಾಳ ರಾತ್ರಿ.. ಬೇಸಿಗೆಯ ಧಗೆಗೆ ಮನೆಯ ಎಲ್ಲರೂ ಹೊರಗೆ ಮಲಗಿದ್ದಾಗ, ಸುರಿದ ಮಳೆಯಿಂದ ಎಲ್ಲರನ್ನೂ 'ಮನೆ' ಎಂದು ಕರೆಸಿಕೊಳ್ಳುವ ಕಿರಿ ಛಾವಣಿಯ ಒಳಗೆ ಓಡಿದಾಗ........ ಹಿಂಬಾಲಿಸಿ ಬಂದ ಗಂಡನ ಅಪ್ಪ ಇಮ್ರಾನಾಳ ಮೇಲೆರಗಿದ. ಎರಗುವಾಗ ತೋರಿಸಿದ್ದು ಹರಿತವಾದ ಚಾಕು. ಅದು ಅವಳ ನಿದ್ರಿಸುತ್ತಿದ್ದ ಮಕ್ಕಳಿಗೆ ಗುರಿ ಇಟ್ಟು. ಮಾವ ನಡೆಸಿದ ಅತ್ಯಾಚಾರ, ಅತ್ತೆಯಿಂದ ನ್ಯಾಯ ಕೊಡಿಸುವ ಭರವಸೆ, ಇಮ್ರಾನಾಳ ಪರಿಸ್ಥಿತಿ ದಯನೀಯ. ನಾದಿನಿಯನ್ನು ನೋಡಲು ಬಂದ ಅಣ್ಣನ ಹೆಂಡತಿ ಅತ್ತಿಗೆಯ ಮೂಲಕ ತವರು ಮನೆಗೆ ಸುದ್ದಿ ಮುಟ್ಟುತ್ತದೆ. ರೋಷ ತಪ್ತ ಕುಟುಂಬದವರು ಬಂದು ನಡೆಸಿದ ಗಲಾಟೆಯಿಂದ ಊರಿಗೆಲ್ಲ ಸುದ್ದಿಯಾಗುತ್ತದೆ. ಅತ್ಯಾಚಾರಿ ಮಾವ ಪೊಲೀಸರ ವಶವಾಗುತ್ತಾನೆ ನಿಜ. ಆದರೆ! ಮತ್ತೆಲ್ಲ ಧರ್ಮದ ಕತ್ತಿ ತೂಗುವುದು ಮಹಿಳೆಯ ಮೇಲೆ. ಅತ್ಯಂತ ಕಾಳಜಿಯಿಂದ ಧರ್ಮ ರಕ್ಷಣೆಗೆ ಹೊರಟ 'ಧರ್ಮ' ರಕ್ಷಕರು ಹೊರಡಿಸಿದ ಫತ್ವಾ "ಇಮ್ರಾನಾ ಇನ್ನು ಮುಂದೆ ತನ್ನ ಗಂಡನನ್ನು ಮಗನೆಂದು ಭಾವಿಸಬೇಕು. ಗಂಡನ ತಂದೆಯೊಂದಿಗೆ ಆಕೆ ದೈಹಿಕ ಸಂಪರ್ಕ ಹೊಂದಿದ ಕಾರಣದಿಂದಾಗಿ ಆಕೆ ಅವನ ತಾಯಿಯ ಸಮಾನಳಾಗುತ್ತಾಳೆ. ಅವಳು ಹಾಗೆ ನಡೆದುಕೊಳ್ಳದಿದ್ದರೆ ಅದು ಷರಿಯತ್‌ಗೆ ಅಪಚಾರ ಎಸಗಿದಂತೆ" ಮೊದಲಿಗೆ ಸಿಡಿದ ಇಮ್ರಾನಾ ಇದನ್ನು ವಿರೋಧಿಸುತ್ತಾಳೆ....



ಫತ್ವಾದ ವಿರುದ್ಧ ಮಹಾ ರಾಷ್ಟ್ರದಲ್ಲಿ ಪ್ರತಿಭಟನೆ

ಆದರೆ "ಧರ್ಮದ ಕತ್ತಿ ಎಷ್ಟು ಹರಿತವೆಂದರೆ....ಕ್ರಮೇಣ ಇಮ್ರಾನಾಳ ಸ್ವರ ಕುಗ್ಗುತ್ತದೆ. ನನ್ನ ಮೇಲೆ ಅತ್ಯಾಚಾರ ಮಾಡಿದ ಮಾವನಿಗೆ ಕಠಿಣ ಶಿಕ್ಷೆಯಾಗಲೇಬೇಕು ಎನ್ನುತ್ತಲೇ, 'ಧರ್ಮ' ತನಗೆ ವಿಧಿಸುವ ಶಾಸನಕ್ಕೆ ತಾನು ತಲೆ ಬಾಗುತ್ತೇನೆ ಎಂಬ ಮಾತೂ ಬರುತ್ತದೆ. ಇಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕು, 80 ರ ದಶಕದ ರೂಪ್ ಕನ್ವರ್, ಶಾಬಾನೂ.... ಪ್ರಕರಣಗಳ ಸಂದರ್ಭದಲ್ಲಿಯೂ ಮೂಲಭೂತವಾದದ ಕಪಿಮುಷ್ಠಿ ಇಷ್ಟೇ ಭದ್ರವಾಗಿತ್ತು. ಇಂದೂ ಅದೇ ಪ್ರಯತ್ನ ಸತತವಾಗಿ ಮುಂದುವರೆಯುತ್ತಲೇ ಇದೆ.

ಶಾಬಾನೂ ಪ್ರಕರಣದ ಸಂದರ್ಭದಲ್ಲಿಯೂ ಪ್ರಗತಿಪರ ಮಹಿಳಾ ಚಳುವಳಿ ಅವರ ಬೆನ್ನಿಗೆ ನಿಂತಿತ್ತು. ಇಂದು ಕೂಡಾ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ನೇತೃತ್ವದಲ್ಲಿ ಇಮ್ರಾನಾಳ ಬೆಂಬಲಕ್ಕೆ ಹಲವು ಸಂಘಟನೆಗಳು ನಿಂತಿವೆ. ಆದರೆ ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾಗಿ ದುರ್ಬಲವಾಗಿರುವ ಇಂತಹ ಕುಟುಂಬಗಳಿಗೆ ಧಾರ್ಮಿಕ ಮುಖಂಡರ ವಿರೋಧ ಕಟ್ಟಿಕೊಳ್ಳುವ ಧೈರ್ಯವೆಲ್ಲಿ ಬರಬೇಕು!


ಮೀರತ್ ಜಿಲ್ಲೆಯ ಮುಂಡಳಿ ಗ್ರಾಮದ ಗುಡಿಯಾ ಹೇಳಿದ ಮಾತುಗಳು ಕೂಡ - ಷರಿಯತ್‌ನ ವಿರುದ್ಧ ನಡೆಯಲು ಸಾಧ್ಯವಿಲ್ಲ, ಇಮ್ರಾನಾ ಮತ್ತವಳ ಕುಟುಂಬ ಹೇಳುವುದು ಕೂಡ ಅದನ್ನೇ. ಸಾಮಾನ್ಯವಾಗಿ ಇಂತಹ ಘಟನೆಗಳು ನಡೆದಾಗ ಅದು ಮುಸ್ಲಿಂರ ಸಮಸ್ಯೆ, ಕ್ರಿಶ್ಚಿಯನ್‌ರ ಸಮಸ್ಯೆ.... ಎನ್ನುವಂತೆ ವರ್ಗೀಕರಿಸಿ ನೋಡಲ್ಪಡುತ್ತದೆ. ಹಾಗೆಯೇ ಮಾಧ್ಯಮಗಳಲ್ಲೂ ಬಿಂಬಿತವಾಗುತ್ತದೆ. ಆದರೆ ಇದು ಯಾವುದೇ ಒಂದು ಧರ್ಮಕ್ಕೆ ಸೇರಿದವರ, ಮಹಿಳೆಯರ ಸಮಸ್ಯೆ ಮಾತ್ರ ಅಲ್ಲ. ಬದಲಿಗೆ ಇದು ಮಾನವ ಹಕ್ಕುಗಳ ಉಲ್ಲಂಘನೆಯ ಪ್ರಶ್ನೆಯಾಗಬೇಕು. ಮಹಿಳೆಯರ ಹಕ್ಕುಗಳ ಪ್ರಶ್ನೆಯಾಗಬೇಕು. ನಾಗರೀಕ ಸಮಾಜದ ಜವಾಬ್ದಾರಿಯ ಪ್ರಶ್ನೆಯಾಗಬೇಕು. ಗೋಸುಂಬೆ ರಾಜಕಾರಣ ನಡೆಸುವ ಮುಲಾಯಂ ಸಿಂಗ್‌ರಂತವರು - ಧರ್ಮ ಗುರುಗಳು ಸಾರಾಸಾರ ವಿಚಾರ ಮಾಡಿಯೇ ಇಂತಹ ವಿಷಯಗಳ ಬಗ್ಗೆ ನಿರ್ಧರಿಸಿರುತ್ತಾರೆ. ಆದ್ದರಿಂದ 'ಫತ್ವಾ' ಸರಿ ಇರುತ್ತದೆ ಎನ್ನುತ್ತಾರೆ. ಕಾಂಗ್ರೆಸ್ ಮುಖಂಡರೂ ಕೂಡ ಸಾರವಾಗಿ ಘಟನೆ, ಫತ್ವಾಗಳನ್ನು ಖಂಡಿಸುವ ಧೈರ್ಯ ತೋರಿಸಲಿಲ್ಲ. ಕೇವಲ ಸಿಪಿಐ(ಎಂ) ಪಕ್ಷ ಮಾತ್ರ, ಮತ ಬ್ಯಾಂಕ್ ರಾಜಕೀಯದಿಂದ ದೂರವಿದ್ದು ತನ್ನ ಸೈದ್ಧಾಂತಿಕ ಬದ್ಧತೆಗನುಗುಣವಾಗಿ ಫತ್ವಾವನ್ನು ಕಟು ಮಾತುಗಳಿಂದ ವಿರೋಧಿಸಿದೆ. ಇಮ್ರಾನಾಳ ಬೆಂಬಲಕ್ಕಾಗಿ ನಿಂತಿದೆ. ಆದರೆ ವಸ್ತುಶಃ ಮಹಿಳಾ ವಿರೋಧಿಯೇ ಆಗಿರುವ ಬಿ.ಜೆ.ಪಿ 'ಏಕರೂಪನಾಗರಿಕ ಸಂಹಿತೆ' ಬೇಕೆನ್ನುವ ತನ್ನ ಹಳೆಯ ತುತ್ತೂರಿ ಊದಲು ಪ್ರಾರಂಭಿಸಿಯೇ ಬಿಟ್ಟಿದೆ. ಆದರೆ ಉಚ್ಚ ಜಾತಿಯ ಭಾರತಿ ಕೆಳ ಜಾತಿಯ ಹುಡುಗನನ್ನು ವಿವಾಹವಾದಳೆಂದು ಅವಳಿಗೆ ಹಿಂಸಿಸಿ ಆತನನ್ನು ಸಹೋದರನಂತೆ ನೋಡು ಎಂದು ವಿ.ಹಿಂ.ಪ. ನಡೆಸಿದ ಕೃತ್ಯಕ್ಕೆ ಯಾವ ಸಂಹಿತೆ ಜಾರಿಯಾಯಿತು ಎಂದು ಇದುವರೆಗೂ ತಿಳಿದಿಲ್ಲ. ಜಾತಿ ಪಂಚಾಯತ್‌ಗಳು ಹೇರುವ ಕಟ್ಟುಪಾಡುಗಳು, ಅದರಡಿಯಲ್ಲಿ ಮಹಿಳೆಯರ, ಬಡವರ ರೋದನಗಳು ಉತ್ತರಭಾರತ, ಹರ್ಯಾಣ, ಪಂಜಾಬ್‌ಗಳಲ್ಲಿ ದಿನನಿತ್ಯದ ಘಟನೆಗಳಾಗಿವೆ. ಮತ್ತದು ಕೇವಲ ಮುಸ್ಲಿಂ ಸಮುದಾಯಕ್ಕೆ ಮೀಸಲಾಗಿಲ್ಲ.

ಬಯಲಿಗೆ ಬಂದ ಇಮ್ರಾನಾ ಪ್ರಕರಣದ ಜಾಡು ಹಿಡಿದು ಹೊರಟಾಗ ವಿವಿಧ ಸಂಘಟನೆಗಳಿಗೆ ಕೇಳಿ ಬಂದಿದ್ದು, ಇಂತಹುದು ಇದೊಂದೇ ಪ್ರಕರಣವಲ್ಲ. ಇಮ್ರಾನಾಳ ಊರಿನವರೇ ಆದ ಹಲವು ಮಹಿಳೆಯರು ಪ್ರತಿನಿತ್ಯ ಇಂತಹ ಕ್ರೌರ್ಯಕ್ಕೆ ಬಲಿಯಾಗುತ್ತಾರೆ. ಉಸಿರೆತ್ತಲು ಧೈರ್ಯ ಸಾಲದೆ ನಲುಗುತ್ತಾರೆ. ಆದರೆ ಈ ಬಾರಿ ಕಂಡುಬಂದ ಒಂದು ಸಕಾರಾತ್ಮಕ ಬೆಳವಣಿಗೆಯೆಂದರೆ, ಹಲವು ಮುಸ್ಲಿಂ ಮಹಿಳೆಯರು, ಮುಸ್ಲಿಂ ವೈಯಕ್ತಿಕ ಕಾನೂನು ಮಂಡಳಿಯ ಕೆಲವು ಶಾಖೆಗಳ ಪುರುಷರೂ ಕೂಡ ದಾರುಲ್ ಉಲುಮ್ ನೀಡಿದ ಫತ್ವಾವನ್ನು ವಿರೋಧಿಸಿ ಸಾರ್ವಜನಿಕ ಹೇಳಿಕೆ ನೀಡಿದ್ದಾರೆ. ಇದು ಪ್ರಗತಿಪರ ಮಹಿಳಾ ಚಳುವಳಿಗೆ ಸಂದ ಜಯವೆಂದು ಭಾವಿಸೋಣವೇ?

ಭ್ರೂಣಹತ್ಯೆ

ಹೆಚ್ಚುತ್ತಿದ್ದರೆ
ಹೆಣ್ಣು ಶಿಶು ಭ್ರೂಣ ಹತ್ಯೆ
ವೃದ್ಧಿಸದೇ
ಪುರುಷರ ಸಂಖ್ಯೆ?
ದೊರಕದಿದ್ದರೆ
ಪುರುಷನಿಗೊಬ್ಬ ಸ್ತ್ರೀ
ಹೆಚ್ಚಲಾರವೇ
ಅತ್ಯಾಚಾರ, ಅಪಹರಣಗಳಂತಹ
ಮಹಿಳಾ ದೌರ್ಜನ್ಯ?
ಆಗುತ್ತಿದ್ದರೆ
ಪ್ರಕೃತಿ ಅಸಮತೋಲನ
ನೀಡಲಾರದೇ
ನಾಗರೀಕತೆಯ ಅಂತ್ಯಕ್ಕೆ ಆಹ್ವಾನ?
ಮರೆತರೆ
ಮಾನವೀಯ ಮೌಲ್ಯಗಳನ್ನು
ನೀವೆಲ್ಲರೂ
ಮನಸತ್ತ ಮೃಗಗಳು

ಎಸ್.ವಿ.ವಿಜಯಲಕ್ಷ್ಮಿ.



ಜಿ.ಎಸ್.ಮಣಿ

ಬ್ಯಾಂಕುಗಳ ಗಾತ್ರ ಅವುಗಳ ಸಾಮರ್ಥ್ಯ ಸೂಚಿಯಲ್ಲ

ಯುಪಿಎ ಸರ್ಕಾರದ ಹಣಕಾಸು ಮಂತ್ರಿಗಳಿಗೆ ಬ್ಯಾಂಕುಗಳ ವಿಲೀನ ಮತ್ತು ವಶೀಕರಣಕ್ಕೆ ಅನುವು ಮಾಡಿಕೊಡುವ ಹುಚ್ಚು. ಇಂತಹ ಕ್ರಮದಿಂದ ಭಾರತದ ಬ್ಯಾಂಕುಗಳು ಅಂತರ್ರಾಷ್ಟ್ರೀಯ ಮಟ್ಟದ ಬ್ಯಾಂಕುಗಳಾಗುತ್ತವೆ ಎಂಬುದು ಅವರ ವಿವರಣೆ. ಆ ಮೂಲಕ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ವಹಿವಾಟಿನ ಹರಿವು ಭಾರತದತ್ತ ಬರುತ್ತದೆ ಎಂಬ ನಿರೀಕ್ಷೆ. ಹಣಕಾಸು ವಲಯದಲ್ಲಿ ವಿಲೀನಗಳ ಬಗ್ಗೆ ಹಲವು ಸುದ್ದಿಗಳು ಹರಿದಾಡುತ್ತಲೇ ಇವೆ. ಹಲವು ಬ್ಯಾಂಕುಗಳ ಮುಖ್ಯಸ್ಥರುಗಳು ಅವರ ವಶೀಕರಣದ ಯೋಜನೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಂತಹ ಬ್ಯಾಂಕು ಅಂತರ್ರಾಷ್ಟ್ರೀಯ ಮಟ್ಟದಲ್ಲೇ ಬ್ಯಾಂಕುಗಳ ವಶೀಕರಣ ಮಾಡಲು ಹವಣಿಸುತ್ತಿದೆ.

ಇಂತಹ ಎಲ್ಲಾ ಪ್ರಯತ್ನಗಳಿಗೆ ಕೇಂದ್ರ ಹಣಕಾಸು ಮಂತ್ರಾಲಯದ ಬೆಂಬಲ ಇದೆ ಎಂಬುದು ಸ್ಪಷ್ಟ. ಈ ಹಿನ್ನೆಲೆಯಲ್ಲಿ ಬ್ಯಾಂಕ್ ಅಧಿಕಾರಿಗಳ ಸಂಘಟನೆ ಒಂದು ಆರ್ಥಿಕ ತಜ್ಞರ ಸಮಿತಿಯನ್ನು ನೇಮಿಸಿತು. ವಿಲೀನ ವಶೀಕರಣಗಳ ಮೂಲಕ ಗಾತ್ರವನ್ನು ಹೆಚ್ಚಿಸಿದರೆ ಬ್ಯಾಂಕುಗಳ ಸಾಮರ್ಥ್ಯ ಹೆಚ್ಚುತ್ತದೆಯೇ ಎಂಬುದು ಅವರು ಪರೀಕ್ಷಿಸಬೇಕಾದ ವಿಷಯ.

ಆರ್ಥಿಕ ತಜ್ಞರಾದ ಡಾ. ಪ್ರಭಾತ್ ಪಟ್ನಾಯಕ್, ಡಾ. ಸಿ.ಚಂದ್ರಶೇಖರ್ ಮತ್ತು ಇತರ ಹಲವು ಆರ್ಥಿಕ ತಜ್ಞರು ಈ ವಿಷಯವನ್ನು ಪರಿಶೀಲಿಸಿ ಬ್ಯಾಂಕುಗಳ ಗಾತ್ರಕ್ಕೂ ಅವುಗಳ ಸಾಮರ್ಥ್ಯಕ್ಕೂ ಸಂಬಂಧವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಜಗತ್ತಿನಾದ್ಯಂತ ಹಲವು ಬ್ಯಾಂಕುಗಳ ಅಧ್ಯಯನ ಮಾಡಿ, ಚೀನಾದಲ್ಲಿನ ಬ್ಯಾಂಕುಗಳ ಅಧ್ಯಯನವನ್ನೂ ಮಾಡಿದ ಸಮಿತಿ ಇಂತಹ ಸ್ಪಷ್ಟ ನಿಲುವಿಗೆ ಬಂದಿದೆ. ಯುಪಿಎ ಸರ್ಕಾರದ ಹಣಕಾಸು ಸಚಿವ ಪಿ.ಚಿದಂಬರಂ ಈ ವಿಷಯದ ಬಗ್ಗೆ 'ಜಾಣ ಕಿವುಡು' ಪ್ರದರ್ಶಿಸುವವರೆ ಅಥವಾ ಬುದ್ಧಿವಂತ ಅಜ್ಞಾನ ತೋರುವರೆ?

ಬಂಡವಾಳಿಗರ ಬಯಕೆ, ಮಂತ್ರಿಗಳ ಹಾರೈಕೆ

ಭಾರತದ ಬಂಡವಾಳಿಗರು ಹೂಡಿಕೆ ವಾತಾವರಣವನ್ನು ಸುಧಾರಿಸುವಂತೆ ಕೇಂದ್ರ ಹಣಕಾಸು ಸಚಿವರ ಮೇಲೆ ಒತ್ತಡ ಹೇರುತ್ತಿದ್ದಾರೆ. ಅಂತರ್ರಚನಾ ಸೌಲಭ್ಯಗಳನ್ನು ಹೆಚ್ಚಿಸಿ, ಇಂಧನ, ಆದಿರು ಮತ್ತು ಹಣಕಾಸು ವಲಯಗಳಲ್ಲಿ ಸುಧಾರಣೆ ತನ್ನಿ ಎಂಬುದೇ ಅವರ ಕೋರಿಕೆ.

ಈ ಬಂಡವಾಳಿಗರ ಪ್ರಿಯಮಿತ್ರರಾದ ಪಿ.ಚಿದಂಬರಂ ಎಂಬ ಕೇಂದ್ರದ ಹಣಕಾಸು ಮಂತ್ರಿ ಮಹೋದಯರು ಹೂಡಿಕೆ ಹೆಚ್ಚಾಗಿ ಬರುವಂತೆ ಮಾಡಲು ಅವಶ್ಯವಿರುವ ಎಲ್ಲಾ ವಿಧಿ ವಿಧಾನಗಳನ್ನು ಮತ್ತು ನೀತಿಗಳನ್ನು ಸುಧಾರಿಸುತ್ತೇವೆ ಎಂದು ಭರವಸೆ ನೀಡಿದ್ದಾರೆ. ಪ್ರಶ್ನೆ ಈ ಬಂಡವಾಳಿಗರಿಗೆ ಎಂತಹ ಸುಧಾರಣೆಗಳು ಬೇಕು ಎಂಬುದು. ಈ ಬಂಡವಾಳಿಗರಿಗೆ ಅವರ ಬಂಡವಾಳ ಮತ್ತು ಅದು ನೀಡುವ ಅಧಿಕಾರವನ್ನು ಹೆಚ್ಚಿಸಿಕೊಳ್ಳಬೇಕೆಂಬ ಆತುರ.

ದೇಶದ ಜನಸಾಮನ್ಯರ ಜೀವನ ಮಟ್ಟ ಸುಧಾರಿಸಬೇಕು, ಒಟ್ಟು ಉತ್ಪಾದನೆ ಹೆಚ್ಚಿಸಬೇಕು ಎಂಬಿತ್ಯಾದಿ ಒಟ್ಟಾರೆ ದೇಶಹಿತ ವಿಚಾರಗಳು ಈ ಬಂಡವಾಳಿಗರಿಗೆ ಬರುವುದಿಲ್ಲ.

ಬದಲಿಗೆ ಕಾರ್ಮಿಕ ಕಾನೂನು ಸುಧಾರಿಸಿ ಎನ್ನುತ್ತಾರೆ. ಕಾರ್ಮಿಕ ಕಾನೂನು ಸುಧಾರಣೆ ಎಂದರೆ ಅವರಿಗೆ ಬೇಕಾದ ಕೆಲಸಕ್ಕೆ ತೆಗೆದುಕೊಂಡು ಬೇಡಾದಾಗ ಕೆಲಸದಿಂದ ಕಿತ್ತುಹಾಕುವುದು ಅವರು ನಡೆಸುವ ವಹಿವಾಟುಗಳಿಗೆ ದೊಡ್ಡ ಪ್ರಮಾಣದಲ್ಲಿ ಅತಿ ಕಡಿಮೆ ಬಡ್ಡಿದರದಲ್ಲಿ ಸಾಲನೀಡುವುದು ಇತ್ಯಾದಿ. ಬಂಡವಾಳಿಗರು ಜನಪರವಾಗಿ ವಿಚಾರ ಮಾಡುವುದು ಸಾಧ್ಯವಿಲ್ಲ ಅಲ್ಲವೇ?

ಜಾಗತೀಕರಣದ ನೆರಳಲ್ಲಿ

ಸಭೆ, ಮೆರವಣಿಗೆಗಳಿಗೆ ತಡೆ - ಯಾರ ಹಿತಾಸಕ್ತಿಗಾಗಿ?

ಬೆಂಗಳೂರು ಗಿರಿನಗರದ ವಾಸಿ 74 ವರ್ಷದ ಬಿ.ಕೃಷ್ಣಭಟ್ ಎಂಬುವರು ನಗರದಲ್ಲಿ ಸಭೆ, ರ್‍ಯಾಲಿಗಳನ್ನು ನಡೆಸಲು ಅವಕಾಶ ನೀಡಬಾರದೆಂದು ಕರ್ನಾಟಕ ಸರ್ಕಾರ ಮತ್ತು ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ಆದೇಶಿಸಲು ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ ಹೂಡಿದ್ದಾರೆ. ಇದೇ ಸಂದರ್ಭದಲ್ಲಿ ರಾಜ್ಯದ ವಿಧಾನಸಭೆಯಲ್ಲೂ ಕಾಂಗ್ರೆಸ್ ಪಕ್ಷದ ದಿನೇಶ್ ಗುಂಡೂರಾವ್ ಮತ್ತಿತರರು ನಗರದಿಂದ 20. ಕಿ.ಮೀ. ದೂರದಲ್ಲಿ ಮಾತ್ರವೇ ಸಭೆ, ಮೆರವಣಿಗೆಗಳನ್ನು ನಡೆಸಲು ಅನುಮತಿ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಒಬ್ಬರು ಆಳುವ ಪಕ್ಷದ ಮುಖಂಡರಾದರೆ, ಇನ್ನೊಬ್ಬರು ಆಳುವ ವರ್ಗದ ಹಿತಾಸಕ್ತಿಯನ್ನು ಹೊಂದಿರುವವರು. ಇವರಿಬ್ಬರಿಗೂ ಹಾಗೂ ಇದೇ ನಂಬಿಕೆಯನ್ನು ಹೊಂದಿರುವ ಆಳುವ ವರ್ಗದ ಇತರರು ಶೋಷಣೆಗೆ ಒಳಗಾದ ಬಡಜನರು, ಕಾರ್ಮಿಕರು, ನೌಕರರು ಮತ್ತು ರೈತರು ತಮ್ಮ ಹಕ್ಕುಗಳಿಗಾಗಿ ಹೋರಾಡುವ ಯಾವುದೇ ವಿಧಾನವನ್ನು ಸಹಿಸುವುದಿಲ್ಲ.

ಬೆಳೆಯುತ್ತಿರುವ ಬೆಂಗಳೂರಿನಿಂದಾಗಿ ಎಲ್ಲಾ ಅನುಕೂಲಗಳನ್ನು ಪಡೆದು, ಅಲ್ಪಕಾಲದಲ್ಲೇ ಶ್ರೀಮಂತರಾಗಿ ಬೆಳೆದ ಕೃಷ್ಣಭಟ್ಟರು ಇತ್ತೀಚೆಗೆ ನಡೆದ ಸಮಾವೇಶದ ಕುರಿತಾಗಿ 'ಕುರುಬರೆಲ್ಲ ಕುರಿಗಳು' ಎಂದು ಮುಖಪುಟದಲ್ಲಿ ಜಾಹೀರಾತು ನೀಡಿ, ಪ್ರತಿರೋಧ ಬಂದನಂತರ ಇನ್ನೊಂದು ಜಾಹೀರಾತಿನ ಮೂಲಕ ತನ್ನ ಹೇಳಿಕೆಯನ್ನು ಹಿಂತೆಗೆದುಕೊಂಡಿದ್ದು ಜನರ ಮನಸ್ಸಿನಿಂದ ಇನ್ನೂ ಮಾಸಿಲ್ಲ.

ಸಾಧಾರಣಾ 10-12 ವರ್ಷಗಳ ಹಿಂದೆ ಬೆಂಗಳೂರಿನ ಕಬ್ಬನ್ ಪಾರ್ಕಿನಲ್ಲಿ ಪ್ರತಿಭಟನೆ ನಡೆಸಲು ಅವಕಾಶವಿತ್ತು. ವಿಧಾನಸೌಧ ಆಳುವ ಸರ್ಕಾರದ ಸಂಕೇತವಾಗಿದ್ದರೆ, ಅದರ ನೀತಿಗಳನ್ನು ಪ್ರತಿಭಟಿಸುವವರು ಹತ್ತಿರದಲ್ಲಿದ್ದ ಕಬ್ಬನ್ ಪಾರ್ಕಿನಲ್ಲಿ ನೆರೆಯುತ್ತಿದ್ದರು. ಉಪವಾಸ, ಧರಣಿ, ರ್‍ಯಾಲಿ ಇತ್ಯಾದಿಗಳ ಮೂಲಕ ತಮ್ಮ ಹಕ್ಕೊತ್ತಾಯಗಳನ್ನು ಮುಂದಿಡುತ್ತಿದ್ದರು. ಪ್ರತಿಭಟನೆಯು ವ್ಯಾಪಕವಾಗಿದ್ದರೆ, ಸಮರಶೀಲತೆಯಿಂದ ಕೂಡಿದ್ದರೆ, ತಮ್ಮ ಚುನಾವಣಾ ಹಿತಾಸಕ್ತಿಗೆ ಧಕ್ಕೆ ಉಂಟಾಗುತ್ತಿದೆ ಎಂದು ಭಾವಿಸಿದಾಗ, ಸರ್ಕಾರದಲ್ಲಿದ್ದ ಆಳುವ ಬಂಡವಾಳಶಾಹಿ ಪಕ್ಷಗಳು ಪರಿಹಾರ ಹುಡುಕಲು ಪ್ರಯತ್ನಿಸುತ್ತಿದ್ದವು. ಇಲ್ಲವಾದಲ್ಲಿ, ತಮಗೆ ಬೇಡಿಕೆಗಳು ಕೇಳಿಯೇ ಇಲ್ಲ ಎಂಬಂತೆ ನಟಿಸುತ್ತಿದ್ದವು.

ಜಾಗತೀಕರಣದ ನೀತಿಗಳು ಜಾರಿಯಾಗುತ್ತಿದ್ದಂತೆ, ಇದರಿಂದ ಬಾಧೆಗೊಳಗಾದ ಜನ ಪ್ರತಿಭಟನೆಯನ್ನು ಹೆಚ್ಚಿಸುತ್ತಿದ್ದಂತೆಯೇ, ತಮ್ಮ ಅನುಭವದ ಮೂಲಕ ಆಳುವ ಪಕ್ಷಗಳ ನೀತಿಯನ್ನು ಜನರು ತಿರಸ್ಕರಿಸುತ್ತಿದ್ದಂತೆಯೇ ಪ್ರತಿಭಟನೆಯ ಸ್ಥಳಗಳಿಗೂ ನಿಷೇಧ ಹೇರಲಾಯ್ತು. ಕಬ್ಬನ್ ಪಾರ್ಕಿನಿಂದ ಕೆ.ಆರ್. ಸರ್ಕಲ್, ಬಸವೇಶ್ವರ ಸರ್ಕಲ್, ನಂತರ ಹಳೆ ಸೆಂಟ್ರಲ್ ಜೈಲು, ಬನ್ನಪ್ಪ ಪಾರ್ಕಿಗೆ ಪ್ರತಿಭಟನಾ ಸ್ಥಳಗಳನ್ನು ಸೀಮಿತಗೊಳಿಸಿದೆ. ಇನ್ನೂ 20 ಕಿ.ಮಿ. ದೂರಕ್ಕೆ ವರ್ಗಾಯಿಸಬೇಕೆಂದು ಕಾಂಗ್ರೆಸ್ ಪಕ್ಷದ ಶಾಸಕರು ಅಸೆಂಬ್ಲಿಯಲ್ಲಿ ಧನಿ ಎತ್ತಿದ್ದಾರೆ.



ಈ ಸಂದರ್ಭದಲ್ಲಿ ಸಿಪಿಐ(ಎಂ) ಕಾರ್ಯದರ್ಶಿ ಮಂಡಳಿ ಸದಸ್ಯರಾದ, ಶಾಸಕ ಕಾಂ. ಜಿ.ವಿ.ಶ್ರೀರಾಮರೆಡ್ಡಿಯವರು ರಾಜಧಾನಿಯಲ್ಲಿ 'ಪ್ರತಿಭಟನೆಗೆ ಅವಕಾಶ ಇಲ್ಲದಿದ್ದಲ್ಲಿ ಸರ್ಕಾರ ಯಾಕಿರಬೇಕು. ಇದು ಪ್ರಜಾಪ್ರಭುತ್ವ ಹಕ್ಕಿನ ಮೇಲೆ ಧಾಳಿ' ಎಂದು ತರಾಟೆಗೆ ತೆಗೆದುಕೊಂಡರು. ಇದಕ್ಕೆ ದನಿಗೂಡಿಸಿದವರು ಕೆಲವೇ ಮಂದಿ ಶಾಸಕರು. ಪ್ರತಿಭಟನೆಯು ನ್ಯಾಯಕ್ಕಾಗಿ ದುಡಿಯುವ ಜನರ ಹೋರಾಟದ ಅಸ್ತ್ರವಾಗುವುದು ಆಳುವ ಪಕ್ಷಗಳಿಗೆ ಬೇಕಿಲ್ಲ. ಅವುಗಳಿಗೆ ಈಗಿರುವ ವ್ಯವಸ್ಥೆಯನ್ನು ಮುಂದುವರಿಸಿಕೊಂಡು ಹೋಗಬೇಕು ಅಷ್ಟೇ. ಬಂಡವಾಳಶಾಹಿ -ಭೂಮಾಲಕ ಆಳುವ ಪಕ್ಷದ ಮುಖಂಡರಿಗೆ ಬದಲಾವಣೆ ಬೇಕಿಲ್ಲ. ಒಂದು ವೇಳೆ ಬದಲಾವಣೆ ಬಂದರೂ ಅದು ತಮ್ಮ ಸ್ವಂತ ಆಸ್ತಿ ಅಥವಾ ಪ್ರತಿಷ್ಠೆಯನ್ನು ಹೆಚ್ಚಿಸಲಿಕ್ಕೆ. ಇಡೀ ಸಮಾಜದ ಒಳಿತಿಗಾಗಿ ಅಲ್ಲ.

ಸಭೆ, ಮೆರವಣಿಗೆ ಮಾಡುವ ಹಕ್ಕುಗಳನ್ನು ಯಾರೂ ದಾನವಾಗಿಕೊಟ್ಟಿದ್ದಲ್ಲ. ಬ್ರಿಟಿಷರ ವಿರುದ್ಧ ಹೋರಾಟ ಮಾಡುತ್ತಾ ಭಾರತದ ಜನತೆ ಪಡೆದ ಹಕ್ಕುಗಳು ಅವು. ಕರ್ನಾಟಕದ (ಹಿಂದಿನ ಮೈಸೂರು ಮತ್ತು ಇತರ ಕನ್ನಡ ಮಾತನಾಡುವ ಪ್ರದೇಶಗಳ) ಜನತೆಯೂ ಈ ಹೋರಾಟದಲ್ಲಿ ಭಾಗವಹಿಸಿದ್ದರು. ಅದರ ಸ್ಮಾರಕವಾಗಿ ಮೈಸೂರು ಬ್ಯಾಂಕ್ ವೃತ್ತದಲ್ಲಿ ಇಂದಿಗೂ ಹುತಾತ್ಮಸ್ತಂಭ ಸಾಕ್ಷಿಯಾಗಿದೆ. ಶಾಮಣ್ಣ, ತಿರುಮಲಯ್ಯ, ಪ್ರಹ್ಲಾದ ಶೆಟ್ಟಿ, ಗುಂಡಪ್ಪ ಬ್ರಿಟಿಷರ ವಿರುದ್ಧ ಸೆಣಸಿ ಬಲಿಯಾಗಿದ್ದರು. ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ಎಂದರೆ ಆ ಹೋರಾಟಗಾರರು ಅನ್ಯಾಯದ ವಿರುದ್ಧ ಹೋರಾಡಿದುದರ ಮುಂದುವರಿದ ಭಾಗ. ಎಲ್ಲಿಯವರೆಗೆ ಮನುಷ್ಯ, ಮನುಷ್ಯನನ್ನು ಶೋಷಣೆ ಮಾಡುವ ವ್ಯವಸ್ಥೆ ಕೊನೆಗೊಳ್ಳುವುದಿಲ್ಲವೋ ಅಲ್ಲಿಯವರೆಗೂ ಈ ಹೋರಾಟ ಮಂದುವರಿಯುತ್ತದೆ. ಅದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ.

ಸಂವಿಧಾನದಲ್ಲಿ ಅವಕಾಶ

ದೇಶದ ಸಂವಿಧಾನದ ಕಲಂ 19 (ಬಿ) ಮತ್ತು (ಸಿ) ಯಲ್ಲಿ ಸಭೆ ಸೇರುವ ಮತ್ತು ಸಂಘಗಳನ್ನು ಕಟ್ಟುವ ಹಕ್ಕುಗಳನ್ನು ಮೂಲಭೂತ ಹಕ್ಕುಗಳೆಂದು ಪರಿಗಣಿಸಲಾಗಿದೆ. ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದರೂ, ಜನರ ಆರ್ಥಿಕ ಮತ್ತು ಸಾಮಾಜಿಕ ಹಕ್ಕಗಳನ್ನು ಗಳಿಸಬೇಕಾದರೆ, ಗಳಿಸಿದ ಹಕ್ಕುಗಳನ್ನು ಉಳಿಸಿಕೊಳ್ಳಬೇಕಾದರೆ, ಮೇಲೆ ಹೇಳಿದ ಮೂಲಭೂತ ಹಕ್ಕುಗಳನ್ನು ಗಟ್ಟಿಗೊಳಿಸಿದರೆ ಮಾತ್ರ ಸಾಧ್ಯ. ಈ ಪ್ರಯತ್ನ ಸಾಗುತ್ತಿರುವಾಗಲೇ ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣದ ಹಿನ್ನೆಲೆಯಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಗಳ ಮೂಲಕ ದುಡಿಯುವ ಜನರ ಹಕ್ಕುಗಳ ಮೇಲೆ ಧಾಳಿ ಹೆಚ್ಚಾಗುತ್ತಿದೆ. ಇತ್ತೀಚೆಗೆ ಗುರ್‌ಗಾಂವ್‌ನಲ್ಲಿ ಕಾರ್ಮಿಕರ ಮೇಲೆ ನಡೆದ ಬರ್ಬರ ದಬ್ಬಾಳಿಕೆ, 2003 ರಲ್ಲಿ ತಮಿಳುನಾಡು ಸರ್ಕಾರ ತನ್ನ ನೌಕರರ ಮೇಲೆ ತೆಗೆದುಕೊಂಡ ಅಮಾನುಷ ಕ್ರಮ, ಅದಕ್ಕೆ ನ್ಯಾಯಾಂಗದ ಸಮರ್ಥನೆ ಜಾಗತೀಕರಣದ ಹಿನ್ನೆಲೆಯಲ್ಲಿ ಕಾರ್ಮಿಕ ವರ್ಗದ ಮೇಲೆ ದಬ್ಬಾಳಿಕೆ ಹೆಚ್ಚುತ್ತಿರುವುದರ ಸಂಕೇತ.

ಕಾರ್ಮಿಕ ವರ್ಗವು, ಒಂದಾಗಿ ಇತರ ಜನ ವಿಭಾಗಗಳ ಸಹಕಾರದಿಂದ ಈ ಧಾಳಿಯನ್ನು ಹಿಮ್ಮೆಟ್ಟಿಸಲು, ಪ್ರತಿರೋಧ ಒಡ್ಡಲು ಯಶಸ್ವಿಯಾಗಿರುವುದು ಸಮರಶೀಲ ಚಳುವಳಿ ಬೆಳೆಯುತ್ತಿರುವುದರ ಹೆಗ್ಗುರುತು. ಇದನ್ನು ಸಹಿಸದ ಆಳುವವರ್ಗ, ಪ್ರಭುತ್ವದ ವಿವಿಧ ಅಂಗಗಳ ಮೂಲಕ ಬೆಳೆಯುತ್ತಿರುವ ಚಳುವಳಿಯನ್ನು ತಡೆಯಲು ಪ್ರಯತ್ನಿಸುತ್ತದೆ.

ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಉದ್ದೇಶ

ಕೇರಳ ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಹಾಗೂ ನಿವೃತ್ತಿಯ ನಂತರ ಅಖಿಲ ಭಾರತ ವಕೀಲರ ಸಂಘ(AILU) ದ ಅಧ್ಯಕ್ಷರಾಗಿದ್ದ ಸುಬ್ರಹ್ಮಣ್ಯ ಪೋಟಿಯವರ ಪ್ರಕಾರ 'ಸಂವಿಧಾನದ ಪ್ರಕಾರ ಜನರಿಗೆ ಸಿಗಬೇಕಾದ ಸವಲತ್ತುಗಳು ಆಡಳಿತದ ಮೂಲಕ ಪಡೆಯಲು ಸಾಧ್ಯವಾಗದೆ ಹೋದಾಗ, ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ (PIL) ಮೂಲಕ ನ್ಯಾಯಾಲಯಗಳ ಮೂಲಕ ನ್ಯಾಯ ಪಡೆಯಲು ಪ್ರಯತ್ನಿಸುವುದು' ಇದರ ಉದ್ದೇಶ. (ಪೊಪ್ಯುಲರ್ ಜ್ಯೂರಿಸ್ಟ್) ಆದರೆ ಜಾಗೀಕರಣದ ಹಿನ್ನೆಲೆಯಲ್ಲಿ ಈ ಮೊಕದ್ದಮೆಗಳ ಉದ್ದೇಶ ವಿಫಲವಾಗುತ್ತಿದೆ. ಹಿಂದೆ ಸಿಗುತ್ತಿದ್ದ ಅಲ್ಪಸ್ವಲ್ಪ ಸಂವಿಧಾನ ಬದ್ಧ ಹಕ್ಕುಗಳನ್ನು ಜನಸಾಮಾನ್ಯರಿಗೆ ದಕ್ಕದಂತೆ ಮಾಡಲು ಪ್ರಯತ್ನಗಳು ಹೆಚ್ಚುತ್ತಿವೆ.

ಭರತಕುಮಾರ್ ಎನ್ನುವವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯಲ್ಲಿ ಕೇರಳ ಹೈಕೋರ್ಟಿನ ತೀರ್ಪನ್ನು ಎತ್ತಿಹಿಡಿದ ಸುಪ್ರೀಂಕೋರ್ಟ್ 'ಬಂದ್‌ನಿಂದ ಜನರ ಮೂಲಭೂತ ಹಕ್ಕುಗಳಿಗೆ ತೊಂದರೆ ಆಗತ್ತದೆ. ಅದರಿಂದ ರಾಷ್ಟ್ರೀಯ ನಷ್ಟ ಉಂಟಾಗುತ್ತಿದೆ' ಎಂದು ಹೇಳಿದೆ. ಅಂದರೆ ದುಡಿಯುವ ಕೈಗಳು ಕೆಲಸ ಮಾಡುವುದನ್ನು ನಿಲ್ಲಿಸಿದಾಗ, ಈ ದೇಶದ ಆರ್ಥಿಕ ಚಟುವಟಿಕೆ ಸ್ಥಗಿತಗೊಂಡು ನಷ್ಟವಾಗುತ್ತದೆ ಎಂದು ಒಪ್ಪಿಕೊಳ್ಳುವ ಆಡಳಿತಯಂತ್ರಗಳು ಅದೇ ದುಡಿಯುವ ಕೈಗಳಿಗೆ ನ್ಯಾಯಬದ್ಧ ವೇತನ, ಸವಲತ್ತುಗಳನ್ನು ನೀಡಬೇಕು ಎಂದು ಆದೇಶಿಸುವುದನ್ನು ಮರೆತಿವೆ. ಇದರಲ್ಲಿ ವರ್ಗ ಹಿತಾಸಕ್ತಿ ಅಡಗಿದೆ ಎಂದು ಖಂಡಿತವಾಗಿ ಹೇಳಬಹುದು.

ಜಾಗತೀಕರಣ ತನ್ನ ಪ್ರಭಾವವನ್ನು ನ್ಯಾಯಾಲಯಗಳ ಮೇಲೂ ಬೀರಿದೆ ಎಂದು ಹಲವಾರು ತಜ್ಞರು ಹೇಳುತ್ತಾರೆ. ಸುಪ್ರೀಂಕೋರ್ಟ್‌ನ ಹೆಸರಾಂತ ವಕೀಲರಾದ ಪ್ರಶಾಂತ ಭೂಷಣರವರು 'ಆರ್ಥಿಕ ಸುಧಾರಣೆಯ ಅವಧಿಯಲ್ಲಿ ಜನಸಾಮಾನ್ಯರ ಹಕ್ಕುಗಳ ಕುರಿತಾಗಿ ನ್ಯಾಯಾಲಯಗಳ ಕಾಳಜಿ ತೀವ್ರವಾಗಿ ಕುಂಠಿತಗೊಂಡಿರುವುದು ಕಾಕತಾಳೀಯ' ಎಂದಿದ್ದಾರೆ. ಇಂದಿನ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಗಳು ಖಾಸಗಿ ಹಿತಾಸಕ್ತಿಯ ಮೊಕದ್ದಮೆಗಳಾಗಿ ಪರಿವರ್ತಿತವಾಗುತ್ತಿವೆ ಎಂದಿದ್ದಾರೆ. (ಪೊಪ್ಯುಲರ್ ಬ್ಯಾರಿಸ್ಟ್ ಮಾರ್ಚ್-ಏಪ್ರಿಲ್ 2004)

ಜಾಗತೀಕರಣದ ಪ್ರಕ್ರಿಯೆ ಮುಂದುವರಿಯುತ್ತಿರುವಂತೆ; ದುಡಿಯುವವರು ಮತ್ತು ದುಡಿಸಿಳ್ಳುವವರ ನಡುವಿನ ಅಂತಹ ಹೆಚ್ಚುತ್ತಿರುವಂತೆ ವಿವಿಧ ರೂಪದ ದಬ್ಬಾಳಿಕೆಗಳು ಇನ್ನಷ್ಟು ಹೆಚ್ಚುತ್ತವೆ. ಆದರೆ ಈ ಧಾಳಿಯನ್ನು ಸಂಘಟಿತ ಕಾರ್ಮಿಕವರ್ಗ ತಡೆಯಲೇಬೇಕಾಗಿದೆ. ಇತರ ಜನವಿಭಾಗದ ಸಹಕಾರವೂ ಬೇಕಾಗಿದೆ. ಈ ಹಿನ್ನೆಲೆಯಲ್ಲಿ ಕಾರ್ಮಿಕ ಸಂಘಟನೆಗಳ ನೇತೃತ್ವದಲ್ಲಿ ನಡೆಯುವ ಸೆಪ್ಟೆಂಬರ್ 29 ರ ಅಖಿಲ ಭಾರತ ಮುಷ್ಕರ ಒಂದು ಪ್ರಮುಖ ಹೆಜ್ಜೆ.

■ ಬಾಲಕೃಷ್ಣ ಶೆಟ್ಟಿ

ಲಂಡನ್ ಸರಣಿ ಬಾಂಬ್ ದಾಳಿ - ಮುಂದೇನು?

ಶರತ್‌ಚಂದ್ರ

ಇತ್ತೀಚಿನ ಒಂದು ಸಮೀಕ್ಷೆ ಪ್ರಕಾರ ಲಂಡನ್ ಬಾಂಬ್ ದಾಳಿಗೂ ಇರಾಕ್-ಅತಿಕ್ರಮಣ ಸೇರಿದಂತೆ ಪಶ್ಚಿಮ ಏಷ್ಯಾದಲ್ಲಿ ಆಂಗ್ಲೋ-ಅಮೇರಿಕನ್ ದಮನ-ಅನ್ಯಾಯಗಳಿಗೂ ನೇರ ಸಂಬಂಧ ಇದೆಯೆಂದು ಶೇಕಡಾ 80ರಷ್ಟು ಬ್ರಿಟೀಷ್ ನಾಗರಿಕರಿಗೆ ಅನ್ನಿಸಿದೆ. ಇದು ಸಾಲದೆಂಬಂತೆ ಅಂತರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ರಾಯಲ್ ಇನ್‌ಸ್ಟಿಟ್ಯೂಟ್ ತಯಾರಿಸಿದ ತಜ್ಞರ ವರದಿಯಲ್ಲಿ ಇರಾಕ್ ಯುದ್ಧ ಬ್ರಿಟನ್‌ಗೆ ಭಯೋತ್ಪಾದನೆಯಿಂದ ಇರುವ ಅಪಾಯವನ್ನು ಹೆಚ್ಚಿಸಿದೆ ಎಂಬ ತೀರ್ಮಾನ ತಲುಪಿದ್ದಾರೆ.

ಲಂಡನ್‌ನಲ್ಲಿ ಜುಲೈ 7ರಂದು ಜಿ-8 ಶೃಂಗಸಭೆ ನಡೆಯುತ್ತಿರುವ ಸಮಯದಲ್ಲಿ ಸಾರ್ವಜನಿಕ (ಮೆಟ್ರೊ, ಬಸ್ಸು, ಟ್ರೈನುಗಳಲ್ಲಿ ನಡೆದ ಸರಣಿ ಬಾಂಬ್ ಸ್ಫೋಟ ಮಹತ್ವದ ತಿರುವು. ನೂರಾರು ಸಾವುನೋವುಗಳಿಗೆ ಕಾರಣವಾದ ಈ ಬರ್ಬರ ಧಾಳಿ ಬ್ರಿಟನ್ ಮತ್ತು ಇಡೀ ಜಗತ್ತಿನ ರಾಜಕೀಯ ಬೆಳವಣಿಗೆಗಳಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಈ ಭಯಾನಕ ಘಟನೆಯನ್ನು ಆಂಗ್ಲೋ-ಅಮೇರಿಕನ್ ಸಾಮ್ರಾಜ್ಯಶಾಹಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಧಾಳಿ ಹೆಚ್ಚಿಸಲಿಕ್ಕೆ ಬಳಸಲು ಪ್ರಯತ್ನಿಸುತ್ತಿವೆ. ಅದು ಸಫಲವಾಗುತ್ತದೆಯೇ? ಅಥವಾ ಯುದ್ಧ-ದಮನಗಳ ರೂಪದಲ್ಲಿರುವ ಸಾಮ್ರಾಜ್ಯಶಾಹಿ ಭಯೋತ್ಪಾದನೆ ಮತ್ತು 'ಜೆಹಾದಿ' ಭಯೋತ್ಪಾದನೆಯ ಮಧ್ಯೆ ಸಂಬಂಧಗಳ ಬಗ್ಗೆ ಜನತೆಗೆ ಅರಿವು ಹೆಚ್ಚುತ್ತದೆಯೇ? ಎಂಬ ಪ್ರಶ್ನೆಗಳು ಇದ್ದು ಬ್ರಿಟನ್‌ನ ಜನಾಭಿಪ್ರಾಯದಲ್ಲಿ ಸೆಪ್ಟೆಂಬರ್ 11ರ ಭೀಕರ ಕೃತ್ಯಗಳ ನಂತರ ಅಮೇರಿಕಾದ ಜನತೆಯಲ್ಲಿ ಕಂಡಂತೆ 'ಭಯೋತ್ಪಾದನೆಯ ವಿರುದ್ಧ ಯುದ್ಧ'ಕ್ಕೆ ಬೆಂಬಲ ಕಾಣಿಸಿಕೊಳ್ಳಬಹುದೇ? ಇಲ್ಲವೇ ಸ್ಪೈನ್‌ನ ಜನತೆಯಂತೆ ಇರಾಕ್ ಯುದ್ಧ ಮತ್ತು ಭಯೋತ್ಪಾದನೆ ನಡುವೆ ನೇರ ಸಂಬಂಧ ಕಂಡುಕೊಳ್ಳುತ್ತಾರೆಯೇ? ಬ್ರಿಟನ್‌ನ ಜನತೆ ಸ್ಪೈನ್‌ನ ಜನತೆಯ ಹಾದಿ ಹಿಡಿಯುವ ಎಲ್ಲಾ ಲಕ್ಷಣಗಳು ಕಂಡುಬಂದಿವೆ.

ಇತ್ತೀಚಿನ ಒಂದು ಸಮೀಕ್ಷೆ ಪ್ರಕಾರ ಲಂಡನ್ ಬಾಂಬ್ ದಾಳಿಗೂ ಇರಾಕ್-ಅತಿಕ್ರಮಣ ಸೇರಿದಂತೆ ಪಶ್ಚಿಮ ಏಷ್ಯಾದಲ್ಲಿ ಆಂಗ್ಲೋ-ಅಮೇರಿಕನ್ ದಮನ-ಅನ್ಯಾಯಗಳಿಗೂ ನೇರ ಸಂಬಂಧ ಇದೆಯೆಂದು ಶೇಕಡಾ 80ರಷ್ಟು ಬ್ರಿಟೀಷ್ ನಾಗರಿಕರಿಗೆ ಅನ್ನಿಸಿದೆ. ಇದು ಸಾಲದೆಂಬಂತೆ ಅಂತರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ರಾಯಲ್ ಇನ್‌ಸ್ಟಿಟ್ಯೂಟ್ ತಯಾರಿಸಿದ ತಜ್ಞರ ವರದಿಯಲ್ಲಿ ಇರಾಕ್ ಯುದ್ಧ ಬ್ರಿಟನ್‌ಗೆ ಭಯೋತ್ಪಾದನೆಯಿಂದ ಇರುವ ಅಪಾಯವನ್ನು ಹೆಚ್ಚಿಸಿದೆ ಎಂಬ ತೀರ್ಮಾನ ತಲುಪಿದ್ದಾರೆ. ಇರಾಕ್ ಯುದ್ಧ ಅಲ್‌ಖೈದಾದ 'ರಾಜಕೀಯ-ಮಿಲಿಟರಿ' ಆಕರ್ಷಣೆ ಹೆಚ್ಚಿಸಿ, ಬೆಂಗಲಿಗರ ಕಾರ್ಯಕರ್ತರ ಸಂಖ್ಯೆ ಹಿಗ್ಗಿದೆ. ಇದೇ ಸಮಯದಲ್ಲಿ ಬ್ರಿಟನ್‌ನ ಗೂಢಾಚಾರ ಸಂಸ್ಥೆ ಇರಾಕ್ ಯುದ್ಧದ ಮೊದಲು ತಯಾರಿಸಿದ ವರದಿಯಲ್ಲೇ ಇರಾಕ್-ಯುದ್ಧ ಬ್ರಿಟನ್‌ಗೆ ಭಯೋತ್ಪಾದನೆಯಿಂದ ಇರುವ ಅಪಾಯವನ್ನು ಹೆಚ್ಚಿಸಿದೆ ಎಂಬ ತೀರ್ಮಾನ ತಲುಪಿದ್ದಾರೆ. ಇರಾಕ್ ಯುದ್ಧ ಅಲ್-ಖೈದಾದ 'ರಾಜಕೀಯ - ಮಿಲಿಟರಿ' ಆಕರ್ಷಣೆ ಹೆಚ್ಚಿಸಿ, ಬೆಂಬಲಿಗರ-ಕಾರ್ಯಕರ್ತರ ಸಂಖ್ಯೆ ಹಿಗ್ಗಿದೆ. ಇದೇ ಸಮಯದಲ್ಲಿ ಬ್ರಿಟನ್‌ನ ಗೂಡಾಚಾರ ಸಂಸ್ಥೆ ಇರಾಕ್ ಯುದ್ಧದ ಮೊದಲೂ ತಯಾರಿಸಿದ



ವರದಿಯಲ್ಲೇ ಇರಾಕ್-ಯುದ್ಧ ಬ್ರಿಟನ್‌ಗೆ ಭಯೋತ್ಪಾದಕ ಬೆದರಿಕೆ ಹೆಚ್ಚಿಸುತ್ತದೆ. ಸದ್ದಾಂ ಹುಸೇನ್ ಸರ್ಕಾರ ಉರುಳಿಸಿದರೆ, ಆ ನಂತರ ಅರಾಜಕತೆಯಲ್ಲಿ ಅಣ್ವಸ್ತ್ರ-ರಾಸಾಯನಿಕ ಅಸ್ತ್ರಗಳು ಭಯೋತ್ಪಾದಕರ ಕೈಗೆ ಸಿಗುವ ಸಾಧ್ಯತೆ ಇದೆ. ಅಲ್ಲದೆ ಅಮೆರಿಕ ಇರಾಕ್-ಯುದ್ಧಕ್ಕೆ ಕೊಡುತ್ತಿರುವ ಕಾರಣಗಳೆಲ್ಲ ಬೊಗಳೆ. ಅದನ್ನು ನಂಬಬಾರದು ಎಂದು ಹೇಳಿತ್ತು. ಇವೆಲ್ಲ ಬ್ರಿಟನ್ ಜನತೆ ಬುಶ್-ಬ್ಲೇರ್ ಗ್ಯಾಂಗ್‌ನ 'ಭಯೋತ್ಪಾದನೆಯ ಮೇಲೆ ಯುದ್ಧ', ಭಯೋತ್ಪಾದನೆಯನ್ನು ಭೀಕರವಾಗಿ ಹೆಚ್ಚಿಸಿ ನಮ್ಮ ಮನೆಯಂಗಳಕ್ಕೆ ತಂದಿದೆ. ಇರಾಕ್ ಆಕ್ರಮಣ ತೆರವು ಮಾಡದೆ, ಪ್ಯಾಲೆಸ್ಟೈನ್ ಸಮಸ್ಯೆ ಪರಿಹರಿಸದೆ, ತೈಲಕ್ಕಾಗಿ ಪಶ್ಚಿಮ ಏಶ್ಯಾದಲ್ಲಿ ನಡೆಯುವ ಎಲ್ಲಾ ಕಿತಾಪತಿಗಳನ್ನು ನಿಲ್ಲಿಸದೆ- ಬೇರೆ ಯಾವುದೇ ಪರಿಹಾರವಿಲ್ಲ ಎಂಬ ತೀರ್ಮಾನಕ್ಕೆ ಜನತೆ ತಲುಪಹತ್ತಿದ್ದಾರೆ.

ಎರಡನೇ ಸರಣಿ ಸ್ಫೋಟದ(ವಿಫಲವಾದರೂ)



ಪ್ರಯತ್ನ, ಪೋಲೀಸರಿಂದ ನಿರಪರಾಧಿ ಬ್ರೆಜಿಲಿಯನ್ ಒಬ್ಬನ ಅಮಾನುಷ ಕೊಲೆ - 'ಉತ್ತಮ ಬೇಹುಗಾರಿಕೆ' ಮತ್ತು 'ತೀವ್ರ ಕ್ರಮ'ಗಳಿಂದ ಭಯೋತ್ಪಾದನೆ ನಿಗ್ರಹಿಸಲು ಸಾಧ್ಯ- ಎಂಬ ಭರವಸೆಯನ್ನು ಬ್ರಿಟನ್ ಜನತೆ ಕಳೆದುಕೊಂಡಿದೆ.

ಇದು ಬ್ರಿಟನ್‌ನಲ್ಲಿ ಪ್ರಬಲವಾಗಿದ್ದ (ಮತ್ತು ಬಹುಸಂಖ್ಯಾತ ಜನತೆಯ ಪ್ರಜ್ಞಾಪೂರ್ವಕ ಬೆಂಬಲ ಇದ್ದ) ಪ್ರಬಲ ಯುದ್ಧ - ವಿರೋಧಿ ಚಳುವಳಿಯ ಫಲ. ಜುಲೈ 7ರ ಲಂಡನ್ ಬಾಂಬ್ ದಾಳಿಯಿಂದ ಈ ಚಳುವಳಿ ನಿಶ್ಶಸ್ತ್ರವಾಗಿಲ್ಲ. ದಂಗಾಗಿಲ್ಲ.

ಬ್ರಿಟನ್ ಜನತೆಗೆ ಆ ರೀತಿ ನೋಡಿದರೆ 'ಮನೆಯಂಗಳದಲ್ಲಿ ಭಯೋತ್ಪಾದನೆ' ಹೊಸತಲ್ಲ. ಉತ್ತರ ಐರಿಷ್ ಹೋರಾಟದ ಕೊನೆ ಹಂತದಲ್ಲಿ ಬ್ರಿಟನ್ ಒಳಗೆ ತೀವ್ರತರ ಭಯೋತ್ಪಾದಕ ಧಾಳಿಗಳು ನಡೆದವು. ಅವರ ವಿರುದ್ಧ ಬ್ರಿಟನ್ ಸರ್ಕಾರ ಎಲ್ಲಾ ರೀತಿಯ ದಮನಕಾರಿ ಕೃತ್ಯ, ಬೇಹುಗಾರಿಕೆ- ಮಿಲಿಟರಿ ಬಲ ಎಲ್ಲ ಬಳಸಿತು. ಆದರೆ ಅವೆಲ್ಲ ನಿಷ್ಫಲವಾಯಿತು. ಕೊನೆಗೂ ಸಮಸ್ಯೆ ಪರಿಹಾರವಾದದ್ದು ರಾಜಕೀಯ ಮಾತುಕತೆಗಳಿಂದ, ತಕ್ಕ ರಾಜಕೀಯ ಪರಿಹಾರ ಜಾರಿ ಮಾಡಿದ್ದರಿಂದ. ಇದು ಬ್ರಿಟನ್‌ನ ಜನತೆಗೆ ಗೊತ್ತಿದೆ.

ಎಲ್ಲಾ ಭಯೋತ್ಪಾದಕರು ವಿದೇಶಿಯರು (ಪಾಕಿಸ್ತಾನಿಯರು). ಆದ್ದರಿಂದ ಈ ಭಯೋತ್ಪಾದನೆ 'ಆಮದು' ಆದ್ದು. ಎರಡನೇ ವಿಫಲ ದಾಳಿಗಳಲ್ಲಿ ಬಳಸಿದ 'ಬಕೆಟ್' ಇಂಡಿಯಾದಲ್ಲಿ ತಯಾರಾದ್ದು. ಭಯೋತ್ಪಾದಕರು ಪಾಕಿಸ್ತಾನದ ಮದ್ರಾಸಗಳಲ್ಲಿ ತರಬೇತು ಪಡೆದದ್ದು. ಇತ್ಯಾದಿಗಳಿಂದ ಬ್ರಿಟನ್ ಸರ್ಕಾರದ ವಿದೇಶ ನೀತಿಗೂ ಭಯೋತ್ಪಾದನೆಯ ಹೆಚ್ಚಳಕ್ಕೂ ಸಂಬಂಧ ಇಲ್ಲ ಎಂದು ತೋರಿಸುವ ಹಾಸ್ಯಾಸ್ಪದ ಪ್ರಯತ್ನಗಳನ್ನು ಜನ ತಿರಸ್ಕರಿಸುತ್ತಿದ್ದಾರೆ.

ಇತ್ತೀಚೆಗೆ ಬ್ರಿಟನ್‌ನಲ್ಲಿ ಸೌದಿ ಅರೇಬಿಯಾದ ರಾಯಭಾರಿ ಮತ್ತು ಪಾಕಿಸ್ತಾನದ ಅಧ್ಯಕ್ಷ ಮುಷರಫರ. ಕೆಲವು ಹೇಳಿಕೆಗಳು ಬ್ರಿಟನ್ ಸರ್ಕಾರದ 'ಅಪ್ರಾಮಣಿಕತೆ'ಯನ್ನು ಟೀಕಿಸಿ ನಗೆಪಾಟಲಾಗಿಸಿದೆ. ಜಗತ್ತಿನ ಎಲ್ಲಾ ದೇಶಗಳ ವಿರುದ್ಧ ಹೋರಾಡುವ ವಿರೋಧಿಗಳಿಗೆ (ಆ ದೇಶಗಳ ಪ್ರಕಾರ ಅವರು ಭಯೋತ್ಪಾದಕರು) ಬ್ರಿಟನ್ ಆಶ್ರಯ ಕೊಟ್ಟಿತ್ತು. ಅವರ ವಿರುದ್ಧ ಕಾರ್ಯಾಚರಣೆ ತೆಗೆದುಕೊಳ್ಳಲು ನಿರಾಕರಿಸಿತ್ತು. ಈಗ ತಮ್ಮ ನೆಲದಲ್ಲೇ ಹುಟ್ಟಿದ ಜನ ಭಯೋತ್ಪಾದನೆ ನಡೆಸಿದಾಗ ಬೇರೆ ದೇಶಗಳ ಮೇಲೆ ಆಪಾದನೆ ಹೊರಿಸುವುದು ಸರಿಯಲ್ಲ ಎಂದು ಖಾರವಾಗಿ ಹೇಳಿದ್ದಾರೆ. (ಹಿಂದೆ ಸೌದಿ ಅರೇಬಿಯಾದ ಗೂಢಚಾರ ಸಂಸ್ಥೆಯ ಮುಖ್ಯಸ್ಥನಾಗಿದ್ದ ಈತ ಬ್ರಿಟಿಷ್ ಸರ್ಕಾರದ ಜತೆ ಸೇರಿ 'ಜೆಹಾದಿ ಜಾಲ'ವನ್ನು ಎಲ್ಲಾ ಇಸ್ಲಾಮಿಕ್ ದೇಶಗಳಲ್ಲಿ ಆರಂಭಿಸಿದ 'ಅನುಭವ' ಇದ್ದ ವ್ಯಕ್ತಿ. ಆ ಬಗ್ಗೆ ಬಾಯಿಬಿಟ್ಟು ಹೇಳದಿದ್ದರೂ ಅದು ಅವರ ಮನಸ್ಸಿನಲ್ಲಿತ್ತು!) ಮುಷರಫ್ ಸಹ ಭಯೋತ್ಪಾದಕರ ಪಾಲಕರು ಪಾಕಿಸ್ತಾನದಿಂದ ಬಂದ ಒಂದೇ ಕಾರಣಕ್ಕೆ, ತಮ್ಮ ದೇಶವನ್ನು ದೂಷಿಸುವುದು ಸಲ್ಲ ಎಂದು ಮರು ಟೀಕಿಸಿದ್ದಾರೆ. ಭಯೋತ್ಪಾದಕರು ಬ್ರಿಟನನಲ್ಲೆ ಹುಟ್ಟಿ ಬೆಳೆದವರು. ಉತ್ತಮ ನಾಗರಿಕರಾಗಿದ್ದ ಅವರನ್ನು 'ಭಯೋತ್ಪಾದಕ'ರನ್ನಾಗಿಸಿದ್ದು ಬ್ರಿಟಿಷ್ ಸರ್ಕಾರದ ಮುಸ್ಲಿಂ ನಾಗರಿಕರು ಮತ್ತು ದೇಶಗಳ ವಿರುದ್ಧದ - ನೀತಿಗಳು ಎಂದು ಮಂಗಳಾರತಿ ಎತ್ತಿದ್ದಾರೆ.

ಸಾಲದೆಂಬಂತೆ ಅತ್ಯಂತ ಅನಿರೀಕ್ಷಿತ ಜಾಗದಿಂದ ಬ್ಲೇರ್‌ಗೆ ಕುತ್ತು ಬಂದಿದೆ. ಲಂಡನ್ ಸ್ಫೋಟಗಳ ನಂತರ ಜಿ-8 ಶೃಂಗಸಭೆಯಲ್ಲಿ ಬ್ರಿಟಿಷ್ ಸರ್ಕಾರ - ಜನತೆ ಜತೆ ಸೌಹಾರ್ದತೆ ಘೋಷಿಸಿದ ಬುಶ್, ತಮ್ಮ ದೇಶಕ್ಕೆ ಹೋದ ಕೂಡಲೇ ಬೇರೆ ಸೌಹಾರ್ದ ಕಾರ್ಯಾಚರಣೆ ಕೈಗೊಂಡಿದ್ದಾರೆ. ಲಂಡನ್ ಅಮೆರಿಕದ ಸೈನಿಕರಿಗೆ ಅತ್ಯಂತ 'ಅಪಾಯಕಾರಿ' ಪ್ರದೇಶ. ಲಂಡನ್ ಅಥವಾ ಬ್ರಿಟನ್‌ಗೆ ಹೋಗುವ ಮೊದಲು ಅಮೆರಿಕದ ಸೈನಿಕರು ವಿಶೇಷ ಅನುಮತಿ ಪಡೆಯಬೇಕು ಎಂಬ ಸುತ್ತೋಲೆಯನ್ನು ಅಮೆರಿಕದ ರಕ್ಷಣಾ ಇಲಾಖೆ ಪ್ರಕಟಣೆ ಹೊರಡಿಸಿದೆ. ಇರಾಕ್ ಆಕ್ರಮಣದಲ್ಲಿ ಯುದ್ಧದಲ್ಲಿ ಭಾಗವಹಿಸಿದರು, ಬ್ರಿಟನ್‌ನ್ನು ಇಷ್ಟು 'ಅಪಾಯಕಾರಿ' ಪ್ರದೇಶವಾಗಿ ಮಾರ್ಪಡಿಸಿದೆ ಎಂಬುದಕ್ಕೆ ಇನ್ನೂ ಪುರಾವೆ ಬೇಕೆ? ಎಂದು ಯುದ್ಧ-ವಿರೋಧಿ ಚಳುವಳಿ ವ್ಯಾಪಕವಾಗಿ ಪ್ರಚಾರ ಮಾಡುತ್ತಿದೆ. ಇರಾಕ್‌ನಿಂದ ಬ್ರಿಟಿಷ್ ಪಡೆಗಳನ್ನು ವಾಪಸು ಪಡೆಯಲು ಜನರ ಆಗ್ರಹ ದಿನೇ ದಿನೇ ಹೆಚ್ಚುತ್ತಿದೆ. ಬ್ಲೇರ್ ತನ್ನ ಇರಾಕ್ ಯುದ್ಧದ ಅಪರಾಧಗಳಿಗೆ 'ಪ್ರಾಯಶ್ಚಿತ್ತ'ವಾಗಿ ಪ್ರಧಾನಿ ಪಟ್ಟ ಬಿಡಬೇಕಾದೀತು. ಬ್ರಿಟಿಷ್ ಪಡೆಗಳನ್ನು ವಾಪಸು ಕರೆಸಿಕೊಳ್ಳಬೇಕಾದೀತು ಎನ್ನುವ ದಿನಗಳು ದೂರವಿಲ್ಲ.

ಅಮೆರಿಕದ ಕಂಪನಿಗಳು ಚೀನಾದ ತೆಕ್ಕೆಗೆ

ಅಮೆರಿಕದ ಕೆಲವು ಪ್ರಮುಖ ಕಂಪನಿಗಳು ಚೀನಾದ ಕಂಪನಿಗಳ ತೆಕ್ಕೆಗೆ ಬೀಳಲಾರಂಭಿಸಿವೆ. ಚೀನಾದ ಸಾರ್ವಜನಿಕ ಕ್ಷೇತ್ರದ ಚೀನಾ ನೇಶನಲ್ ಆಫ್‌ಶೋರ್ ಆಯಿಲ್ ಕಂಪನಿ (ಸಿ.ಎನ್.ಒ.ಒ.ಸಿ.) ಅಮೆರಿಕದ ತೈಲ ಕಂಪನಿ ಯುನೊಕೋಲ್(ಯು.ಎನ್.ಒ.ಸಿ.ಒ.ಎಲ್.)ನ್ನು ಖರೀದಿಸಲು ಮುಂದಾಗಿದೆ. ಅಮೆರಿಕದ ಇನ್ನೊಂದು ತೈಲ ಕಂಪನಿ ಚೆವ್ರೋನ್ ಯುನೋಕೊಲ್‌ಗೆ ಕಟ್ಟಿದ ಬೆಲೆ (16.4 ಶತಕೋಟಿ ಡಾಲರು) ಮೀರಿಸಿ, 18.5 ಶತಕೋಟಿ ಡಾಲರ್ ಬೆಲೆ ಕಟ್ಟಿದೆ. (ಅಮೇರಿಕದ ವಿದೇಶಾಂಗ ಕಾರ್ಯಕರ್ತೆ ರೈಸ್ ಚೆವ್ರೋನ್‌ನ ಡೆರೆಕ್ಟರ್ ಆಗಿದ್ದರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು) ಯುನೊಕೊಲ್ ಜಗತ್ತಿನಾದ್ಯಂತ (ಅಮೆರಿಕ, ಮೆಕ್ಸಿಕೊ, ಕೊಲ್ಲಿ, ಇಂಡೋನೇಶ್ಯಾ, ಥ್ಯಾಲೆಂಡ್, ಕಾಸಿಯಸ್ ಸಮುದ್ರ) ತೈಲ ನಿಕ್ಷೇಪಗಳ ಒಡೆತನ ಮತ್ತು ವಿಶಿಷ್ಟ ತಂತ್ರಜ್ಞಾನ ಹೊಂದಿದೆ.

ಯುನೊಕೊಲ್ ಖರೀದಿಯ ಈ ಪ್ರಯತ್ನ, ಅಮೆರಿಕನ್ ಸರ್ಕಾರ, ಉದ್ಯಮ ಮತ್ತು ಜಾಗತೀಕರಣದ 'ವಕೀಲ'ರನ್ನು ಇಕ್ಕಟ್ಟಿನ ಪರಿಸ್ಥಿತಿಗೆ ನೂಕಿಸಿದೆ. ಒಂದು ವಿಭಾಗ ಬಂಡವಾಳಶಾಹಿ ವ್ಯವಸ್ಥೆ, ಜಾಗತೀಕರಣದ ನೀತಿಗಳ ಪ್ರಕಾರ ಯುನೊಕೊಲ್ ಚೀನಾ ಕಂಪನಿಯ ಪಾಲಾಗುವುದು. ಯಾವುದೇ ಅಡ್ಡಿ ಆತಂಕ ಒಡ್ಡಬಾರದು. ರಶ್ಯ, ಚೀನಾ ಮತ್ತು ಇತರೆಡೆ ವಿದೇಶಿ ಬಂಡವಾಳಕ್ಕೆ ಮುಕ್ತ ಅವಕಾಶ ಕೊಡಬೇಕು ಎನ್ನುವ ಆಗ್ರಹಕ್ಕೆ ಇದು ತುತ್ತಾಗಬಹುದು ಎಂದಿದ್ದಾರೆ. ಇನ್ನೂ ಕೆಲವರು ಇದು ಅಮೆರಿಕದ 'ರಾಷ್ಟ್ರೀಯ ಭದ್ರತೆ', 'ಶಕ್ತಿಮೂಲಗಳ ಭದ್ರತೆ', 'ಶಕ್ತಿಮೂಲಗಳ ಉತ್ಪಾದನೆ' ಉದ್ಯೋಗಗಳ ಪ್ರಶ್ನೆ. ಇದನ್ನು ಬರೀ 'ವಿದೇಶಿ ಬಂಡವಾಳ ಹೂಡಿಕೆ' ಪ್ರಶ್ನೆಯಾಗಿ ನೋಡುವುದು ಸರಿಯಲ್ಲ. ಅಮೆರಿಕನ್ ಸರ್ಕಾರದ ಶಕ್ತಿ ಮೂಲಗಳ ಕಾರ್ಯದರ್ಶಿ ಸರ್ಕಾರ ಯುನೊಕೋಲ್ ಬಗ್ಗೆ 'ತೀವ್ರ ವಿಮರ್ಶೆ' ಕೈಗೊಳ್ಳುವುದು ಎಂದು ಹೇಳಿದ್ದಾರೆ. ಯಾವುದೇ ನಿರ್ಧಾರ ಕೈಗೊಂಡರೂ ಅಮೆರಿಕದ ಸರ್ಕಾರದ ನೀತಿಗಳಿಗೆ 'ಯುನೊಕೊಲ್' ತೀವ್ರ ಸವಾಲು ಒಡ್ಡಲಿದೆ. ಇದಲ್ಲದೆ ಚೀನಾದ ಇತರ ತೈಲ ಕಂಪನಿಗಳು ಹಲವು ವಿದೇಶಿ ತೈಲ ಕಂಪನಿಗಳ ಜತೆ (ವೆನೆಜುವೆಲಾ, ಇರಾನ್, ಬ್ರೆಜಿಲ್, ರಶ್ಯಾ, ಇರಾಕ್, ಕಝಖಿಸ್ತಾನ ಮುಂತಾದ) ಬಂಡವಾಳ ಹೂಡಿಕೆ, ಜಂಟಿ ಕಾರ್ಯಾಚರಣೆ ಒಪ್ಪಂದಗಳನ್ನುಮಾಡಿಕೊಂಡಿದೆ. ಅಮೆರಿಕನ್ ತೈಲ ಏಕಸ್ವಾಮ್ಯಕ್ಕೆ ಸವಾಲು ಹಾಕಿದೆ.

ಚೀನಾದ ಇತರ ಹಲವು ಕಂಪನಿಗಳು ಅಮೆರಿಕದ ದೊಡ್ಡ ಕಂಪನಿಗಳನ್ನು ಖರೀದಿಸುತ್ತಿವೆ. ಮನೆ ಬಳಕೆ ಸರಕುಗಳ (ವಾಷಿಂಗ್ ಮಶೀನ್, ಫ್ರಿಜ್ ಇತ್ಯಾದಿ) ತಯಾರಕ ಕಂಪನಿ ಹೇಯರ್ ಇದೇ ರೀತಿ ಅಮೆರಿಕದ ಮೂರನೇ ದೊಡ್ಡ ಮನೆ ಬಳಕೆ ಸರಕುಗಳ ತಯಾರಕ ಕಂಪನಿ ಮೇಟಾಗ್‌ನ್ನು 1.28 ಶತಕೋಟಿ ಡಾಲರುಗಳಿಗೆ ಖರೀದಿಸಲು ಮುಂದಾಗಿದೆ. ಕಳೆದ ವರ್ಷವೇ ಚೀನಾದ ಕಂಪ್ಯೂಟರ್ ತಯಾರಕ ಕಂಪನಿ ಲೆನೊವೊ, ಐಬಿಎಂನ ಪರ್ಸನಲ್ ಕಂಪ್ಯೂಟರ್ (ಪಿ.ಸಿ) ತಯಾರಕ ವಿಭಾಗವನ್ನು 1.25 ಶತಕೋಟಿ ಡಾಲರುಗಳಿಗೆ ಖರೀದಿಸಿದೆ. ಅದರ ನಂತರ ಲೆನೊವೊ ಜಗತ್ತಿನ ಮೂರನೇ ದೊಡ್ಡ ಕಂಪ್ಯೂಟರ್ ತಯಾರಕ ಕಂಪನಿ (ಡೆಲ್ ಮತ್ತು ಹೆಚ್.ಪಿ.ಯ ನಂತರ) ಫ್ರಾನ್ಸ್‌ನ ದೊಡ್ಡ ಟಿವಿ ಕಂಪನಿ ಥಾಮ್ಸನ್ ಖರೀದಿಸಿ, ಚೀನಾದ ಟಿ.ಸಿ.ಎಲ್. ಈಗ ಜಗತ್ತಿನ ಅತಿ ದೊಡ್ಡ ಟಿವಿ ತಯಾರಕ ಕಂಪನಿಯಾಗಿದೆ.

ಜಗತ್ತಿನ ಆರ್ಥಿಕದಲ್ಲಿ ಚೀನಿ ಕಂಪನಿಗಳ ಪ್ರಭಾವ ಏರುತ್ತಿದ್ದು, 'ಆರ್ಥಿಕ ಸೂಪರ್ ಪವರ್' ಅಮೆರಿಕಕ್ಕೆ ತೀವ್ರ ಸವಾಲಾಗಿದೆ. ಬಹುಧ್ರುವೀಯ ಜಗತ್ತಿನತ್ತ ಇದು ಪ್ರಮುಖ ಹೆಜ್ಜೆಯಾಗಲಿದೆ.



‘ಪೋಲಿಕಿಟ್ಟಿ’ ನಾಟಕ

ಇತ್ತಿಚೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ 4 ದಿನಗಳ ಮಕ್ಕಳ ನಾಟಕೋತ್ಸವವೊಂದು ನಡೆಯಿತು. ಮಕ್ಕಳ ಯಕ್ಷಗಾನ - ಬ್ಯಾಲೆ - ಮಕ್ಕಳ ನಾಟಕಗಳನ್ನೊಳಗೊಂಡ ಈ ಉತ್ಸವ ಸಾಕಷ್ಟು ಜನರನ್ನು ತನ್ನತ್ತ ಸೆಳೆಯುವಲ್ಲಿ ಯಶಸ್ವಿಯಾಗಿದೆ. ರಾಷ್ಟ್ರೀಯ ನಾಟಕ ಶಾಲೆ - ಪ್ರಾದೇಶಿಕ ಸಂಪನ್ಮೂಲ ಕೇಂದ್ರಗಳು ಜಂಟಿಯಾಗಿ ಸಂಘಟಿಸಿದ್ದ ಈ ಉತ್ಸವದಲ್ಲಿ ನಾಟಕ-ಕಾರ್ಯಕ್ರಮಗಳ ಬಗೆಗೆ ಪಾಲ್ಗೊಂಡ ಮಕ್ಕಳ ಅನಿಸಿಕೆ ಏನೆಂದು ಕಂಡುಕೊಳ್ಳುವ ಪ್ರಯತ್ನದ ಭಾಗವಾಗಿ ಟಿ.ಪಿ.ಕೈಲಾಸಂ ರವರ ‘ಪೋಲಿ ಕಿಟ್ಟಿ’ ನಾಟಕದ ಬಗೆಗೆ ಪುಟಾಣಿ ಆರ್.ಮಾಲಾಶ್ರೀ ಅನಿಸಿಕೆಯನ್ನು ಇಲ್ಲಿ ನೀಡಲಾಗಿದೆ.

ಜುಲೈ 14ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಒಂದು ನಾಟಕ ನಡೆಯಿತು. ಆ ನಾಟಕದ ಹೆಸರು ‘ಪೋಲಿಕಿಟ್ಟಿ’. ಈ ನಾಟಕವನ್ನು ಬರೆದವರು ಟಿ.ಪಿ.ಕೈಲಾಸಂ.

ಈ ನಾಟಕದಲ್ಲಿ ಹಾಡುಗಳು ಮತ್ತು ಕುಣಿತ ಬಹಳ ಚನ್ನಾಗಿತ್ತು. ಅವು ಯಾವುದೆಂದರೆ ‘ನಾನು ಕೋಕೋಕೋಕೋ ಕೋಳಿ ಕೆ ರಂಗ’

ಸ್ಕೌಟ್ ಎಂದರೆ ‘ನಿಜವಾಗಿ ಸಮಾಜಕ್ಕೆ ಉಪಕಾರ ಮಾಡುವುದಕ್ಕಾಗಿ ಇರುವ ಸಂಸ್ಥೆ’. ಕಿಟ್ಟಿ ಬಡವರ ಮಗ. ಬಡತನದಿಂದಾಗಿ ಅವನು ಶಾಲೆಯನ್ನು ಮಧ್ಯದಲ್ಲಿಯೇ ಬಿಟ್ಟ. ಶಾಲೆಯ ಮಕ್ಕಳು ಕಿಟ್ಟಿಯನ್ನು ನೋಡಿದರೆ ಹೆದರಿ ನಡುಗುತ್ತಿದ್ದರು. ಶಾಲೆ ಮಕ್ಕಳು ಕಿಟ್ಟಿಯನ್ನು ಪೋಲಿ, ರೌಡಿ ಎಂದು ಕರೆಯುತ್ತಿದ್ದರು. ಅವನು ಶ್ರೀಮಂತರ ಮಕ್ಕಳ ಜೇಬಿನಲ್ಲಿ ಇರುತ್ತಿದ್ದ ‘ದಂಬರೋಟು’ ಇತರೆ ತಿಂಡಿ ಕಿತ್ತುಕೊಂಡು ತಿನ್ನುತ್ತಿದ್ದ. ಅವನು ಸ್ಕೌಟ್ ಸಂಸ್ಥೆಗೆ ಸೇರಿದ ಕಾರಣ ‘ಸ್ಕೌಟ್ ರ್‍ಯಾಲಿ’ ಮುಗಿದ ನಂತರ ಸಿಹಿತಿಂಡಿಗಳನ್ನು ಕೊಡುತ್ತಾರೆ ಎಂಬ ಆಸೆಯಿಂದ ಸೇರಿದ.

ಕಿಟ್ಟಿಯ ಸ್ನೇಹ ಬೆಳಸಿಕೊಂಡು ಅವನ ಕಾಟವನ್ನು ತಪ್ಪಿಸಿಕೊಳ್ಳಲು ಅವನಿಗೆ ತಿಂಡಿ ಆಸೆಯನ್ನು ತೋರಿಸಿ ಅವನನ್ನು ಶ್ರೀಮಂತರ ಮಕ್ಕಳು ಸ್ಕೌಟಿಗೆ ಸೇರಿಸಿದರು.

ಸ್ಕೌಟ್‌ನಲ್ಲಿ ಪ್ರತಿದಿನ ಮಕ್ಕಳನ್ನು ಶಿಕ್ಷಕರು ಕೇಳುವುದೇನೆಂದರೆ Good deed (ಉಪಕಾರ) ಏನು ಮಾಡಿದ್ದೀರೆಂದು. ಆಗ ಸ್ಕೌಟ್ ಮಕ್ಕಳು ಹೇಳುತ್ತಾರೆ ಏನೆಂದರೆ ಅಪ್ಪನಿಗೆ ಪತ್ರಿಕೆ ತಂದುಕೊಟ್ಟೆ, ಅಮ್ಮನಿಗೆ ಹಾಲು ತಂದುಕೊಟ್ಟೆ, ಔಷದಿ ತಂದುಕೊಟ್ಟೆ ಇತರೆ.....’. ಬಡ ಮುದುಕಿ ಸೌದೆ ಹೊರಲಾರದೆ ಕಷ್ಟಪಡುತ್ತಿದ್ದಾಗ ಕಿಟ್ಟಿ ಅದನ್ನು ನೋಡಿ ಸಹಾಯ ಮಾಡಿದ. ಆದ್ದರಿಂದ ಸ್ಕೌಟ್‌ಗೆ ಬರಲುತಡವಾಯಿತು. ಆದರೆ ಸ್ಕೌಟನಲ್ಲಿ ತಾನು ಮಾಡಿದ ಉಪಕಾರದ ಬಗ್ಗೆ ಅವನು ಹೇಳಿಕೊಳ್ಳಲಿಲ್ಲ. ಏಕೆಂದರೆ ಅವನಿಗೆ ತಾನು ಮಾಡಿದ್ದು ಉಪಕಾರ (good deed)ಎಂಬುದೇ ಗೊತ್ತಿರಲಿಲ್ಲ.

‘ತಾನು ಮಾಡಿದ್ದು ಉಪಕಾರ ಎಂಬುದೇ ಅವನಿಗೆ ಗೊತ್ತಿರಲಿಲ್ಲ’

ಒಮ್ಮೆ ಊರಿನಲ್ಲಿ ಮನೆಯೊಂದಕ್ಕೆ ಬೆಂಕಿ ಬೀಳುತ್ತದೆ. ಆಗ ಒಬ್ಬ ಸ್ಕೌಟ್ ವಿದ್ಯಾರ್ಥಿ ಮೂವರನ್ನು ಬೆಂಕಿಯಿಂದ ಪಾರು ಮಾಡುತ್ತಾನೆ. ಆಗ ಪಾರಾದ ಅವರು ಒಳಗಡೆ ಇರುವ ಹಣದ ಗಂಟನ್ನು ಸಹ ತರಬೇಕೆಂದು ವಿನಂತಿಸುತ್ತಾರೆ. ಇದಕ್ಕಾಗಿ ಹುಡುಗ ಒಳಗಿ ನುಗ್ಗಿ ಅಪಾಯದಲ್ಲಿ ಸಿಕ್ಕಿಬೀಳುತ್ತಾನೆ. ಆಗ ಸ್ಕೌಟ್ ಮಾಸ್ಟರ್ ಹಾಗೂ ಸ್ಕೌಟ್ ಮಕ್ಕಳು ಅಲ್ಲಿಗೆ ಬರುತ್ತಾರೆ. ಆಗ ಮಕ್ಕಳು ಸ್ನೇಹಿತನನ್ನು ರಕ್ಷಿಸಲು ಸಿದ್ದರಾಗುತ್ತಾರೆ. ಆಗ ಸ್ಕೌಟ್ ಮಾಸ್ಟರ್ ಹೇಳುತ್ತಾರೆ. ‘ಮಕ್ಕಳೇ ಒಂದು ಜೀವ ಉಳಿಸಲು ಹತ್ತು ಜೀವ ಬಲಿಕೊಡುವುದನ್ನು ನಾನು ನೋಡಲಾರೆ’ ಎಂದು ಅಡ್ಡ ಹಾಕುತ್ತಾರೆ. ಆಗ ಕಿಟ್ಟಿ ಬಂದು ಯಾರ ಮಾತನ್ನು ಲೆಕ್ಕಿಸದೇ ಒಳಗೆ ನುಗ್ಗಿ ಅವನನ್ನು ಕಾಪಾಡುತ್ತಾನೆ.

ಆ ಘಟನೆ ನಡೆದ ಜಾಗಕ್ಕೆ ಮೈಸೂರು ಮಹಾರಾಜರು ಬರುತ್ತಾರೆ. ಮಹಾರಾಜರಿಗೆ ಕಿಟ್ಟಿ ಶಾಲೆ ಬಿಟ್ಟಿರುವ ಹುಡುಗ ಎಂದು ಗೊತ್ತಾಯಿತು. ಮಹಾರಾಜರು ಶಾಲೆ ಬಿಟ್ಟಿದ್ದಕ್ಕೆ ಕಾರಣ ಏನು ಎಂದು ಕೇಳುತ್ತಾರೆ. ಆಗ ಕಿಟ್ಟಿ ಹೇಳುತ್ತಾನೆ. ಬಡ ಕುಟುಂಬದಿಂದ ಬಂದ ಕಿಟ್ಟಿ ಹರಿದ ಬಟ್ಟೆ ಹಾಕಿಕೊಂಡು ಹಸಿದುಕೊಂಡು ಸಂಕಟದಲ್ಲಿ ಕುಳಿತಿದ್ದಾಗ, ಗಣಿತ ಪಾಠದಲ್ಲಿನ ಸಾವಿರ ಸೇಬುಗಳನ್ನು ಹಂಚುವುದರ ಬಗ್ಗೆ, ನೂರು ಪೌಂಡ್ ಬ್ರೆಡ್ಡನ್ನು ಹಂಚುವ ಬಗ್ಗೆ ಲೆಕ್ಕ ಕೇಳುತ್ತಾರೆ. ಹಾಗೂ ಹತ್ತು ಸಾವಿರ ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಇಟ್ಟಾಗ ಶೇಕಡ _____ ಬಡ್ಡಿಯಂತೆ ಎಷ್ಟು ಹಣ ಬರುತ್ತದೆ ಎಂದು ಕೇಳುತ್ತಾರೆ.

ಆಂಗ್ಲ ಮಾಸ್ಟರ್ ಬರುತ್ತಾರೆ. ಅವರ ಪ್ರಕಾರ CUT - ಗೆ ಕಟ್ ಅಂತೆ, NUT - ಗೆ ನಟ್ ಅಂತೆ, BUT - ಗೆ ಬಟ್ ಅಂತೆ. ಆದರೆ PUT - ಗೆ ಪಟ್ ಅನ್ನಬಾರದಂತೆ, ಪುಟ್ ಅನ್ನಬೇಕಂತೆ!

ಭೂಗೋಳ ಪಾಠದಲ್ಲಿ ಕಿಟ್ಟಿ ಎಂದೂ ಕೇಳದ ದೂರದೇಶದ ಸಸ್ಯ ವರ್ಗಗಳ ಬಗ್ಗೆ ಕೇಳುತ್ತಾರೆ. ಇದರಿಂದ ಕಿಟ್ಟಿಗೆ ಶಾಲೆ ಬಗ್ಗೆ ಬೇಸರ ಉಂಟಾಗುತ್ತದೆ, ಸಿಟ್ಟು ಬರುತ್ತದೆ. ಆದ್ದರಿಂದ ಅವನು ಶಾಲೆ ಬಿಟ್ಟಿರುತ್ತಾನೆ.

ಈ ಮಧ್ಯ ನಾಟಕದಲ್ಲಿ ಕಿಟ್ಟಿಯು ಮಹಿಳೆಯರ ಬಗ್ಗೆ ಅವರು ಕೆಲಸಕ್ಕೆ ಬಾರದವರು, ಕೆಲಸಕ್ಕೆ ಸಾಮರ್ಥ್ಯವಿಲ್ಲದವರು ಎಂದೆಲ್ಲಾ ಹೀಯಾಳಿಸುತ್ತಾನೆ. ಈ ವಿಷಯ ನನಗೆ ಇಷ್ಟವಾಗಲಿಲ್ಲ.

ಅಪ್ಪ-ಅಮ್ಮನ ಸಹಾಯದೊಂದಿಗೆ

ಆರ್.ಮಾಲಾಶ್ರೀ, 7ನೇ ತರಗತಿ

‘ಏಕಲವ್ಯನೇ ಗುರುಕೋ ಅಂಗುಟಾ ದಿಖಾಯಾ’

ವಿವಾದವೇನು?

ಇತ್ತೀಚೆಗೆ ಮಂಗಳೂರು ವಿ.ವಿ.ಯಲ್ಲಿನ ಪ್ರಥಮ ಬಿ.ಎಸ್ಸಿ.ಯ ಹಿಂದಿ ಪಠ್ಯ ‘ಪ್ರಕರ್ಣಿಕಾ’ ದ ‘ಏಕಲವ್ಯನೇ ಗುರುಕೋ ಅಂಗುಟಾ ದಿಖಾಯಾ’ ಎಂಬ ನೀತಿಯುಕ್ತ ಕಥೆಯನ್ನು ಕೆಲವು ಪೂರ್ವಾಗ್ರಹ ಪೀಡಿತರು ವಿವಾದವನ್ನಾಗಿಸುತ್ತಿರುವುದು ದುರದೃಷ್ಟಕರ. ಪರ-ವಿರೋಧದ ನಡುವೆಯೂ ವಿಶ್ವವಿದ್ಯಾಲಯವು ಕಥೆಯನ್ನು ಪಠ್ಯದಲ್ಲಿಯೇ ಉಳಿಸಿಕೊಂಡಿದೆ. ಹರಿಶಂಕರ್ ಪರಸಾಯಿಯುವರ ‘ಆಯ್ದ ಕಥೆ’ಗಳಿಂದ ಆರಿಸಿದ ‘ಏಕಲವ್ಯನೇ ಗುರುಕೋ ಅಂಗುಟಾ ದಿಖಾಯಾ’ ಕಥೆಯಲ್ಲಿ ವಿವಾದವಾಗುವ ಪ್ರಶ್ನೆ ಇದೆಯೇ? ಈ ಕಥೆಯ ಮೇಲೊಂದು ಪಕ್ಷಿ ನೋಟ.

ಅರ್ಜುನನನ್ನು ಜಗದೇಕ ವೀರ-ಧನುರ್ದರನನ್ನಾಗಿಸುವ ಉದ್ದೇಶದಿಂದ ಏಕಲವ್ಯನ ಬಲಗೈ ಹೆಬ್ಬೆರಳನ್ನು ಗುರುದಕ್ಷಿಣೆಯಾಗಿ ಪಡೆದ ದ್ರೋಣಾಚಾರ್ಯರ ಕಥೆ ನಮಗೆಲ್ಲಾ ಪರಿಚಿತ.

ಹಿಂದಿ ಸಾಹಿತ್ಯದ ಮೇರು ಶಿಖರವೆಂದೇ ಪ್ರಖ್ಯಾತಿ ಪಡೆದಿದ್ದ ಹರಿಶಂಕರ್ ಪರಸಾಯಿಯವರ ಕಥೆಯಲ್ಲಿ ದ್ರೋಣಾಚಾರ್ಯ ವಿ.ವಿ.ಯೊಂದರ ರಾಜ್ಯಶಾಸ್ತ್ರ ಪ್ರಾಧ್ಯಾಪಕರು. ಅವರಿಗೆ ಇಬ್ಬರು ಶಿಷ್ಯಂದಿರು. ಅವರ ಹೆಸರು ಅರ್ಜುನದಾಸ ಹಾಗೂ ಏಕಲವ್ಯದಾಸ. ವಿದ್ಯೆಯು ಓದುವುದರಿಂದಲ್ಲ ಬದಲಿಗೆ ಗುರುವಿನ ಕೃಪೆಯಿಂದ ಬರುತ್ತದೆ ಎಂದುಅರ್ಜುನದಾಸನು ತಿಳಿದು ಇದಕ್ಕಾಗಿ ಆತ ತನ್ನಲ್ಲಿದ್ದ ಶ್ರೀಮಂತಿಕೆಯ ನೆರವಿನಿಂದ ದ್ರೋಣಾಚಾರ್ಯರಿಗೆ ಒಳ್ಳೆಯ ಮನೆಯನ್ನು ಕೊಡಿಸಿದ್ದರಿಂದ ಹಿಡಿದು ಗುರುವಿನ ಹೆಂಡತಿ, ಮಕ್ಕಳ ಅಗತ್ಯತೆಗಳನ್ನೂ ಪೂರೈಸುತ್ತಿದ್ದ. ಏಕಲವ್ಯದಾಸ ಬಡವ. ಬಡತನದಲ್ಲಿಯೇ ಬೆಳೆದ ಆತ ಶ್ರಮಪಟ್ಟು ರಾತ್ರಿ ಹಗಲು ಅಭ್ಯಾಸ ಮಾಡುತ್ತಾನೆ. ತನ್ನ ಓದಿನ ಕಡೆಗೆ ಗಮನ ಹರಿಸುತ್ತಾನೆ. ಏಕಲವ್ಯನಿಗೂ ತನ್ನ ಗುರುವಿನ ಬಗ್ಗೆ ಅಪಾರ ಭಕ್ತಿಯಿತ್ತು.

ಒಮ್ಮೆ ಅರ್ಜುನದಾಸನು ತನ್ನ ಗುರು ದ್ರೋಣಾಚಾರ್ಯರಿಗೆ ‘ನಾನು ಕ್ಲಾಸಿನಲ್ಲಿ ಫಸ್ಟ್ ರ್‍ಯಾಂಕ್ ಬರಬೇಕು. ಇದಕ್ಕೆ ನೀವು ಸಹಕರಿಸಬೇಕು” ಎಂದನು. ಅರ್ಜುನನ ಮಾತನ್ನು ದ್ರೋಣಾಚಾರ್ಯರು ಅಲ್ಲಗಳೆಯುವಂತಿರಲಿಲ್ಲ.

ಏಕೆಂದರೆ ಅವನ ಕೃಪೆಯಿಂದಲೇ ಅವರು ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿದ್ದರು. ಚಿಂತಾಕ್ರಾಂತರಾದ ಆಚಾರ್ಯರಿಗೆ ಏಕಲವ್ಯನಿರುವ ತನಕ ಅರ್ಜುನ ತರಗತಿಯಲ್ಲಿ ಪ್ರಥಮ ಸ್ಥಾನಕ್ಕೆ ಬರಲಾರ ಎಂಬುವುದು ಬಹಳ ಚೆನ್ನಾಗಿ ತಿಳಿದಿತ್ತು. ಏಕಲವ್ಯನು ತನ್ನ ಮೇಲೆ ಅಪಾರ ಭಕ್ತಿಯನ್ನು ಇಟ್ಟುಕೊಂಡಿದ್ದನೆಂದೂ ತಿಳಿದಿತ್ತು. ಇದಕ್ಕಾಗಿ ಉಪಾಯ ಹುಡುಕಿದ ದ್ರೋಣಾಚಾರ್ಯರು ಏಕಲವ್ಯನ ಗುಡಿಸಲಿಗೆ ಹೊರಟು ‘ತನ್ನ ಮೇಲೆ ನಿನಗೆ ಗುರು ಭಕ್ತಿಯಿದ್ದರೆ ಗುರುದಕ್ಷಿಣೆಯಾಗಿ ನಿನ್ನ ಹೆಬ್ಬರಳನ್ನು ಕತ್ತರಿಸಿ ಕೊಡು’ ಎಂದರು. ಆದರೆ ಏಕಲವ್ಯನು ತನಗೆ ಎರಡೂ ಕೈಗಳಿಂದ ಬರೆಯಲು ಸಾಧ್ಯವೆಂದು ತಿಳಿಸಿದನು. ಎರಡೂ ಕೈಗಳ ಹೆಬ್ಬೆರಳನ್ನು ತುಂಡರಿಸಿ ಕೊಡುವಂತೆ ಹೇಳಿದಾಗ - ಗುರುಗಳ ಮಾತನ್ನು ಏಕಲವ್ಯನು ತಿರಸ್ಕರಿಸಿದನು. ಗುರುಗಳ ವರ್ತನೆಯನ್ನು ನೋಡಿ ಏಕಲವ್ಯ ನಿರಾಶನಾದನು.

ನೊಂದ ಬಡ ಏಕಲವ್ಯ ತನ್ನ ಗುರುಗಳಾದ ದ್ರೋಣಾಚಾರ್ಯರು ಮಾಡಿದ್ದನ್ನೆಲ್ಲ ಉಪಕುಲಪತಿಗಳಿಗೆ ರಿಪೋರ್ಟ್ ಮಾಡಿಸಿದನು. ಈ ಕಾರಣ ಉಪಕುಲಪತಿಗಳು ಉತ್ತರ ಪತ್ರಿಕೆಗಳನ್ನು ದ್ರೋಣಾಚಾರ್ಯರಿಗೆ ನೀಡುವ ಬದಲಾಗಿ ಬೇರೊಬ್ಬರಿಗೆ ಮೌಲ್ಯಮಾಪನ ಮಾಡಲು ಕೊಟ್ಟರು. ಈ ಮೂಲಕ ಏಕಲವ್ಯನು ಕಷ್ಟಪಟ್ಟು ಓದಿದ್ದನ್ನು ಸಾಕ್ಷಾತ್ಕರಿಸಲು ಸಾಧ್ಯವಾಯಿತು. ಇದು ಪರಸಾಯಿಯವರ ಕಥೆ.

ಈ ಕಥೆಯು ನಿಜವಾಗಿಯೂ ಯಾವುದಾದರೂ ಧರ್ಮಕ್ಕೆ ಸಂಬಂಧಿಸಿದ ಕಥೆಯೇ? ನಿಜವಾಗಿಯೂ ಈ ಕಥೆಯು ವಿದ್ಯಾರ್ಥಿಗಳನ್ನು ಮೋಸಮಾಡುವ ‘ಸ್ವಾರ್ಥಿ ಗುರುಗಳ ವಿರುದ್ಧ ವಿದ್ಯಾರ್ಥಿಗಳ ಸಂಘರ್ಷ’ದ ನೀತಿಯನ್ನು ತಿಳಿಸುತ್ತದೆ ವಿನಃ ಇಲ್ಲಿ ಯಾವುದೇ ಧರ್ಮಕ್ಕೆ ಅಪಮಾನವಾಗುವ ಪ್ರಶ್ನೆಯೇ ಇಲ್ಲ. ಭಾರತೀಯ ಸಂಸ್ಕೃತಿ-ಪರಂಪರೆಯಲ್ಲಿ ಗುರುವಿಗೆ ದೇವರ ಸ್ಥಾನಮಾನವಿದೆ. ಆದರೂ ವಿದ್ಯಾರ್ಥಿಗಳಿಗೆ ದ್ರೋಹವೆಸಗುವ ಗುರುಗಳನ್ನು ಭಾರತೀಯ ಸಮಾಜವೇ ತಿರಸ್ಕರಿಸುತ್ತದೆ. ಹೀಗಾಗಿ ಆಧುನಿಕ ಏಕಲವ್ಯ ತನ್ನ ಪ್ರತಿಭೆಯನ್ನು ಉಳಿಸಲು ಹಾಗೂ ತನ್ನ ಗುರುಗಳನ್ನು ಸರಿಮಾರ್ಗದಲ್ಲಿ ತರಲು ಎಚ್ಚರಿಕೆಯ ಕ್ರಮಗಳನ್ನು ಅನುಸರಿಸಬೇಕಾದದ್ದು ತಪ್ಪೇ?

ಈ ಕಥೆಯಲ್ಲಿ ತಿಳಿದು ಬರುವ ಇನ್ನೊಂದು ವಿಚಾರವೇನೆಂದರೆ ಅದು ವಿಡಂಬನಾತ್ಮಕ ಸಾಹಿತ್ಯ ಹಾಗೂ ಮಾನವ ಹಕ್ಕು ಸಂರಕ್ಷಣೆಯ ವಾದ. ದೇಶದ 7800 ಕಾಲೇಜುಗಳಲ್ಲಿ ಈ ಪಾಠವು ಅಧ್ಯಯನದಲ್ಲಿದ್ದು ಯಾವ ಮೂಲೆಯಿಂದಲೂ ಈ ನೀತಿ ಕಥೆಗೆ ಆಕ್ಷೇಪ ಬಂದಿಲ್ಲವೆನ್ನುವುದೂ ಸತ್ಯ ವಿಚಾರವಾಗಿದೆ. ಈ ಪಾಠವು ತಮ್ಮನ್ನು ಧರ್ಮಾಭಿಮಾನಿಗಳೆಂದು ಘೋಷಿಸಿಕೊಳ್ಳುವವರು ಆಕ್ಷೇಪಿಸುವಂತೆ ‘ಗುರು’ ಎಂಬುವವರನ್ನೆಲ್ಲ ಅಪಮಾನಿಸುತ್ತದೆಯೇ? ಅಥವಾ ದಲಿತ ಏಕಲವ್ಯ ದಲಿತನಾಗಿಯೇ ಉಳಿಯಬೇಕೆಂದು ಬಗೆವ ಪುರೋಹಿತ ಶಾಹಿಗಳ, ಶ್ರೀಮಂತರ ಹುನ್ನಾರವನ್ನು ಬಯಲಿಗೆಳೆದು ಸಾಮಾಜಿಕ ನ್ಯಾಯವನ್ನು ಒದಗಿಸುವ ಸಂದೇಶವನ್ನು ಕೊಡುತ್ತಿದೆಯೇ? ಆಲೋಚಿಸಿ !

■ **ವಿನಾಯಕ ಜಿ.ಕೆ.ಗಂಗೊಳ್ಳಿ**

ಗಿನ್ನೆಸ್ ದಾಖಲೆಗೆ ‘ಶಾಂತಿ’

ಒಂದೇ ಒಂದು ಪಾತ್ರವಿರುವ ಚಲನಚಿತ್ರ ಎಂಬ ವಿಶಿಷ್ಟತೆಯ ಮೂಲಕ ಗಮನ ಸೆಳೆದಿದ್ದ, ಖ್ಯಾತ ಸಾಹಿತಿ ಬರಗೂರು ರಾಮಚಂದ್ರಪ್ಪನವರು ನಿರ್ದೇಶಿಸಿದ ‘ಶಾಂತಿ’ ಚಿತ್ರವು ಅದೇ ಕಾರಣಕ್ಕಾಗಿ ಈಗ ‘ಗಿನ್ನೆಸ್’ ದಾಖಲೆಯಲ್ಲಿ ಸೇರ್ಪಡೆಗೊಂಡಿದೆ ಎಂದು ವರದಿಯಾಗಿದೆ.

ಒಂದೇ ಪಾತ್ರದ ಸಿನಿಮಾ ಅನ್ನುವುದಕ್ಕಿಂತಲೂ, ಒಂದೇ ಪಾತ್ರದ ಮೂಲಕ ಒಂದು ಮಹತ್ವದ ಸಾಮಾಜಿಕ ಸಂದೇಶವನ್ನು ಸಾರುವ ಚಿತ್ರ ಇದು ಎಂಬ ಕಾರಣಕ್ಕೆ ಈ ಅಂಶ ಮುಖ್ಯವಾದದ್ದು ಎಂದು ಬರಗೂರು ರಾಮಚಂದ್ರಪ್ಪನವರು ಸ್ಪಷ್ಟಪಡಿಸಿದ್ದಾರೆ. ವಾಸ್ತವಿಕವಾಗಿ ಪರಿಗಣಿಸಬೇಕಾದ ಮುಖ್ಯವಾದ ಅಂಶ ಇದೇ ಆಗಿದೆ.

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 22236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor : S.Y.GURUSHANTH